ಸಾಹಿತ್ಯ ದಾಸೋಹ – 227

ಸಂಚಿಕೆ 51 – ಆಗಸ್ಟ್ 2024

14.07.2024ರ ದಾಸೋಹದ ಬರಹಗಳ ಸಂಕಲನ



"ಯಕ್ಷಗಾನ ಅಂದು ಇಂದು" – ಡಾ.ಆನಂದರಾಮ ಉಪಾಧ್ಯ

ನಾ ಕಂಡಂತೆ ಕಂಸಾಳೆ

– ಸ್ನೇಹ ಶಶಿಧರ್



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ . . .

ಆತ್ಮೀಯರೆ,

ಸಾಹಿತ್ಯ ದಾಸೋಹ – ರಜತ ವರ್ಷದ ಸಂಭ್ರಮ

ನಮ್ಮ ಸಾಹಿತ್ಯ ದಾಸೋಹ ಕಾರ್ಯಕ್ರಮಕ್ಕೆ ಈ ಬಾರಿ ರಜತ ವರ್ಷದ ಸಂಭ್ರಮ. 25 ವರ್ಷಗಳ ಹಿಂದೆ ಅಂದರೆ 15, ಆಗಸ್ಟ್ 1999ರ ಸ್ವಾತಂತ್ರ್ಯ ದಿನಾಚರಣೆಯ ಶುಭ ದಿನದಂದು ನಮ್ಮ ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ವಿಠ್ಠಲ ಇಜೇರಿಯವರ ಮನೆಯಲ್ಲಿ ಮೊದಲ ಸಾಹಿತ್ಯ ದಾಸೋಹ ನಡೆಯಿತು. ಅಲ್ಲಿಂದೀಚೆಗೆ 25 ವರ್ಷಗಳಲ್ಲಿ ನಡೆದ ಒಟ್ಟು 228 ಸಾಹಿತ್ಯ ದಾಸೋಹಗಳಲ್ಲಿ ನಮ್ಮ ನೂರಾರು ಸದಸ್ಯರು ಪ್ರಸ್ತುತಪಡಿಸಿದ ವೈವಿಧ್ಯಮಯ ಸ್ವರಚಿತ ಬರಹಗಳ ಸಂಖ್ಯೆ 5000ಕ್ಕೂ ಹೆಚ್ಚು. ಹಾಗೆಯೇ ದಾಸೋಹದ ಮೂಲಕವೇ ತಮ್ಮ ಸಾಹಿತ್ಯಾರಾಧನೆಯನ್ನು ಆರಂಭಿಸಿ ಕ್ರಮೇಣ ಬೆಳಕಿಗೆ ಬಂದು ತಮ್ಮದೇ ಸ್ವಂತ ಸಾಹಿತ್ಯ ಕೃತಿಗಳನ್ನು ಲೋಕಾರ್ಪಣೆ ಮಾಡಿದವರ ಸಂಖ್ಯೆಯೂ ಬಹು ದೊಡ್ಡದು.

ಆರಂಭದಲ್ಲಿ ಸುಮಾರು 17 ವರ್ಷಗಳ ಕಾಲ ವಿವಿಧ ದಾಸೋಹಿಗಳ ಮನೆಯಲ್ಲಿ ನಡೆಯುತ್ತಿದ್ದ ದಾಸೋಹವು ಕ್ರಮೇಣ ಸಭಾಂಗಣಕ್ಕೆ ಸ್ಥಳಾಂತರಗೊಂಡಿತು. ಕೊರೋನಾ ಕಾಲಘಟ್ಟದಲ್ಲಿ ಅನಿವಾರ್ಯವಾಗಿ ಗೂಗಲ್ ತಂತ್ರಜ್ಞಾನವನ್ನು ಬಳಸಿ ಆನ್ಲೈನ್ ಮೂಲಕ ದಾಸೋಹ ನಡೆಸುವ ಪದ್ಧತಿಯನ್ನು ಒಪ್ಪಿಕೊಳ್ಳಲಾಯಿತು. ಈಗ ಇಂತಹ ಆನ್ಲೈನ್ ಕಾರ್ಯಕ್ರಮಗಳು ಜಗತ್ತಿನಾದ್ಯಂತ ವಿಸ್ತರಿಸಿದ್ದು, ಜಗತ್ತಿನ ಯಾವುದೇ ಮೂಲೆಯಲ್ಲಿರಲಿ, ವಾಹನದಲ್ಲಿರಲಿ, ಕಚೇರಿ, ಮನೆಗೆಲಸದಲ್ಲಿ ನಿರತರಾಗಿರಲಿ, ದಾಸೋಹದಲ್ಲಿ ತಪ್ಪದೇ ಪಾಲ್ಗೊಳ್ಳಲು ಬಹಳಷ್ಟು ದಾಸೋಹಿಗಳಿಗೆ ಅನುಕೂಲವಾಯಿತು. ಇದಕ್ಕಾಗಿ ಅಂತರ್ಜಾಲ ಮುಖೇನ ನಡೆಸುವ ಕಾರ್ಯಕ್ರಮಗಳಿಗೆಂದೇ ಮೀಸಲಾದ 'ನೋಡಿಯೋ ಸಾಹಿತ್ಯ ದಾಸೋಹ' ಎಂಬ ವಾಟ್ಸಾಪ್ ವೇದಿಕೆಯನ್ನು ತೆರೆಯಲಾಯಿತು. ಅನೇಕ ಹೊಸ ಸದಸ್ಯರು ನಮ್ಮ ದಾಸೋಹ ಸಮೂಹಕ್ಕೆ ಸೇರ್ಪಡೆಯಾದರು. ನಮ್ಮದೇ ಪ್ರತ್ಯೇಕ ಜಾಲತಾಣ, ಯುಟ್ಯೂಬ್ ಹಾಗೂ ದಾಸೋಹದ ಬರಹಗಳನ್ನೊಳಗೊಂಡ "ಸಾಹಿತ್ಯ ದಾಸೋಹ" ಪಿಡಿಎಫ್ ಮಾಸಿಕ ಸಂಚಿಕೆಯ ಪ್ರಕಟಣೆ, "ತಿಂಗಳ ಬೆಳಕು" ಹಾಗೂ ವಿವಿಧ ಅಭಿಯಾನಗಳ ಆಯೋಜನೆ – ಹೀಗೆ ವೇದಿಕೆಯು ಸಹ ಹೊಸ ಅನ್ವೇಷಣೆಗಳಿಗೆ ತೆರೆದುಕೊಂಡಿತು.

ನಮ್ಮ ಸಾಹಿತ್ಯ ದಾಸೋಹವನ್ನು ಇಪ್ಪತ್ತೈದು ವರ್ಷಗಳ ಕಾಲ ಮುನ್ನಡೆಸಿಕೊಂಡು ಬರುವಲ್ಲಿ ಸಹಕರಿಸಿದ ಎಲ್ಲ ದಾಸೋಹಿಗಳಿಗೂ, ವೀಕ್ಷಕ ಸದಸ್ಯರಿಗೂ, ತಂತ್ರಜ್ಞಾನದಲ್ಲಿ ಸಹಕರಿಸಿದ ಎಲ್ಲ ಗೆಳೆಯ ಗೆಳತಿಯರಿಗೂ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು. ತಮ್ಮೆಲ್ಲರ ಸಹಕಾರ ಹೀಗೆಯೇ ಮುಂದುವರಿಯಲಿ ಎಂಬುದೇ ನಮ್ಮ ಆಶಯ. ಸದ್ಯದಲ್ಲಿಯೇ ರಜತ ವರ್ಷದ ದಾಸೋಹದ ಕಾರ್ಯಕ್ರಮ ನಡೆಸುವುದರ ಬಗ್ಗೆ ಗಮನಹರಿಸಿದ್ದೇವೆ. ವಿವರಗಳನ್ನು ಕ್ರಮೇಣ ತಿಳಿಸಲಾಗುವುದು.

ಈ ಬಾರಿಯ ನಮ್ಮ 'ತಿಂಗಳ ಬೆಳಕು–6' ಕಾರ್ಯಕ್ರಮದಲ್ಲಿ 'ಯಕ್ಷಗಾನ ಅಂದು–ಇಂದು' ವಿಷಯದ ಬಗ್ಗೆ ಮಾತನಾಡಿದ ಡಾ. ಆನಂದರಾಮ ಉಪಾಧ್ಯರು ಯಕ್ಷಗಾನದ ಇತಿಹಾಸ, ವರ್ತಮಾನ ಹಾಗೂ ವಿವಿಧ ಆಯಾಮಗಳ ಬಗ್ಗೆ ಹಲವು ಕುತೂಹಲಕಾರಿ ವಿಷಯಗಳನ್ನು ಮಂಡಿಸಿದರು. ನಮ್ಮ ವೇದಿಕೆಯು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸ್ಥಾಪಿಸಿರುವ ಪ್ರಾ..ಎಚ್ಚೆಸ್ಕೆ ಸ್ಮಾರಕ ದತ್ತಿಯ ವಾರ್ಷಿಕ ಉಪನ್ಯಾಸ ನೀಡಿದ ಡಾ.ಜೆ.ಎನ್.ಜಗನ್ನಾಥ್ ಅವರು 'ಬ್ಯಾಂಕುಗಳಲ್ಲಿ ಖಜಾನೆ ವ್ಯವಸ್ಥಾಪನೆ' ಎಂಬ ವಿಷಯದ ಬಗ್ಗೆ ನಿರರ್ಗಳವಾಗಿ ಮಾತನಾಡಿದರು.

ಇದೀಗ 05.08.2024ರಂದು 'ಪುಟ್ಟ ಕತೆಗಳ ಶ್ರಾವಣ' ಅಭಿಯಾನ ಆರಂಭವಾಗಿದೆ. ನಾಲ್ಕಾರು ದಿನಗಳಲ್ಲಿಯೇ ನಮ್ಮ ಸದಸ್ಯರಿಂದ ಪುಟ್ಟ ಕತೆಗಳ ಮಹಾಪೂರವೇ ಹರಿದುಬರುತ್ತಿರುವುದು ಸಂತಸದ ಸಂಗತಿ. 02.09.2024ರವರೆಗೆ ನಡೆಯಲಿರುವ ಈ ಅಭಿಯಾನದಲ್ಲಿ ಹೆಚ್ಚು ಸಂಖ್ಯೆಯ ಸದಸ್ಯರು ಪಾಲ್ಗೊಂಡು ತಮ್ಮ ಸ್ವರಚಿತ ಪುಟ್ಟ ಕತೆಗಳನ್ನು ಬರೆಯಬೇಕಾಗಿ ವಿನಂತಿ. ವಿವರಗಳನ್ನು ಈ ಸಂಚಿಕೆಯಲ್ಲಿ ನೀಡಲಾಗಿದೆ.

ನಮ್ಮ ವೇದಿಕೆಯ ಸಾಹಿತ್ಯ ದಾಸೋಹ ಮತ್ತು ಇತರ ಎಲ್ಲಾ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಲು ಸಹಕರಿಸುತ್ತಿರುವ ಎಲ್ಲರಿಗೂ ವಂದನೆಗಳು.

ಸಂಚಾಲಕ ಸಮಿತಿ,
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ, ಬೆಂಗಳೂರು. 10.08.2024

ದಾಸೋಹದ ಪುಟಗಳಲ್ಲಿ . . .

ಮುಖಚಿತ್ರ: ಕೃಪೆ- ಕರ್ನಾಟಕ ಯಕ್ಷಗಾನ ಅಕಾಡೆಮಿಯ ಜಾಲತಾಣ ಮತ್ತು ಲೇಖಕಿ ಸ್ನೇಹ ಶಶಿಧರ್

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ಶ್ರಾವಣ ಕಥಾಪರ್ವ/ಆವೃತ್ತಿ ; ೦೨/೨೦೨೪

ಪುಟ್ಟಕಥೆಗಳ ಶ್ರಾವಣ ಅಭಿಯಾನ 2024

ಪ್ರೀತಿಯ ಗೆಳೆಯರೆ,

೨೦೨೩ರ ಶ್ರಾವಣ ಮಾಸವನ್ನು ನಾವು ಅತ್ಯಂತ ಯಶಸ್ವಿಯಾಗಿ ಆಚರಿಸಿದೆವು. ಸಣ್ಣಕತೆಗಳ ಶ್ರಾವಣ ಅಭಿಯಾನದಲ್ಲಿ ೫೭ ಕತೆಗಾರರು ಒಟ್ಟು ೧೫೭ ಕಥೆಗಳನ್ನು ಬರೆದರು. ಶ್ರಾವಣ ಕಥಾಸಂಕಲನವು ಮುದ್ರಣಕ್ಕೆ ಸಿದ್ದವಾಗುತ್ತಿದೆ.

೨೦೨೪ರ ಶ್ರಾವಣ ಮಾಸವು ಸೋಮವಾರ ೦೫/೦೮/೨೦೨೪ರಂದು ಆರಂಭವಾಗಿ ಸೋಮವಾರ ೦೨/೦೯/೨೦೨೪ ರಂದು ಕೊನೆಗೊಳ್ಳುತ್ತದೆ. ಈ ವರ್ಷದ ಅಭಿಯಾನ ಏನೆಂದು ಹಲವು ಗೆಳೆಯರು ಕೇಳುತ್ತಿದ್ದಾರೆ. ಸಂಚಾಲಕ ಸಮಿತಿಯು ಕ್ರೋಧಿ ಶ್ರಾವಣಕ್ಕೆ ವಿನೂತನ ಅಭಿಯಾನವನ್ನು ರೂಪಿಸಿದೆ. ಬನ್ನಿ, ಉತ್ಸಾಹದಿಂದ ಭಾಗವಹಿಸಿ. ಈ ಬಾರಿಯ ಶ್ರಾವಣದ ಅಭಿಯಾನವನ್ನು ಯಶಸ್ವಿಗೊಳಿಸಿ.

ಪುಟ್ಟಕಥೆಗಳ ಶ್ರಾವಣ ಅಭಿಯಾನ – ೨೦೨೪

ನಿಯಮಗಳು:

- ಅಭಿಯಾನವು ಆಗಸ್ಟ್ ೦೫ರಂದು ಆರಂಭವಾಗಿ ಸೆಪ್ಟೆಂಬರ್ ೦೨ರಂದು ಕೊನೆಗೊಳ್ಳುತ್ತದೆ. ಒಟ್ಟು ೨೯ ದಿನಗಳು.
- ಆಸಕ್ತ ಸದಸ್ಯರು ದಿನಕ್ಕೊಂದರಂತೆ ಕನಿಷ್ಠ ೧೦ ಸ್ವರಚಿತ ಪುಟ್ಟಕತೆಗಳನ್ನು ವೇದಿಕೆಯಲ್ಲಿ ಪ್ರಸ್ತುತಪಡಿಸಬೇಕು. ವಿಷಯ ಆಧುನಿಕವಾಗಿರಲಿ, ವೈವಿಧ್ಯತೆ ಇರಲಿ. ಕನಿಷ್ಠ ಒಂದು ಪತ್ತೇದಾರಿ, ವೈಜ್ಞಾನಿಕ, ಪರಿಸರ, ಮಕ್ಕಳ, ಸಾಮಾಜಿಕ ಕತೆಗಳು ಮೂಡಿಬರಲಿ.
- ಪುಟ್ಟಕತೆಯೆಂದರೆ ಕನಿಷ್ಠ ೧೫೦ ರಿಂದ ಗರಿಷ್ಠ ೨೫೦ ಪದಗಳಲ್ಲಿ ಮುಕ್ತಾಯವಾಗಬೇಕು.
- ಪಂಚತಂತ್ರ, ಈಸೋಪನ ನೀತಿ ಕತೆಗಳು, ದಾರ್ಶನಿಕರ, ಪುರಾಣಗಳ ದೃಷ್ಟಾಂತ ಕತೆಗಳು ಇತ್ಯಾದಿಗಳ ಮರುಪ್ರಸ್ತುತಿ ಬೇಡ. ಕಥೆಗಳು ನಿಮ್ಮದೇ ಆಗಿರಲಿ. ಸೃಜನಶೀಲತೆಯೇ ನಮ್ಮ ಆಧಾರ. ಕತೆಗಳು ನಿಮ್ಮ ಕಲ್ಪನೆಯಲ್ಲಿ ಮೂಡಿಬರಲಿ.
- ನಿಮ್ಮ ಕತೆಗಳನ್ನು ನೀವೇ ತಿದ್ದಿ ಸಂಗ್ರಹಿಸಿರಿ.
- ಪ್ರತಿದಿನವೂ ಒಂದರಂತೆ ೨೯ ಕಥೆಗಳನ್ನು ಪ್ರಸ್ತುತಪಡಿಸುವವರಿಗೆ ಪುಸ್ತಕ ಬಹುಮಾನ ಮತ್ತು ಪ್ರಶಸ್ತಿಪತ್ರವನ್ನು "ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ"ದ ವತಿಯಿಂದ ಮುಖಾಮುಖಿಯಾಗಿ ಹಮ್ಮಿಕೊಳ್ಳುವ "ಸಾಹಿತ್ಯ ದಾಸೋಹ" ದಲ್ಲಿ ನೀಡಲಾಗುವುದು.
- ಅಗತ್ಯವೆನಿದಾಗ ಸಂಚಾಲಕ ಸಮಿತಿಯು ಸೂಕ್ತ ನಿರ್ದೇಶನವನ್ನು ನೀಡುವುದು.

ಸದಸ್ಯರ ಒಪ್ಪಿಗೆಯನ್ನು ಪಡೆದು ಪುಟ್ಟಕಥೆಗಳ ಸಂಕಲನವನ್ನು ಹೊರತರಲು ವೇದಿಕೆಯು ಉತ್ಸುಕವಾಗಿದೆ. ಅಭಿಯಾನದಲ್ಲಿ ಭಾಗವಹಿಸುವ ಸದಸ್ಯರು ವೇದಿಕೆಯನ್ನು ಬೆಂಬಲಿಸಬೇಕು. ಈ ಕಾರ್ಯಕ್ಕೆ ಸೂಕ್ತ ಯೋಜನೆಯನ್ನು ರೂಪಿಸಲಾಗುವುದು.

ಹೆಚ್ಚಿನ ಸದಸ್ಯರು ಉತ್ಸಾಹದಿಂದ ಭಾಗವಹಿಸಬೇಕೆಂದು ಸಂಚಾಲಕ ಸಮಿತಿಯು ಮತ್ತೊಮ್ಮೆ ಪ್ರಾರ್ಥಿಸುತ್ತದೆ. ಕನಿಷ್ಠ ೧೦೦+ ಸದಸ್ಯರು ಸಾವಿರಕ್ಕೂ ಹೆಚ್ಚು ಕತೆಗಳನ್ನು ಸೃಷ್ಟಿಸಲಿ.

ಸಂಚಾಲಕ ಸಮಿತಿಯ ಪರವಾಗಿ,

ಬೆಂಶ್ರೀ ರವೀಂದ್ರ, ಬೆಂಗಳೂರು. *೧೪/೦೭/೨೦೨೪*

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ

ಸಾಹಿತ್ಯ ದಾಸೋಹ – 227


ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

14 ಜುಲೈ 2024ರ ಭಾನುವಾರದಂದು ಇಳಿ ಮಧ್ಯಾಹ್ನ 3.35ಕ್ಕೆ ಸರಿಯಾಗಿ ಜುಲೈ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಂಚಾಲಕ ಶ್ರೀ ಕೆ.ಎನ್.ಮಹಾಬಲ ಅವರ ಸಾರಥ್ಯದಲ್ಲಿ ಆರಂಭವಾಯಿತು. ಇದು 227ನೆಯ ದಾಸೋಹ ಕಾರ್ಯಕ್ರಮ.

ಆರಂಭದಲ್ಲಿ ಶ್ರೀಮತಿ ಸ್ನೇಹ ಶಶಿಧರ್ ಅವರು ಎಲ್ಲರನ್ನೂ ಆತ್ಮೀಯವಾಗಿ ಸ್ವಾಗತಿಸಿ, 227ನೆಯ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸಿರುವ ಶ್ರೀ ಸೀತಾರಾಮ ಕಟ್ಟಿ ಅವರ ಪರಿಚಯ ನೀಡಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಬೆಂ.ಶ್ರೀ. ರವೀಂದ್ರ ಅವರು ಪ್ರಾಸ್ತಾವಿಕ ಮಾತುಗಳನ್ನಾಡಿ,

- ಬರುವ ಶ್ರಾವಣ ಮಾಸವನ್ನು, ಹಿಂದಿನ ವರ್ಷದ ಶ್ರಾವಣ ಮಾಸದಲ್ಲಿ ನಡೆಸಿದ 'ಸಣ್ಣ ಕತೆಗಳ ಶ್ರಾವಣ' ಅಭಿಯಾನದ ಮಾದರಿಯಲ್ಲಿಯೇ ಈ ಬಾರಿ ಸಣ್ಣ ಕಥೆಗಳ ಬದಲಿಗೆ 150ರಿಂದ 200 ಪದಗಳ ಪುಟ್ಟ ಕತೆಗಳ ಬರಹದ ಅಭಿಯಾನಕ್ಕೆ ತಯಾರಾಗುವಂತೆ ಕರೆ ನೀಡಿದರು. ಕತೆ ಬರೆಯುವವರು ಕನಿಷ್ಟ ೧೦ ಕತೆಗಳನ್ನು ಅಥವಾ ಪ್ರತಿದಿನವೂ ಕತೆ ಬರೆಯಲು ಆಹ್ವಾನವಿತ್ತರು;
- ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ಪ್ರಾಚಾರ್ಯ ಎಚ್. ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ (ಎಚ್ಚೆಸ್ಕೆ) ಅವರ ನೆನಪಿನಲ್ಲಿ ಪ್ರತಿ ವರ್ಷವೂ ಏರ್ಪಡಿಸುತ್ತಿರುವ ದತ್ತಿ ಉಪನ್ಯಾಸದಲ್ಲಿ ಈ ಬಾರಿ 07.08.2024ರಂದು ಸಂಜೆ 6.00 ಗಂಟೆಗೆ ಡಾ. ಜಗನ್ನಾಥ. ಜೆ.ಎನ್. ಅವರು 'ಖಜಾನೆ ವ್ಯವಸ್ಥಾಪನೆ' ಕುರಿತು ಮಾತನಾಡಲಿದ್ದು, ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ಕರೆ ನೀಡಿದರು;
- 15ನೆಯ ಆಗಸ್ಟ್ 1999ರಂದು ಮೊದಲ ಬಾರಿಗೆ ನಡೆದ ನಮ್ಮ ಮಾಸಿಕ ಸಾಹಿತ್ಯ ದಾಸೋಹ ಸರಣಿಗೆ ಮುಂದಿನ ತಿಂಗಳು 25 ವರ್ಷಗಳು ತುಂಬಲಿದ್ದು, ಈ ಸಂತಸದ ಆಚರಣೆ ಹಾಗೂ 2023ರ 'ಸಣ್ಣ ಕತೆಗಳ ರಚನೆ ಅಭಿಯಾನ'ದಲ್ಲಿ ಸದಸ್ಯರು ರಚಿಸಿದ ಕತೆಗಳನ್ನೊಳಗೊಂಡ ಪುಸ್ತಕ ಬಿಡುಗಡೆಯನ್ನು ಆಗಸ್ಟ್ ಅಥವಾ ಸೆಪ್ಟೆಂಬರ್ ತಿಂಗಳಲ್ಲಿ ಆಯೋಜಿಸುವ ಕುರಿತು ಚಿಂತನೆ ನಡೆದಿದೆ ಎಂದು ತಿಳಿಸಿದರು.



ನಂತರ ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರು ಜೂನ್ 2024ರಲ್ಲಿ ನಡೆದ 226ನೆಯ ಸಾಹಿತ್ಯ ದಾಸೋಹದ ಪಿಡಿಎಫ್ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ತದನಂತರ ದಾಸೋಹದ ಪ್ರಸ್ತುತಿಗಳು ಆರಂಭವಾದವು. ಗೂಗಲ್ ಮೀಟ್ ಮೂಲಕ ನಡೆದ ದಾಸೋಹದಲ್ಲಿ ಒಟ್ಟು 21 ಜನ ಲೇಖಕರು ತಮ್ಮ ಬರಹಗಳ ಪ್ರಸ್ತುತಿಗಾಗಿ ಹೆಸರು ನೋಂದಾಯಿಸಿದ್ದು, ಆ ಪೈಕಿ 19 ಲೇಖಕರು ತಮ್ಮ ಸ್ವರಚಿತ ಬರಹಗಳನ್ನು ವಾಚಿಸಿದರು. ಒಂದೊಂದೂ ಲೇಖನವೂ ವಿಭಿನ್ನ, ಮಾಹಿತಿಪೂರ್ಣ ಮತ್ತು ಮೌಲಿಕವಾಗಿದ್ದವು.

ಎಲ್ಲರ ಪ್ರಸ್ತುತಿಗಳೂ ಮುಗಿದ ನಂತರ ಅಧ್ಯಕ್ಷರಾದ ಶ್ರೀ ಸೀತಾರಾಮ ಕಟ್ಟಿ ಅವರು ಪ್ರತಿಯೊಂದು ಬರಹವನ್ನೂ ವಿವರವಾಗಿ ವಿಶ್ಲೇಷಿಸಿ ಅವುಗಳಿಗೆ ಪರ್ಯಾಪ್ತ, ವಿಸ್ತರಿಸಿದ ಮಾಹಿತಿ ನೀಡುತ್ತಾ ವಿಮರ್ಶಾತ್ಮಕ ನುಡಿಗಳನ್ನು ಮಂಡಿಸಿ, ಅತ್ಯಂತ ಮಾದರಿಯಾದ ಅಧ್ಯಕ್ಷೀಯ ನಡೆಯನ್ನು ದಾಖಲಿಸಿದರು.

ಕೊನೆಯಲ್ಲಿ ಶ್ರೀಮತಿ ಸಿ.ಆರ್.ಕಮಲಾಕ್ಷಿ ಅವರು ಎಲ್ಲರಿಗೂ ವಂದನೆಗಳನ್ನು ಅರ್ಪಿಸುವ ಮೂಲಕ ಜುಲೈ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಮುಕ್ತಾಯವಾಯಿತು.

ಸಾಹಿತ್ಯ ದಾಸೋಹ 227ರ ಹಿಮ್ಮೇಳದ ಮಾಹಿತಿಗಳು:

ಸಾಹಿತ್ಯ ದಾಸೋಹದ ಸಾರಥ್ಯ : ಶ್ರೀ ಕೆ. ಎನ್. ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ. ಗುಜ್ಜರ್
ವಿಡಿಯೋ ಮುದ್ರಣ : ಶ್ರೀಮತಿ ರೇಣುಕಾ ದೇಸಾಯಿ
ಸಾಹಿತ್ಯ ದಾಸೋಹದ ಮಾಸಿಕ ವಿದ್ಯುನ್ಮಾನೀಯ ಸಂಚಿಕೆ ಪಿಡಿಎಫ್ : ಶ್ರೀ ಶೃಂಗೇಶ್ವರ ಶರ್ಮ ಎಸ್.

ಇದೂ ಸೇರಿದಂತೆ ಹಿಂದಿನ ಹಲವು ಸಾಹಿತ್ಯ ದಾಸೋಹಗಳ ಸಂಪೂರ್ಣವಾಗಿ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯ ಯುಟ್ಯೂಬ್ ನಲ್ಲಿ ವೀಕ್ಷಿಸಬಹುದು.

***

ತಿಂಗಳ ಬೆಳಕು - 6

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ವೇದಿಕೆ



"ಯಕ್ಷಗಾನ: ಅಂದು – ಇಂದು"

ಉಪನ್ಯಾಸಕರು: ಡಾ. ಆನಂದರಾಮ ಉಪಾಧ್ಯ

ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

ಜುಲೈ ತಿಂಗಳಿನ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ ದಿನಾಂಕ 28ನೆಯ ಜುಲೈ 2024ರಂದು ಭಾನುವಾರ ಸಂಜೆ 5.00 ಗಂಟೆಗೆ ಡಾ. ಆನಂದರಾಮ ಉಪಾಧ್ಯ ಅವರಿಂದ ಗೂಗಲ್ ಮೀಟ್ ತಂತ್ರಜ್ಞಾನದ ಮೂಲಕ 'ಯಕ್ಷಗಾನ: ಅಂದು–ಇಂದು' ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

'ತಿಂಗಳ ಬೆಳಕು' ಕಾರ್ಯಕ್ರಮದ ಸಂಚಾಲಕರಾದ ಶ್ರೀ ರವಿ ಕುಸಬಿಯವರ ಪ್ರಾಸ್ತಾವಿಕ ಮಾತುಗಳೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಡಾ ಶುಭಶ್ರೀ ಪ್ರಸಾದ್‌ರವರು ಉಪನ್ಯಾಸಕರನ್ನು ಪರಿಚಯಿಸಿ ಎಲ್ಲರನ್ನೂ ಸ್ವಾಗತಿಸಿದರು.

ಕರ್ನಾಟಕ ಬ್ಯಾಂಕಿನ ನಿವೃತ್ತ ಅಧಿಕಾರಿಯಾಗಿರುವ ಡಾ. ಆನಂದರಾಮ ಉಪಾಧ್ಯರವರು ಸುಮಾರು ಮೂವತ್ತು ವರ್ಷಗಳ ಹಿಂದೆ ಸಮನ್ವಯ ಸಮಿತಿಯ ಆಶ್ರಯದಲ್ಲಿ ಪ್ರಾ.ಎಚ್ಚೆಸ್ಕೆಯವರ ನೇತೃತ್ವದಲ್ಲಿ ನಡೆದ 'ಬ್ಯಾಂಕಿಂಗ್ ಕಮ್ಮಟ'ದಲ್ಲಿ ಭಾಗವಹಿಸಿದ್ದನ್ನು ನೆನಪಿಸಿಕೊಂಡು ತಮ್ಮ ಮಾತುಗಳನ್ನು ಆರಂಭಿಸಿದರು. ಅವರ ಉಪನ್ಯಾಸದ ಕೆಲವು ಮುಖ್ಯ ಅಂಶಗಳು ಹೀಗಿವೆ:



ಯಕ್ಷಗಾನವು ಕೇವಲ ಆರು ಜಿಲ್ಲೆಗಳಿಗೆ ಮಾತ್ರ ಸೀಮಿತವಾದ ಕರಾವಳಿ ಮತ್ತು ಮಲೆನಾಡಿನ ಕಲೆ ಎಂಬ ತಪ್ಪು ಕಲ್ಪನೆ ಇದೆ. ಅದು ಇಡೀ ಕರ್ನಾಟಕದ ಕಲೆ. ಈ ಕಲೆ ಸುಮಾರು ಏಳುನೂರು ವರ್ಷಗಳ ಹಿಂದೆಯೇ ಕರ್ನಾಟಕದಾದ್ಯಂತ ಇತ್ತು. ಅದನ್ನು ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ಹೆಸರಿನಲ್ಲಿ ಅಂದರೆ ಆಟ, ಬಯಲಾಟ, ದೊಡ್ಡಾಟ, ಸಣ್ಣಾಟ, ದಾಸರ ಆಟ, ಮೂಡಲಪಾಳ್ಯ ಮುಂತಾಗಿ ಕರೆಯುತ್ತಾರೆ. ಆಂಧ್ರ, ತಮಿಳುನಾಡು, ಕೇರಳಗಳಲ್ಲಿಯೂ ಬೇರೆ ಬೇರೆ ರೂಪಗಳಲ್ಲಿ ಇದು ಸಂವಾದಿಯಾಗಿ ಇದೆ.

ಈ ಗ್ರಾಮೀಣ ಕಲೆಯ ಸಾಹಿತ್ಯವನ್ನು ಯಕ್ಷಗಾನ ಅಂತ ಕರೆಯಲಾಯಿತು. ಯಕ್ಷಗಾನವು ಮೂಲತಃ ಪ್ರದರ್ಶನದ ಕಲೆ ಆಗಿರಲಿಲ್ಲ. ಇದೊಂದು ಸಾಹಿತ್ಯ ಪ್ರಕಾರ. ನಮ್ಮಲ್ಲಿ ಯಕ್ಷಗಾನ ಸಾಹಿತ್ಯವನ್ನು ಪ್ರದರ್ಶನಕ್ಕಾಗಿ ಬಳಸಿದರೇ ವಿನಹ ಸಾಹಿತ್ಯವಾಗಿ ಗಮನಿಸಲಿಲ್ಲ.

ಸುಮಾರು 675 ವರ್ಷಗಳ ಹಿಂದೆಯೇ ಅಂದರೆ 1350ರಲ್ಲಿ ರಚಿತವಾದ 'ಆದಿಪರ್ವ' ಎಂಬ ಮೊತ್ತಮೊದಲ ಯಕ್ಷಗಾನ ಪ್ರಸಂಗ ದೊರೆತಿದ್ದು, ಇದರ ಯಕ್ಷಗಾನ ಸಾಹಿತ್ಯದಲ್ಲಿ ಕನ್ನಡ ಛಂದಸ್ಸು ಹೆಚ್ಚು ಬಳಕೆಯಲ್ಲಿದೆ. ಭಾಷಾ ಶೈಲಿಯಿಂದಲೂ ಇದು 14ನೆಯ ಶತಮಾನದ ಕಾವ್ಯ ಎಂದು ಗುರುತಿಸಲಾಗಿದೆ. ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡ ಯಕ್ಷಗಾನ ಕಾಲಕಾಲಕ್ಕೆ ಬದಲಾಗುತ್ತಾ ವಿಶೇಷವಾಗಿ ಕರಾವಳಿ ಹಾಗೂ ಮಲೆನಾಡಿನಲ್ಲಿ ವಿಜೃಂಭಿಸುತ್ತಾ ತನ್ನ ಅಸ್ತಿತ್ವ ಉಳಿಸಿಕೊಂಡಿದೆ. ವೃತ್ತಿ



ರಂಗಭೂಮಿ ಮತ್ತು ಚಲನಚಿತ್ರದ ಪ್ರವೇಶದಿಂದ ಇತರ ಭಾಗಗಳಲ್ಲಿ ಯಕ್ಷಗಾನ ಪ್ರಕಾರಗಳು ಬಹುತೇಕ ಅಸ್ತಿತ್ವ ಕಳೆದುಕೊಂಡಿವೆ. ಆದರೆ ಕರಾವಳಿ ಮತ್ತು ಮಲೆನಾಡು ಪ್ರದೇಶಗಳು ಸಿನಿಮಾ ಹಾಗೂ ನಾಟಕಗಳ ಪ್ರವೇಶವನ್ನು ಸಮರ್ಥವಾಗಿ ಎದುರಿಸಿದುವು. ಇಲ್ಲೆಲ್ಲಾ ಯಕ್ಷಗಾನ ಕಲಾವಿದರಿಗೆ ಹೆಚ್ಚಿನ ಮನ್ನಣೆ ಇದೆ. ಪ್ರಸಿದ್ಧ ಕಲಾವಿದರಿಗೆ ತಾರಾಮೌಲ್ಯವಿದೆ.

ವಿಜಯನಗರ ಅರಸರ ಕಾಲ ಸಾಂಸ್ಕೃತಿಕ ಪುನರುತ್ಥಾನ ಕಾಲ. ಆ ಕಾಲದಲ್ಲಿ ಯಕ್ಷಗಾನ ಪ್ರದರ್ಶನ ಕಲೆ ಹೆಚ್ಚು ಸಮೃದ್ಧವಾಗಿತ್ತು. ವಿಶೇಷವಾಗಿ ಕರಾವಳಿಯಲ್ಲಿ ದೇವಸ್ಥಾನಗಳು, ಶಕ್ತಿಯ ಆರಾಧನಾ ಸ್ಥಳಗಳು ಮೇಳಗಳನ್ನು ಸ್ಥಾಪಿಸಿ ಪೋಷಿಸಿಕೊಂಡು ಬಂದವು. ನೂರು ವರ್ಷಗಳ ಕೆಳಗೆ ಯಕ್ಷಗಾನ ಇವತ್ತಿನಂತೆ ಇರಲಿಲ್ಲ. ಆಗ ಪ್ರಚಲಿತವಾಗಿದ್ದದ್ದು ಬಯಲಾಟದ ಮೇಳಗಳು. ಈ ಮೇಳಗಳಿಂದ ಪ್ರದರ್ಶನ ವ್ಯವಸ್ಥೆಯನ್ನು ಹೆಚ್ಚಾಗಿ ದೇವಸ್ಥಾನಗಳು ಮಾಡುತ್ತಿದ್ದವು. ಜನರು ಸಹ ಸೇವೆ ಆಟ ಏರ್ಪಡಿಸುತ್ತೇನೆಂದು ಹರಕೆ ಮಾಡಿಕೊಳ್ಳುತ್ತಿದ್ದರು. ಹೀಗಾಗಿ ಆಟವು ಆರಾಧನೆಯ ಒಂದು ಅಂಗವಾಗಿತ್ತು. 1560ರ ಸುಮಾರಿಗೇ ತಾಳಮದ್ದಲೆಯ ಆರಾಧನಾ ಕ್ರಮ ಚಾಲ್ತಿಯಲ್ಲಿತ್ತು ಎಂಬುದು ಬಳ್ಳಾರಿ ಜಿಲ್ಲೆಯ ಕುರುಗೋಡಿನಲ್ಲಿ ದೊರೆತ ಶಾಸನವೊಂದರಿಂದ ತಿಳಿದುಬರುತ್ತದೆ.

ಯಕ್ಷಗಾನವನ್ನು ಬ್ರಹ್ಮವಿದ್ಯೆ ಅನ್ನುತ್ತಾರೆ. ಏಕೆಂದರೆ ಬ್ರಹ್ಮನಿಗೆ ನಾಲ್ಕು ಮುಖ ಇರುವ ಹಾಗೆ ಯಕ್ಷಗಾನಕ್ಕೆ ಸಂಗೀತ (ಭಾಗವತಿಕೆ), ನೃತ್ಯ, ಮಾತುಗಾರಿಕೆ, ವಾದ್ಯ ಈ ನಾಲ್ಕೂ ಅಗತ್ಯ.

ಬಯಲಾಟದಲ್ಲಿ ತೆಂಕುತಿಟ್ಟು ಬಡಗುತಿಟ್ಟು ಹಾಗೂ ಬಡಾಬಡಗುತಿಟ್ಟು ಎಂಬ ಮೂರು ಪ್ರಕಾರಗಳಿವೆ. ಹಿಮ್ಮೇಳದಲ್ಲಿ ಭಾಗವತರು ಹಾಗೂ ಮದ್ದಲೆಗಾರರಿದ್ದರೆ, ಮುಮ್ಮೇಳದಲ್ಲಿ ವೇಷಧಾರಿಗಳು, ವಿದೂಷಕ ತಮ್ಮ ಪಾತ್ರ ನಿರ್ವಹಿಸುತ್ತಾರೆ. ಬಹಳ ಹಿಂದೆ ಮಳೆಗಾಲ ಕಳೆದ ನಂತರ ಮುಂದಿನ ಮಳೆಗಾಲ ಶುರುವಾಗುವವರೆಗೆ ಅಂದರೆ ನವೆಂಬರ್ ತಿಂಗಳಿಂದ ಮೇ ತಿಂಗಳ ವರೆಗೆ ಮೇಳಗಳ ಕಲಾವಿದರು ಪ್ರತಿನಿತ್ಯ ಪೆಟ್ಟಿಗೆಗಳನ್ನು ಹೊತ್ತು ಕಾಲ್ನಡಿಗೆಯಲ್ಲೇ ಊರಿಂದ ಊರಿಗೆ ಹೋಗಿ ರಾತ್ರಿಯಿಡೀ



ಯಕ್ಷಗಾನ ಪ್ರದರ್ಶನ ನೀಡುತ್ತಿದ್ದರು. ಕೇವಲ ನಾಲ್ಕು ಕಂಬ ಹಾಕಿ, ಮಾವಿನೆಲೆ ತೋರಣ ಕಟ್ಟಿ ಮಣ್ಣಿನ ಅಂಗಣದಲ್ಲಿ ಸ್ವಲ್ಪ ಎತ್ತರದಲ್ಲಿ ಚೌಕ ವೇದಿಕೆಯನ್ನು ನಿರ್ಮಿಸುತ್ತಿದ್ದರು. ಇಷ್ಟೇ ಜಾಗದಲ್ಲಿ ದೇವಲೋಕವನ್ನೂ, ರಾಜನ ಆಸ್ಥಾನವನ್ನೂ, ಜಲಕೇಳಿಯನ್ನೂ, ಯುದ್ಧವನ್ನೂ, ಪ್ರಯಾಣವನ್ನೂ ಅಭಿನಯದ ಮೂಲಕ ಸೃಷ್ಟಿಸುತ್ತಿದ್ದರು. ಆಗ ವಿದ್ಯುಚ್ಛಕ್ತಿ ಸೌಲಭ್ಯ ಇರಲಿಲ್ಲವಾದ್ದರಿಂದ ದೀವಟಿಗೆ ಮೂಲಕ ಪ್ರದರ್ಶನ ನಡೆಯುತ್ತಿತ್ತು. ಹೆಚ್ಚಾಗಿ ಪೌರಾಣಿಕ ಪ್ರದರ್ಶನಗಳನ್ನೇ ಆಯ್ದುಕೊಳ್ಳುತ್ತಿದ್ದರು. ಕಾಳಗ, ಕಲ್ಯಾಣದ ಪ್ರಸಂಗಗಳು ಸುಮಾರು ಎಂಟು ಗಂಟೆ ಕಾಲ ನಡೆಯುತ್ತಿದ್ದವು.

ಪ್ರದರ್ಶನ ಆರಂಭವಾಗುತ್ತಿದ್ದಂತೆಯೇ ಮೊದಲಿಗೆ ದೇವತಾಸ್ತುತಿ ನಡೆದು, ಒಡ್ಡೋಲಗದಲ್ಲಿ ಕಥೆಯ ಹಿನ್ನೆಲೆಯನ್ನು ತಿಳಿಸಲಾಗುತ್ತದೆ. ಆ ನಂತರ ಪೂರ್ವರಂಗದಲ್ಲಿ ಮಕ್ಕಳ ಅಭಿನಯಕ್ಕೆ ಹೆಚ್ಚಿನ ಅವಕಾಶ ನೀಡಲಾಗುತ್ತಿತ್ತು, ಪೂರ್ವರಂಗದಲ್ಲಿ ಕೋಡಂಗಿ ವೇಷಧರಿಸಿ ಕುಣಿಯುವ ಮಕ್ಕಳಿಗೆ ಯಕ್ಷಗಾನದ ತರಬೇತಿ ದೊರೆಯುತ್ತಿತ್ತು. ಮುಂದೆ ಅವರೇ ದೊಡ್ಡ ವೇಷಧಾರಿಗಳಾಗುತ್ತಿದ್ದರು. ಪೂರ್ವರಂಗದಲ್ಲಿ ಬಾಲಗೋಪಾಲ, ಸ್ತ್ರೀ ವೇಷಗಳು ಮುಂತಾದುವುಗಳ ಪ್ರದರ್ಶನ ಸುಮಾರು ಎರಡು ಗಂಟೆಗಳ ಕಾಲ ನಡೆಯುತ್ತದೆ. ಇದರಿಂದ ಪ್ರೇಕ್ಷಕರ ಮನಸ್ಸು ಪ್ರಸಂಗವನ್ನು ನೋಡಲು ಸಜ್ಜುಗೊಳ್ಳುತ್ತದೆ. ಈ ಸಮಯ ಜನ ಸೇರುವುದಕ್ಕೂ ಅವಕಾಶವಾಗುತ್ತದೆ. ನಂತರ ಕಥಾ ಭಾಗ ಆರಂಭವಾಗುತ್ತದೆ. ಹೆಚ್ಚಾಗಿ ರಾಮಾಯಣ, ಮಹಾಭಾರತ ಮುಂತಾದ ಪೌರಾಣಿಕ ಪ್ರಸಂಗಗಳನ್ನೇ ಆಧರಿಸಿರುತ್ತದೆ.



ಕನ್ನಡದಲ್ಲಿ ಸುಮಾರು 5000 ಯಕ್ಷಗಾನ ಕಾವ್ಯ ಪ್ರಸಂಗಗಳಿವೆ. ಮದ್ದಳೆ ಯಕ್ಷಗಾನದ ಪ್ರಧಾನ ವಾದ್ಯ. ಬಹಳ ಹಿಂದೆ ಚಂಡೆಯ ಬಳಕೆ ಇರಲಿಲ್ಲ. 150 ವರ್ಷದಿಂದ ಈಚೆಗೆ ಕೇರಳದ ದೇವಸ್ಥಾನಗಳಲ್ಲಿ ಬಳಸುತ್ತಿದ್ದ ಚಂಡೆ ವಾದನ ಮೊದಲು ತೆಂಕುತಿಟ್ಟಿಗೆ ಬಂದು ನಂತರ ಬಡಗುತಿಟ್ಟಿಗೂ ಸೇರಿತು. ಹಾಗೆಯೇ ನಮ್ಮಲ್ಲಿನ ಮದ್ದಳೆಯೂ ಕೇರಳದಲ್ಲಿ ಬಳಕೆಗೆ ಬಂತು. ಭಾಗವತರು ಕಾವ್ಯ ಭಾಗವನ್ನು ಹಾಡಿದ ನಂತರ ಅದರ ಅರ್ಥವು ವೇಷಧಾರಿಗಳ ಸಂಭಾಷಣೆಯಲ್ಲಿ ಮೂಡಿಬರುತ್ತದೆ. ಕರಾವಳಿ ಮತ್ತು ಮಲೆನಾಡಿನ ಯಕ್ಷಗಾನ ಪ್ರಯೋಗಗಳಲ್ಲಿ ಆಶು ಸಂಭಾಷಣೆ ಇದೆ. ಉಳಿದಕಡೆ ಮಾತುಗಳನ್ನು ಕಂಠಪಾಠ ಮಾಡಿರುತ್ತಾರೆ. ಯಕ್ಷಗಾನ ಬಯಲಾಟ ಹಾಗೂ ತಾಳಮದ್ದಲೆಗಳಲ್ಲಿ ಅರ್ಥಧಾರಿಗಳು ಇಂದು ಹೇಳಿದ ಅರ್ಥದಂತೆಯೇ ನಾಳೆ ಹೇಳುವುದಿಲ್ಲ. ಅವರ ಅರ್ಥಗಾರಿಕೆಯಲ್ಲಿ ವಿಸ್ತಾರ ಮಾಡುವ ಶಕ್ತಿ ಇರುತ್ತದೆ, ಭಾಷಾ ಪಾಂಡಿತ್ಯ ವಿರುತ್ತದೆ. ಹೀಗಾಗಿ ಕನ್ನಡ ಭಾಷಾ ಬೆಳವಣಿಗೆಯಲ್ಲಿ ಯಕ್ಷಗಾನದ ಪಾತ್ರವಿದೆ. ಯಕ್ಷಗಾನ ಮಾತುಗಾರಿಕೆಯಲ್ಲಿ ಕನ್ನಡದ ಜಾಯಮಾನ ಅಂತರ್ಗತವಾಗಿದೆ.

ಮಂದಾರ್ತಿ, ಅಮೃತೇಶ್ವರಿ, ಕಟೀಲು, ಪೆರ್ಡೂರು, ಧರ್ಮಸ್ಥಳ ಇತ್ಯಾದಿ 40ಕ್ಕೂ ಹೆಚ್ಚು ಮೇಳಗಳು ದೇವಸ್ಥಾನಗಳನ್ನು ಆಶ್ರಯಿಸಿ ಹರಕೆ ಆಟ ನಡೆಸುತ್ತಿವೆ. ಈ ಹರಕೆಯಾಟಗಳಿಗೆ ಜನರು ಮೊದಲೇ ಬುಕ್ ಮಾಡಿ ಪ್ರದರ್ಶನದ ದಿನಕ್ಕಾಗಿ ಹಲವು ವರ್ಷ ಕಾಯಬೇಕಾಗುತ್ತದೆ. ಉತ್ತರ ಕನ್ನಡದ ಹನುಮಂತನ ದೇವಸ್ಥಾನವೊಂದರಲ್ಲಿ ಪ್ರತಿದಿನವೂ ಹರಕೆಯಾಟ ನಡೆಯುತ್ತದೆ. ಕಟೀಲಿನಲ್ಲಿ ಆರು ಹರಕೆ ಮೇಳಗಳಿವೆ. ಆದರೂ ಹರಕೆಯಾಟ ಆಡಿಸಲು ಹತ್ತು ವರ್ಷಕ್ಕೂ ಹೆಚ್ಚು ಕಾಲ ಕಾಯಬೇಕಾಗುತ್ತದೆ.

ಡಾ. ಆನಂದರಾಮ ಉಪಾಧ್ಯ

ಕರ್ನಾಟಕ ಬ್ಯಾಂಕಿನಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿ, ಸಹಾಯಕ ಪ್ರಧಾನ ವ್ಯವಸ್ಥಾಪಕರಾಗಿ ನಿವೃತ್ತಿ ಹೊಂದಿರುವ ಡಾ. ಆನಂದರಾಮ ಉಪಾಧ್ಯರು ಪ್ರಸ್ತುತ ಬೆಂಗಳೂರಿನ ಪಿ.ಇ.ಎಸ್. ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.

ಯಕ್ಷಗಾನಕ್ಕೆ ಸಂಬಂಧಿಸಿದಂತೆ ಮೊದಲ ಡಾಕ್ಟರೇಟ್ ಪದವಿ ಪಡೆದಿರುವ ಡಾ. ಆನಂದರಾಮ ಉಪಾಧ್ಯರು ಕನ್ನಡದ ಲೇಖಕರು, ವಿಮರ್ಶಕರು, ಪ್ರಬಂಧಕಾರರು ಹಾಗು ವಿದ್ವಾಂಸನಾಗಿದ್ದಾರೆ. ಇವರ "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಎಂಬ ಪ್ರೌಢಪ್ರಬಂಧಕ್ಕೆ ಉಸ್ಮಾನಿಯಾ ವಿಶ್ವವಿದ್ಯಾಲಯದ ಪಿ.ಎಚ್.ಡಿ ಪದವಿ ಲಭಿಸಿದೆ. ಇದಲ್ಲದೆ "ಯಕ್ಷಗಾನ ರಾಮಾಯಣ ಪ್ರಸಂಗಗಳು", "ಯಕ್ಷದರ್ಶನ", "ಯಕ್ಷಚಿಂತನೆ", "ಪ್ರತಿಬಿಂಬ", "ಸಮಾಹಿತ", "ಯಕ್ಷಪಥ", "ಕೋದಂಡ", "ಯಕ್ಷಗಾನಂ ವಿಶ್ವಗಾನಂ" ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ.

ಯಕ್ಷಗಾನದ ಡಿಜಿಟಲೀಕರಣದ ಮುಂಚೂಣಿಯಲ್ಲಿರುವ "ಯಕ್ಷವಾಹಿನಿ" ಸಂಸ್ಥೆಯ ಅಧ್ಯಕ್ಷರಾಗಿರುವ ಶ್ರೀ ಆನಂದರಾಮ ಉಪಾಧ್ಯರು, "ಆರ್ಯಭಟ್ಟ ಪ್ರಶಸ್ತಿ", "ನರಸಿಂಹ ಪ್ರಶಸ್ತಿ", "ಕೆರೆಮನೆ ಶಂಭು ಹೆಗಡೆ ಸಂಮಾನ" ಹಾಗೂ ಕರ್ನಾಟಕ ಸರಕಾರದ ಯಕ್ಷಗಾನ ಅಕಾಡೆಮಿಯ 2019ರ ಗೌರವ ಪ್ರಶಸ್ತಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ 2022ನೇ ಸಾಲಿನ ದತ್ತಿನಿಧಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಯಕ್ಷಗಾನಕ್ಕೆ ಸಂಬಂಧಿಸಿದ ಯಾವುದೇ ವಿಷಯವಿರಲಿ, ಸುಲಲಿತವಾಗಿ ಹಾಗೂ ಅಧಿಕಾರಾತ್ಮಕವಾಗಿ ಮಾತನಾಡಬಲ್ಲ ಡಾ. ಆನಂದರಾಮ ಉಪಾಧ್ಯರು ನಮ್ಮ ವೇದಿಕೆಯ 6ನೆಯ 'ತಿಂಗಳ ಬೆಳಕು' ಕಾರ್ಯಕ್ರಮದಲ್ಲಿ 'ಯಕ್ಷಗಾನ ಅಂದು-ಇಂದು' ವಿಷಯದ ಬಗ್ಗೆ ಉಪನ್ಯಾಸ ನೀಡುತ್ತಿರುವುದು ಸಂತಸದ ಸಂಗತಿ.

ವೃತ್ತಿ ನಾಟಕಗಳಿಗೆ ಸ್ಪರ್ಧೆಯೊಡ್ಡಿ ಯಕ್ಷಗಾನ ನಾಟಕ ಸಭಾ ಆರಂಭವಾಯಿತು. ಪರಿಣಾಮವಾಗಿ ದೇವಸ್ಥಾನದ ಆಶ್ರಯವಿಲ್ಲದ ಸ್ವತಂತ್ರ ಡೇರೆ (ಟೆಂಟ್) ಮೇಳಗಳೂ ಹುಟ್ಟಿಕೊಂಡವು. ದೀವಟಿಗೆ/ಪೆಟ್ರೋಮ್ಯಾಕ್ಸ್ ಬದಲಿಗೆ ವಿದ್ಯುತ್ ಬೆಳಕು ಚಾಲ್ತಿಗೆ ಬಂತು. ಜನ ಇದನ್ನು ಸ್ವೀಕರಿಸಿದರು. ಇದರಿಂದ ಕಲಾವಿದರ ಬದುಕು ಹಸನಾಯಿತು. ಸುಮಾರು ಇಪ್ಪತ್ತು ವರ್ಷಗಳಿಂದೀಚೆಗೆ ರಾತ್ರಿಯಿಡೀ ನಡೆಯುವ ಪ್ರಸಂಗದ ಬದಲಿಗೆ ನಿರ್ದಿಷ್ಟ ಕಾಲಮಿತಿ ಪ್ರಯೋಗವೂ ಬಂತು. ಇದರಿಂದಾಗಿ ಪೂರ್ವರಂಗದ ಭಾಗ ಸಂಪೂರ್ಣ ನಶಿಸಿಹೋಗಿ, ಕಥಾ ಭಾಗವಷ್ಟೇ ಉಳಿದುಕೊಂಡಿದೆ. ದೇವರ ಆರಾಧನೆಯ ಅಂಗವಾಗಿ ಆರಂಭವಾದ ಯಕ್ಷಗಾನ ಕಲೆ ಈಗ ಮನರಂಜನೆಯ ಸಾಧನವಾಗಿದೆ.

ಡಾ.ಶಿವರಾಮ ಕಾರಂತರು ಯಕ್ಷಗಾನ ಕಲೆಗೆ ಹೊಸ ರೂಪ ಕೊಡಲು ಪ್ರಯತ್ನಿಸಿದ ಮೇಲೆ ಯಕ್ಷರಂಗ ಪ್ರಯೋಗಗಳಲ್ಲಿ ಸಾಕಷ್ಟು ಬದಲಾವಣೆಗಳಾದುವು. ಅವರು ರೂಪಿಸಿದ ಮಾತುರಹಿತ 'ಯಕ್ಷಗಾನ ಬ್ಯಾಲೆ' ಹೊಸ ರೀತಿಯ ಪ್ರಯೋಗವಾಗಿ ವಿದೇಶಗಳಲ್ಲೂ ಪ್ರದರ್ಶನವಾದುದು ಯಕ್ಷಗಾನಕ್ಕೆ ವರವಾಯಿತು. ಯಕ್ಷಗಾನಕ್ಕೆ ವಿಶ್ವಮಾನ್ಯತೆಯನ್ನು ದೊರಕಿಸಿಕೊಡುವಲ್ಲಿ ಶಿವರಾಮ ಕಾರಂತರ ಪಾತ್ರ ಅತ್ಯಂತ ಮಹತ್ವಪೂರ್ಣವಾದುದು.



ಸುಧನ್ವನಾಗಿ ಮೋಹನ್ ಕುಮಾರ್ ಅಮ್ಮುಂಜೆ. ಹಿಮ್ಮೇಳ – ಪಟ್ಲ, ಬೊಳಿಂಜಡ್ಕ, ವಗೆನಾಡು.



ಯಕ್ಷಗಾನವನ್ನು ಉಳಿಸಿ ಬೆಳೆಸುವಲ್ಲಿ ಹವ್ಯಾಸಿ ತಂಡಗಳು ಬಹುದೊಡ್ಡ ಪಾತ್ರ ವಹಿಸಿವೆ. ಹವ್ಯಾಸಿ ಯಕ್ಷಗಾನ 70–80 ವರ್ಷಗಳಲ್ಲಿ ತೀವ್ರ ಬೆಳವಣಿಗೆ ಕಂಡಿದೆ. ಹಳ್ಳಿಯ ಜನ ಸೇರಿ ಹಿರಿಯ ಕಲಾವಿದರಿಂದ ಈ ಕಲೆಯನ್ನು ಕಲಿತು ಪ್ರದರ್ಶನ ಕೊಡುತ್ತಿದ್ದಾರೆ. ಮಲೆನಾಡಿನ ಭಾಗದಲ್ಲಿ ಹೆಚ್ಚಾಗಿದ್ದಂತಹ ಹವ್ಯಾಸಿ ತಂಡಗಳು ಈಗ ನಗರ ಪ್ರದೇಶದಲ್ಲೂ ಇವೆ. ಬೆಂಗಳೂರು ನಗರದಲ್ಲಿ ಐವತ್ತಕ್ಕೂ ಹೆಚ್ಚು ಯಕ್ಷಗಾನ ಸಂಸ್ಥೆಗಳಿವೆ. ಕೆಲವೊಂದು ಶಾಲೆಗಳಲ್ಲೂ ಮಕ್ಕಳಿಗೆ ಯಕ್ಷಗಾನದ ತರಬೇತಿ ನೀಡಲಾಗುತ್ತಿದೆ. ಸಾಲಿಗ್ರಾಮ ಮಕ್ಕಳ ಮೇಳ 50 ವರ್ಷಗಳ ಹಿಂದೆಯೇ ಬಹಳ ಹೆಸರು ಮಾಡಿ ಅಂತರಾಷ್ಟ್ರೀಯ ಪ್ರದರ್ಶನ ನೀಡಿದೆ. ಮಕ್ಕಳ ಮೇಳದಿಂದಾಗಿ ಯಕ್ಷಗಾನವು ಹೊಸ ಹೊಸ ಕಲಾವಿದರು ಹಾಗೂ ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ.

ತೀರಾ ಇತ್ತೀಚಿನವರೆಗೂ ಯಕ್ಷಗಾನದಲ್ಲಿ ಪುರುಷರೇ ಸ್ತ್ರೀ ಪಾತ್ರವನ್ನು ನಿರ್ವಹಿಸುತ್ತಿದ್ದರು. ಈಗೀಗ ಅನೇಕ ಮಹಿಳೆಯರು ಕೂಡ ಹವ್ಯಾಸಿ ಯಕ್ಷಗಾನ ಕಲಾವಿದರಾಗಿ ಭಾಗವಹಿಸುತ್ತಿದ್ದು, ಮಹಿಳಾ ಮೇಳಗಳೂ ಸಾಕಷ್ಟಿವೆ. ಪ್ರತಿಭಾವಂತ ಮಹಿಳಾ ವೇಷಧಾರಿಗಳು ಮತ್ತು ಮಹಿಳಾ ಭಾಗವತರು ಸಹ ಯಕ್ಷಗಾನದಲ್ಲಿ ಪಾಲ್ಗೊಳ್ಳುತ್ತಿದ್ದು, ಜನಪ್ರಿಯರೂ ಆಗಿದ್ದಾರೆ.

ಹಳ್ಳಿಗಳಲ್ಲಿ ನವಂಬರ್ ನಂತರ ಬೇಸಾಯ ಆರಂಭವಾಗುವುದರಿಂದ ಆ ಅವಧಿಯಲ್ಲಿ ಕಲಾವಿದರು ನಗರಗಳಿಗೆ ಬಂದು ಪ್ರದರ್ಶನಗಳಲ್ಲಿ ಭಾಗವಹಿಸುತ್ತಾರೆ. ಈಗ ಯಕ್ಷಗಾನ ಕಲೆ ಕೇವಲ ಕರ್ನಾಟಕಕ್ಕೆ ಮಾತ್ರ ಸೀಮಿತವಾಗದೆ, ಮುಂಬಯಿ, ದೆಹಲಿಯಂತಹ ನಗರಗಳಲ್ಲೂ ಯಕ್ಷಗಾನ ತಂಡಗಳು ಹುಟ್ಟಿಕೊಂಡಿವೆ. ಈಗೀಗ ವಿದೇಶಗಳಲ್ಲಿಯೂ ಯಕ್ಷಗಾನ ಪ್ರದರ್ಶನಗಳು ನಡೆಯುತ್ತಿವೆ.

ಈ ಹಿಂದೆ ಕೇವಲ ಕನ್ನಡ ಭಾಷೆಗಷ್ಟೇ ಸೀಮಿತವಾಗಿದ್ದ ಯಕ್ಷಗಾನ ಪ್ರಸಂಗಗಳು ಕ್ರಮೇಣ ತುಳು ಭಾಷೆಯಲ್ಲೂ ರಚಿಸಲ್ಪಟ್ಟು ಬಹಳ ಜನಪ್ರಿಯವಾದುವು. ಹಿಂದಿ, ಮರಾಠಿ ಮತ್ತು ಬಹಳೆಡೆ ಇಂಗ್ಲಿಷ್ ಭಾಷೆಯಲ್ಲಿಯೂ ಯಕ್ಷಗಾನ ಕಲೆಯನ್ನು ಪ್ರದರ್ಶಿಸಲಾಗುತ್ತಿದೆ. ಇತ್ತೀಚೆಗೆ ಕನ್ನಡ ಕಲಿಕೆಯತ್ತ ಆಸಕ್ತಿ ಕಡಿಮೆಯಾಗುತ್ತಿದ್ದಂತೆ ಶಾಲೆ ಕಾಲೇಜುಗಳಲ್ಲಿಯೂ ಇಂಗ್ಲಿಷ್ ಭಾಷೆಯ ಯಕ್ಷಗಾನ ಪ್ರಸಂಗಗಳಿಗೆ ಬೇಡಿಕೆ ಹೆಚ್ಚಿದ್ದು, ಕ್ರಮೇಣ ಅಚ್ಚಕನ್ನಡದ ಯಕ್ಷಗಾನ ಕಲೆ ಕ್ಷೀಣಿಸುವ ಅಪಾಯವಿದೆ.

ಈಗೀಗ ಯಕ್ಷಗಾನ ಪ್ರಸಂಗಗಳ ರಚನೆಯಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಶುದ್ಧ ಕಾವ್ಯವಾಗಿದ್ದ ಪ್ರಸಂಗಗಳಲ್ಲಿ ತ್ರಿಪದಿ, ಷಟ್ಪದಿಯಂತಹ ನಾನಾ ರೂಪದ ಛಂದಸ್ಸಿನಲ್ಲಿದ್ದ 400ಕ್ಕೂ ಹೆಚ್ಚು ಪದ್ಯಗಳಿರುತ್ತಿದ್ದವು. ಈಗ ಕೇವಲ 100–120 ಪದ್ಯಗಳನ್ನು ಬರೆದು ಪ್ರದರ್ಶನ ನೀಡುತ್ತಾರೆ. ಯಕ್ಷಗಾನದ ದೇಸೀ ಸಂಗೀತದ ಶೈಲಿ, ನಡುಗನ್ನಡ ಭಾಷಾ ಪ್ರಯೋಗ ಹಾಗೂ ಶಾಸ್ತ್ರಬದ್ಧ ಕುಣಿತಗಳಲ್ಲಿನ ಪರಂಪರೆ, ಸಾಂಪ್ರದಾಯಿಕತೆ ಮರೆಯಾಗುತ್ತಿದ್ದು, ಕೇವಲ ಜನರಂಜನೆಗಾಗಿ ಆಧುನಿಕತೆ ಪ್ರವೇಶಿಸಿದೆ. ಈ ಹಿಂದೆ ಇಡೀ ಪ್ರಸಂಗವನ್ನು ನಿರ್ದೇಶಕನಂತೆ ನಿಯಂತ್ರಿಸುತ್ತಿದ್ದವರು ಭಾಗವತರು. ಈಗೀಗ ಹವ್ಯಾಸಿ ತಂಡಗಳಲ್ಲಿ ಪ್ರತ್ಯೇಕ ನಿರ್ದೇಶಕರು ಇರುತ್ತಾರೆ. ಬಣ್ಣಗಾರಿಕೆಯಲ್ಲೂ ಸಾಕಷ್ಟು ಬದಲಾವಣೆಗಳಾಗಿವೆ. ಅನೇಕ ಯಕ್ಷಗಾನ ತರಬೇತಿ ಕೇಂದ್ರಗಳೂ ಆರಂಭವಾಗಿ, ಹಿಮ್ಮೇಳ, ಮುಮ್ಮೇಳದ ಕಲಾವಿದರನ್ನು ರೂಪಿಸುತ್ತಿರುವುದು ಶ್ಲಾಘನೀಯ ಬೆಳವಣಿಗೆ.



ಆಧುನಿಕತೆಗೆ ಒತ್ತು ನೀಡುವ ಹೊಸ ಬಗೆಯ ಪ್ರಸಂಗಗಳು ಬರುವುದು ಅಗತ್ಯ. ಆದರೆ ಇವು ಯಕ್ಷಗಾನದ ಮೂಲ ಮೌಲ್ಯಗಳನ್ನು ಕಳೆದುಕೊಳ್ಳದೆ ಯಕ್ಷಗಾನದ ಜಾಯಮಾನಕ್ಕೆ ತಕ್ಕುದಾಗಿರಬೇಕು.


ಹೀಗೆ ಸುಮಾರು ಒಂದು ಗಂಟೆ ಕಾಲ ಕನ್ನಡ ಮೂಲದ ಯಕ್ಷಗಾನ ಕಲೆ ಕಳೆದ ಹಲವಾರು ಶತಮಾನಗಳಿಂದ ವಿವಿಧ ಮಜಲುಗಳಲ್ಲಿ ನಡೆದು ಬಂದ ದಾರಿಯ ಬಗ್ಗೆ ನಿರರ್ಗಳವಾಗಿ ಮಾತನಾಡಿದ ಡಾ. ಆನಂದರಾಮ ಉಪಾಧ್ಯರು ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಹಿನ್ನೆಲೆಯಲ್ಲಿ ಮಹತ್ತರ ತಿರುವುಗಳನ್ನು ಪಡೆಯುತ್ತಿರುವುದನ್ನು ಸವಿಸ್ತಾರವಾಗಿ ವಿಶ್ಲೇಷಿಸಿ, ತನ್ನ ಉಪನ್ಯಾಸವನ್ನು ಮುಕ್ತಾಯಗೊಳಿಸಿದರು.

ನಂತರ ನಡೆದ ಸಂವಾದ ಕಾರ್ಯಕ್ರಮದಲ್ಲಿ ವೀಕ್ಷಕರ ಹಲವಾರು ಪ್ರಶ್ನೆಗಳಿಗೆ ಡಾ. ಆನಂದರಾಮ ಉಪಾಧ್ಯಾಯರು ನೀಡಿದ ಉತ್ತರಗಳು ಯಕ್ಷಗಾನದ ಬಗ್ಗೆ ಅವರಿಗಿರುವ ಆಳವಾದ ಜ್ಞಾನ ಹಾಗೂ ಶ್ರದ್ಧೆಯನ್ನು ಬಿತ್ತರಿಸಿದುವು.

ಕೊನೆಯಲ್ಲಿ ಹು ವಾ ಶ್ರೀಪ್ರಕಾಶ್ ವಂದನಾರ್ಪಣೆ ಮಾಡಿದರು.

(ಇಡೀ ಕಾರ್ಯಕ್ರಮವನ್ನು ಸಮನ್ವಯ ಸಮಿತಿಯ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು.)

***



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ಪ್ರಾ. ಎಚ್ಚೆಸ್ಕೆ ಸ್ಮಾರಕ ದತ್ತಿ ಉಪನ್ಯಾಸ

"ಬ್ಯಾಂಕುಗಳಲ್ಲಿ ಖಜಾನೆ ವ್ಯವಸ್ಥಾಪನ"


ಉಪನ್ಯಾಸಕರು : ಡಾ. ಜೆ.ಎನ್. ಜಗನ್ನಾಥ್

– ಕಾರ್ಯಕ್ರಮ ವರದಿ: ಹು.ವಾ. ಶ್ರೀಪ್ರಕಾಶ್

07ನೆಯ ಆಗಸ್ಟ್ 2024ರಂದು ಸಂಜೆ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ, 'ಪ್ರಾ.ಚಾರ್ಯ ಎಚ್.ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಸ್ಮಾರಕ ದತ್ತಿ ಉಪನ್ಯಾಸ ಮಾಲೆ'ಯ ಆರನೆಯ ಆವೃತ್ತಿಯ ಉಪನ್ಯಾಸ ಕಾರ್ಯಕ್ರಮ ನಡೆಯಿತು. ನಮ್ಮ ವೇದಿಕೆಯ ಸದಸ್ಯರೇ ಆದ ಡಾ. ಜೆ.ಎನ್.ಜಗನ್ನಾಥ್ ಅವರು "ಬ್ಯಾಂಕುಗಳಲ್ಲಿ ಖಜಾನೆಯ ವ್ಯವಸ್ಥಾಪನ" ಎಂಬ ವಿಷಯದ ಬಗ್ಗೆ ಉಪನ್ಯಾಸ ನೀಡಿದರು.

ಕಾರ್ಯಕ್ರಮದ ಆರಂಭದಲ್ಲಿ ಶ್ರೀ ಶಶಿಕಿರಣ್ ರವರು ಎಲ್ಲರನ್ನೂ ಸ್ವಾಗತಿಸಿದರು.

ಡಾ. ಜೆ.ಎನ್. ಜಗನ್ನಾಥ್ ಅವರು ಕನ್ನಡದಲ್ಲಿ ರಚಿಸಿರುವ "ಬ್ಯಾಂಕಿನಲ್ಲಿ ಖಜಾನೆ ವ್ಯವಸ್ಥಾಪನ; ಒಂದು ಕೈಪಿಡಿ"ಎಂಬ ಕೃತಿಯನ್ನು ಶ್ರೀ ಪಾ.ರಾಜಗೋಪಾಲರವರು ಬಿಡುಗಡೆ ಮಾಡಿದರು. ಈ ಸಂಧರ್ಭ ವೇದಿಕೆಯಲ್ಲಿ ಸಸಕಸ ಪ್ರತಿಷ್ಠಾನದ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ.ರವೀಂದ್ರ ಹಾಗೂ ಕದಂಬ ಪ್ರಕಾಶನದ ಶ್ರೀ ನಾಗೇಶ್ ಅವರು ಉಪಸ್ಥಿತರಿದ್ದರು.






ನಂತರ ಡಾ ಜೆ.ಎನ್.ಜಗನ್ನಾಥ್ ಮಾತನಾಡಿ, ಬ್ಯಾಂಕುಗಳಲ್ಲಿ ಖಜಾನೆ ವ್ಯವಸ್ಥಾಪನೆ ಎಂದರೇನು ಮತ್ತು ಅದರ ಅವಶ್ಯಕತೆ ಮತ್ತು ನಿರ್ವಹಣೆಯ ಬಗ್ಗೆ ಸಂಕ್ಷಿಪ್ತವಾಗಿಯೂ, ಸರಳವಾಗಿಯೂ ತಮ್ಮ ಉಪನ್ಯಾಸದಲ್ಲಿ ತಿಳಿಸಿದರು.





ಸಾರ್ವಜನಿಕರಿಂದ ಠೇವಣಿಯನ್ನು ಸಂಗ್ರಹಿಸಿ ಅದರಲ್ಲಿನ ಒಂದು ಭಾಗವನ್ನು ಅವಶ್ಯವುಳ್ಳ ಗ್ರಾಹಕರಿಗೆ ಸಾಲ ಕೊಡುವುದು ಹಾಗೂ ಕೆಲವು ನಿಗದಿತ ಸೇವೆಗಳನ್ನು ನೀಡುವುದು ಬ್ಯಾಂಕುಗಳ ಮೂಲ ಕಾರ್ಯಭಾರವಾಗಿದೆ. ಬಡ್ಡಿ ನೀಡಿಕೆ ಮತ್ತು ಗಳಿಸುವಿಕೆಯ ನಡುವಿನ ಅಂತರ ಹಾಗೂ ಸೇವಾ ಶುಲ್ಕ ಪಡೆಯುವುದರ ಜೊತೆಗೇ, ಬ್ಯಾಂಕಿನ ಒಟ್ಟಾರೆ ಹಣಕಾಸು ನಿರ್ವಹಣೆಯಲ್ಲಿ ಅಗತ್ಯವಾದ ದ್ರವ್ಯತೆ, ಲಾಭದಾಯಕತೆ ಮತ್ತು ಸುರಕ್ಷತೆಯನ್ನು ಯೋಜಿಸಲು ಮತ್ತು ಶಾಸನಾತ್ಮಕ ಅವಶ್ಯಕತೆಗಳನ್ನು ನೋಡಿಕೊಳ್ಳಲು ಬ್ಯಾಂಕುಗಳು ಖಜಾನೆ ವಿಭಾಗವನ್ನು ಸ್ಥಾಪಿಸುತ್ತವೆ. ಖಜಾನೆ ವ್ಯವಸ್ಥಾಪನೆಯಲ್ಲಿ ತರಬೇತಿ ಪಡೆದ ಕೆಲವೇ ಕೆಲವು ಕಾರ್ಯನಿರ್ವಾಹಕರು ಬ್ಯಾಂಕಿನ ನೀತಿ ನಿಬಂಧನೆಗಳಿಗೆ ಅನುಗುಣವಾಗಿ ಖಜಾನೆ ವಿಭಾಗವನ್ನು ನಿರ್ವಹಿಸಿ ವ್ಯವಹಾರ ನಡೆಸುತ್ತಾರೆ.

ಎಲ್ಲಾ ಬ್ಯಾಂಕುಗಳೂ ವಿವಿಧ ಬಗೆಯ ಸಾಲಪತ್ರಗಳು, ಬಾಂಡುಗಳು, ವಾಣಿಜ್ಯಕ ಪತ್ರಗಳು, ಪರಸ್ಪರ ನಿಧಿಗಳು, ವಸ್ತುಗಳು, ಬಂಗಾರ, ಮತ್ತು ವಿಮೆ ಮುಂತಾದವುಗಳಲ್ಲಿ ಹಣವನ್ನು ಹೂಡಿಕೆ ಮಾಡುತ್ತವೆ. ಈ ಎಲ್ಲ ಹೂಡಿಕೆಗಳನ್ನು ಖಜಾನೆ ವ್ಯವಸ್ಥಾಪನೆ ವಿಭಾಗವು ಸರಿಯಾದ ಸಮಯದಲ್ಲಿ ಸರಿಯಾಗಿ ನಿರ್ವಹಿಸಿ ಲಾಭ ಗಳಿಸಬೇಕು. ಇದರ ಜೊತೆಗೆ ವಿತ್ತೀಯ ಮಾರುಕಟ್ಟೆ ಮತ್ತು ವಿದೇಶಿ ವಿನಿಮಯ ಬಂಡವಾಳ ಮಾರುಕಟ್ಟೆಗಳ ಏರಿಳಿತಗಳು, ಅಂತರ ಬ್ಯಾಂಕ್ ಮಾರುಕಟ್ಟೆಯ ಕಾರ್ಯಾಚರಣೆ, ಬಾಸೆಲ್ ಸಮಿತಿಯ ಬಂಡವಾಳ ಪರ್ಯಾಪ್ತತಾ ಅನುಪಾತ, ನಗದು ಮೀಸಲು ಅನುಪಾತ (ಸಿಆರ್‌ಆರ್), ಶಾಸನಾತ್ಮಕ ದ್ರವ್ಯತಾ ಅನುಪಾತ



ಡಾ. ಜೆ.ಎನ್. ಜಗನ್ನಾಥ್

ಡಾ. ಜೆ.ಎನ್. ಜಗನ್ನಾಥ್ ಅವರು ಎಂ.ಕಾಂ., ಎಂಬಿಎ, ಎಂಎ, ಸಿಎಐಐಬಿ.ಖಜಾನೆ ವ್ಯವಸ್ಥಾಪನದಲ್ಲಿ ಡಿಪ್ಲೊಮಾ, ಮಾನವ ಸಂಪನ್ಮೂಲ ವ್ಯವಸ್ಥಾಪನದಲ್ಲಿ ಡಿಪ್ಲೊಮಾ ಹಾಗೂ ಫ್ಲಾರಿಡಾ ವಿಶ್ವವಿದ್ಯಾನಿಲಯದಿಂದ ಖಜಾನೆ ವ್ಯವಸ್ಥಾಪನೆ ವಿಷಯದಲ್ಲಿ ಡಾಕ್ಟರೇಟ್ ಪದವಿಗಳನ್ನು ಪಡೆದಿದ್ದಾರೆ.

ಸುಮಾರು 25 ವರ್ಷಗಳ ಕಾಲ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಸೇವೆ ಸಲ್ಲಿಸಿದ ಶ್ರೀ ಜಗನ್ನಾಥ್ ಅವರು, ಆರು ವರ್ಷಗಳ ಕಾಲ ಮೈಸೂರು ಬ್ಯಾಂಕಿನ ಖಜಾನೆ ವ್ಯವಸ್ಥಾಪನೆ ವಿಭಾಗವನ್ನು ಯಶಸ್ವಿಯಾಗಿ ನಿರ್ವಹಿಸಿದವರು. ಬ್ಯಾಂಕಿನ ಸೇವೆಯಿಂದ ಸ್ವಯಂನಿವೃತ್ತಿ ಪಡೆದ ನಂತರ ಭಾರತದ ಐಟಿ ದಿಗ್ಗಜ ಸಂಸ್ಥೆಯನ್ನು ಸೇರಿದ ಅವರು 14 ವರ್ಷಗಳ ಕಾಲ ತರಬೇತಿ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಈ ಅವಧಿಯಲ್ಲಿ 50ಕ್ಕೂ ಹೆಚ್ಚು ದೇಶಗಳಿಗೆ ಭೇಟಿ ಕೊಟ್ಟು ಇನ್ಫೋಸಿಸ್ ಕಂಪನಿಯ ಬ್ಯಾಂಕಿಂಗ್ ತಂತ್ರಾಂಶದ ಕುರಿತು ತರಬೇತಿ ನೀಡಿದ್ದಾರೆ.

ಇವರಿಗೆ ಕನ್ನಡ ಸಾಹಿತ್ಯದಲ್ಲೂ ಅಪಾರ ಆಸಕ್ತಿ. ಈವರೆಗೆ 3ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಪ್ರತಿ ತಿಂಗಳೂ ಓರ್ವ ಕನ್ನಡ ಕವಿಯನ್ನು ಕುರಿತು ಅಂತರ್ಜಾಲ ಮಾಧ್ಯಮದಲ್ಲಿ ಪರಿಚಯಾತ್ಮಕ ಉಪನ್ಯಾಸಗಳನ್ನೂ ನಡೆಸುತ್ತಿದ್ದಾರೆ.

ಸಮನ್ವಯ ಸಮಿತಿಯ ಕನ್ನಡದಲ್ಲಿ ಬ್ಯಾಂಕಿಂಗ್ ಕುರಿತ ಹಲವು ಬಗೆಯ ಚಟುವಟಿಕೆಗಳಿಗೆ ಪ್ರೇರಕ ಶಕ್ತಿಯಾದ ಪ್ರಾ. ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರ ನೆನಪಿಗಾಗಿ ಪ್ರತಿ ವರ್ಷ ಏರ್ಪಡಿಸುತ್ತಿರುವ ದತ್ತಿ ಉಪನ್ಯಾಸದ ಆರನೆಯ ಆವೃತ್ತಿಯಲ್ಲಿ ಡಾ. ಜಗನ್ನಾಥ್ ಅವರು ಬಹಳ ಅಪರೂಪದ ವಿಷಯ 'ಬ್ಯಾಂಕುಗಳಲ್ಲಿ ಖಜಾನೆ ವ್ಯವಸ್ಥಾಪನೆ' ಕುರಿತು ಮಾತನಾಡುತ್ತಿರುವುದು ಆರ್ಥಿಕ ತಜ್ಞ ಪ್ರಾ. ಎಚ್ಚೆಸ್ಕೆಯವರಿಗೆ ನಿಜವಾಗಿಯೂ ಸಂದ ಗೌರವ ಎನ್ನಬಹುದು.

(ಎಸ್ ಎಲ್ ಆರ್) ಹಾಗೂ ನಷ್ಟ ಸಂಭಾವ್ಯತೆಯ ನಿರ್ವಹಣೆ ಸಹ ಬಹಳ ಮುಖ್ಯ ಎಂದ ಜಗನ್ನಾಥ್ ಅವರು ಪ್ರಾತ್ಯಕ್ಷಿಕೆಯೊಂದಿಗೆ ಸುಮಾರು ಒಂದೂವರೆ ಗಂಟೆಗಳ ಕಾಲ ಉಪನ್ಯಾಸ ನೀಡಿದರು.

ಖಜಾನೆ ವ್ಯವಸ್ಥಾಪನೆಯ ಸಂರಚನೆ, ವಹಿವಾಟುಗಳು, ಸವಾಲುಗಳು, ಪ್ರತಿಕ್ಷಣವೂ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ, ಬ್ಯಾಂಕಿನ ಲಾಭಪ್ರದತೆ ಮತ್ತು ಸ್ಥಿತಿ ವಿವರಣ ಪಟ್ಟಿಯ ನಿರ್ವಹಣೆಯಲ್ಲಿ ಖಜಾನೆ ವಿಭಾಗದ ಕೊಡುಗೆಗಳು ಮುಂತಾದ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ಹಲವು ಮನಮುಟ್ಟುವ ಉದಾಹರಣೆಗಳ ಮೂಲಕ ಜನ ಸಾಮಾನ್ಯರಿಗೂ ಅರ್ಥವಾಗುವಂತೆ ತಮ್ಮದೇ ಆದ ಶೈಲಿಯಲ್ಲಿ ವಿವರಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು.

ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ರಂಗರಾಜನ್ ಅವರು ವಂದನಾರ್ಪಣೆ ಮಾಡಿದರು.

(ಸಂಪೂರ್ಣ ಕಾರ್ಯಕ್ರಮವನ್ನು ಗೋಖಲೆ ಸಾರ್ವಜನಿಕ ಸಂಸ್ಥೆಯ ಯುಟ್ಯೂಬ್ ನಲ್ಲಿಯೂ ವೀಕ್ಷಿಸಬಹುದು.

***

ಕವಿ ಮನ

ಹಸಿರು ಹುಲ್ಲಿನ ಪ್ರಣತಿ

ಮುಖ ಕಪ್ಪಿಟ್ಟಿದೆಯಲ್ಲ
ಸಾಕು, ಸರಿದುಬಿಡು ನೇಪಥ್ಯಕೆ
ಬಡಿಸಿದ್ದ ಪಂಚಭಕ್ಷ ಪರಮಾನ್ನ
ಸಾಲದೆಂದು ಅಡಿಗೆಮನೆ
ಉಗ್ರಾಣವನೆಲ್ಲ ಲೂಟಿ ಮಾಡಿದೆಯಲ್ಲ
ಮುಂದಿನ ಪಂಕ್ತಿಗಿರಲಿ,
ಮುಂದಿನ ಸಾಲಿಗೆ ಏನು ಬಡಿಸುವುದು
ನಿನ್ನ ಹೊಟ್ಟೆಯ ಬಡಿವಾರಕ್ಕೆ
ಹಾರಹಾಕಿದ್ದು ಸಾಲದೇ

ಅಮಾವಾಸ್ಯೆಯ ಕಾರಿರುಳಿನಲ್ಲಿ
ಅಂಬರದ ತಾರಾಪುಂಜಗಳ ತೋರಿ
ಅಗೋ ಅಲ್ಲಿ ನಿಮ್ಮ ಕನಸುಗಳ ಬಿತ್ತ
ಇನ್ನೇನು ಸುಗ್ಗಿಯಾಗಿ ತಣಿಸುವುದು ಚಿತ್ತ
ಮೋಹಪರದೆಯನೆಸೆದು ಮರೆಸಿದೆ
ಮರಸಿದೆ ಬೇರೂರಲು ಕನಸುಗಳು
ಬೇಕು ಬಿತ್ತ ನೆಲಕೆಂಬ ಸತ್ಯ

ಸತ್ಯ ಸತ್ಯ
ಹುಡುಕಲು ಬೇಕಲ್ಲ ಧೈರ್ಯದ ಮೊತ್ತ
ಮಾತ ಮಂಡಿಗೆಯ ಮಂತ್ರದ ಹುಡಿಗೆ
ಕಡಿ ಬಡಿ ಕಡಿ ಬಡಿ ಭೇಷ್ ಭೇಷ್ ಮೋಡಿಗೆ
ಹಾಕಬೇಕು ತಿರುಮಂತ್ರದ ಗಾರುಡಿ
ಬೇಕದಕೆ ನನ್ನುಸಿರು ನನ್ನದೆಂಬ ಎದೆಗಾರಿಕೆ
ಗಮ್ಮೆಂಬ ಮುಂಗಾರು ಬಸಿರಾಗಿ ಹಡೆದರೆ
ಕೋಟಿ ಹಸಿರು ಹುಲ್ಲಿನ ಪ್ರಣತಿ

ನಚೀಕೇತನೆಂಬ ಎಳೆ ಹುಲ್ಲೆಮರಿ
ಅಂತಕನರಿವ ಸಂದೂಕಕ್ಕೆ ಕೈಯಿಟ್ಟ ನಲ್ಲ
ಸತ್ಯದ ಡಿಂಬ ಹೊತ್ತ ಡಂಬಕ್ಕೆ ಕೈಕಾಸಿದ ಮಲ್ಲ

ಸಲ್ಲಲ್ಲೆಡೆ ಇದ್ದಾರೆ ನಲ್ಲರು
ಹಂಚುವರು ಬಿಸಿ ಬೆಲ್ಲ
ನಲ್ಲರಹುದೇನು ಅವರು
ಮೋಡಿಯ ಮಲ್ಲರು

ನಮ್ಮೆದೆ ಬಗೆಯ ಬಗೆದು
ಧೈರ್ಯದೊಸಗೆಯ ಸವಿದು
ಏರಿಸಿ ಬಿಡು ನಿಶಾನೆ
ಲಂಕೆಯ ಸುಟ್ಟ ಹನುಮನಂತೆ
ಅಂಬುಧಿಯಲಿ ಬಾಲವದ್ದಿದಂತೆ

ನಡೆ
ಆಗೋ ಅಲ್ಲಿ ಎಲ್ಲ
ಸಾಲಿನಲ್ಲಿ ಕೂತು ಉಂಡು
ಬೀಡಾಡಿಗಳ ಬಳಸಿ ಎಸೆದು
ಕಂದಕಗಳ ಕೂಡಿ ಕಟ್ಟೆ ಕಟ್ಟಿ
ಹೂಂಕರಿಸಿ
ಕಟ್ಟೋಣ ಮಹಲು

ಸಾಕು ಸಾಕಿನ್ನು ನೀನು ಸರಿದುಬಿಡು ನೇಪಥ್ಯಕೆ.

– ಬೆಂ.ಶ್ರೀ. ರವೀಂದ್ರ
03.07.2024

ಕವಿ ಮನ

ಒಂದು ತಂತಿ

ಸುತ್ತ ಕನ್ನಡಿ, ರೂಪ ಚಂಚಲ
ಬಿಂಬ ಬಹಳಿರು ಅಂಗಳ
ಪ್ರಾಣವೊಂದೇ ಹಲವು ಕೋಶಕೆ
ಬೆರಗು ಮೂಡಿಸಿ ಬಾಂದಳ

ಒಂದು ತಂತಿಯ ಬದುಕು ಕಾಯಕೆ
ಖಾಲಿ ಬುರುಡೆಯು ನಾದಕೆ
ಮೀಟು ಮೀಟಿನ ಸುಪ್ತಸ್ವರದಲಿ
ದನಿಯ ಒಲವಿದೆ ಜೀವಕೆ

ಸಡಿಲ ಸೆಳೆತಕೆ ಸ್ವರವು ಮೂಡದು
ಬಿಗಿಯು ಬೇಕಿದೆ ತಂತಿಗೆ
ಸುಗಮ ಸರಿಗಮ ತೋರೆ ಕಂಪನ
ಲಹರಿ ಲಾಸ್ಯವು ಸೊಗಸಿಗೆ

ತುಡಿತದಲೆಯಲಿ ಸ್ವಚ್ಛ ಶೃತಿಯಿರೆ
ಮಿಡಿವ ಗತಿಯಿಡು ಮಾಂತ್ರಿಕ
ಸೂತ್ರವಾಗದೆ ನಾದ-ಭಾವವು?
ತತ್ವ ಹರಡಿರೆ ಬಹುಮುಖ

ಸ್ವರ ಅಪಸ್ವರ ಭೇದ ತಿಳಿಯಲಿ
ವ್ಯೂಹ ಹೆಚ್ಚಿನ ಕದನಕೆ
ಕೆಡವೆ ಕೇಡನು ಶುಭ್ರ ಮನಸಲಿ
ನಾದ ಪ್ರಿಯವದೊ ಆತ್ಮಕೆ

ಒಂದು ತಂತಿಗನೇಕ ಸರಿಗಮ
ನಾದ ಸಂಭ್ರಮ ಜಂಗಮ
ಭಾವ ಹಲವಿಗೆ ತಂತು ಚೇತನ
ವಿಭವ ಸುಮಧುರ ಸಂಗಮ

– ಕೆ.ಆರ್.ಎಸ್. ಮೂರ್ತಿ
10.07.2024

ಗುರು ಗೌರವ

ಹುಟ್ಟು ಕೊಟ್ಟಿದ್ದು ಚಿಕ್ಕದಾಕರ।
ಕೈಲಾಗದ್ದು ಆ ಮೊಂಡು ಶರೀರ।
ಬುದ್ಧಿ ಇನ್ನ ಖಾಲಿ ಅಪಾರ।
ಅಲ್ಲಿಂದಿಲ್ಲಿಗೆ ಈ ಪಯಣದಿ ಕಲಿಕೆ ನಿರಂತರ।

ನಿಂತದ್ದು ನಡೆದದ್ದು ನುಡಿದದ್ದು ಯಾರ ಉಪಕಾರ।
ಶಕ್ತಿಗೂಡಿದರೂ ಯುಕ್ತಿ ಇಲ್ಲದೆ ಎಲ್ಲ ನಿರಾಧಾರ।
ಕೈ ಹಿಡಿದು ದಾರಿ ತೋರಿಸಿ ತಿದ್ದಿ ತೀಡಿದವರಾರ।
ಅಲ್ಲಿಂದಿಲ್ಲಿಗೆ ಈ ಪಯಣದಿ ಕಲಿಕೆ ನಿರಂತರ॥

ಪಾಠ ಮಾಡಿ ಕಲಿಸಿದವನು ಒಬ್ಬ ಗುರುವರ।
ಜೀವನ ನಡೆಸಿ ತೋರಿಸಿದನಿನ್ನೊಬ್ಬ ಹರಿಕಾರ।
ಹೇಗಿರಬಾರದೆಂದು ಕಾಣಿಸಿದವ ಕೂಡ ಸರದಾರ।
ಅಲ್ಲಿಂದಿಲ್ಲಿಗೆ ಈ ಪಯಣದಿ ಕಲಿಕೆ ನಿರಂತರ।

ಎಲ್ಲರೂ ಗುರುಗಳೇ, ಸತ್ಯವಿದಕಾಧಾರ।
ಆಷಾಢವೇಕೆ, ಹುಣ್ಣಿಮೆ ದಿನಗಳದೇಕೆ ಬರ?
ನೆನಪು ಗೌರವಗಳಿಗೆ ಮುಡಿಪು ಜೀವನವಲ್ಲವೇ ಪೂರ।
ಅಲ್ಲಿಂದಿಲ್ಲಿನ ಪಯಣದಿ ಈ ಕಲಿಕೆ ನಿತ್ಯ ಮಹತ್ತರ॥

– ಡಾ. ಪ್ರಶಾಂತ ಮೇಡ
17.07.2024

ಕವಿ ಮನ

ಮರುಧರೆಯ ಬೆಡಗಿ

ಕಿವಿಗೊಟ್ಟು ಕೇಳುತಿವೆ ಗೋಡೆಗಳ ಚೌಕಿ
ಘರ್ರ್ ಘರ್ರೆಂಬ ಮಂದ್ರದುಲಿ ಆಚೆ ಕಡೆಗೆ
ನಿಡಿದಿಡುವ ತೀಡುಸಿರು ಜೊತೆಗೂಡಿ ಮೆಲ್ಲನೇ
ಕೇಳುತಿದೆ ಕೇಳಿಸುತ ಮುಗಿಯದ ಶ್ರಮವ

ಆ ಉಸಿರ ಬಲದಲ್ಲಿ ಜೋರಿನಲ್ಲರಿಯಬಹು-
ದವನ ತೋಳ್ಬಲದ ಕಟ್ವಾಳಿಕೆಯ ಮೇಲಾಟ
ಉಬ್ಬುಬ್ಬಿ ನಿಂತ ಮಾಂಸಲಸ್ನಾಯುಸಂಘಾತ
ಅವನುಸಿರೆ ಸೇಕಿಸಿದೆ ಹಣೆಯೆದೆಯ ಬೆವರ

ಅದುವೆ ತಂಪಿನಿತಾಗಿ ತಾಗಿದುಸಿರೊಳಗಲ್ಲೆ
ಕೆಲಹೊತ್ತು ನೆಮ್ಮದಿ ನಿರಾಳದಲಿ ನಿಂತ
ನಿಂತಂತೆ ಕಂಡರೂ ನಡೆದೆಯೇ ಇತ್ತು
ಘರ್ರ್ ಘರ್ರೆಂಬ ಮಂದ್ರದುಲಿಯ ಗಾನ

ಕೆಲವೊಮ್ಮೆ ಮೆಲ್ಲನೆಯ ನಡೆ ಜೋರು ಕೆಲವೊಮ್ಮೆ
ಕೀರೆಂದು ಕೀಂಯೆಂದು ಕೆಲವೊಮ್ಮೆ ಅಟಕಿ
ಧಡಬಡಿಸುವುದು ಮತ್ತೆ ಕೆಲವೊಮ್ಮೆ ಭಯವಿಡಿಸಿ
ಏನಿದ್ದರೂ ತಪ್ಪದಾ ಘರ್ರೆನುವ ಗಾನ

ಒತ್ತೊತ್ತಿ ಬಿಗಿಮುಷ್ಟಿಯಿಂದರವನೊಂದೊಂದೆ
ಹಿಡಿಹಿಡಿದು ಜೋಕೆಯಲಿ ತಳ್ಳುತಿರುವ
ಅಚ್ಚಿಗೆಣ್ಣೆಯ ಸವರಿ ಯುಗವೆಷ್ಟೊ ಕಳೆದಾಯ್ತು
ಬರುಬರುತ ಬಿಗಿ ಬಲುಹು, ದಣಿವ ತಿರುವು

ಯಾವ ಮೂಲೆಗಳ ಚೌಕಟ್ಟೊ ದಿಕ್ಸೂಚಿಕೆಗೆ
ರೇಖೆರೇಖೆಯ ಹೆಣೆದರಂಗಳ ಶ್ರೇಣಿ
ಹಿಡಿದ ಹರಿಯಂಗುಲಿಯು ಬಿಂದುಬಿಂದುವು ಕೇಂದ್ರ
ಎತ್ತೆತ್ತಲೋ ಎಸೆವ ಹವಣು ಸಾಂದ್ರ

ಅದುರುವುದು ನೆಲ ಚಕ್ರದೊಂದಂಚು ತಾಗಿದಾಗೆಲ್ಲ
ಗರಬಡಿದು ನಡೆವುದನುಮಾನಿಸುತ್ತ
ಒಳಗೊಳಗೆ ಕುಳಿತಿರುವೆ ಹೆದರಿ ಹೊರಗಿಣುಕದೇ
ಕಂಡರೇನೆಂದು ಪೂರಾಯದಲ್ಲಿ

ಅವನದೇ ಆ ಉಬ್ಬಿದ ತೋಳ ಕಂಡಿಕೆಯು ತರಿದು
ಆಗೀಗ ಗೋಡೆ ತಡಿಕೆಗಳು ಬಿರಿದು
ಅಭದ್ರತೆಯೊ ಪಕ್ವತೆಯೊ ಕಾಣಲಲ್ಲೆನಗಷ್ಟು
ಹೊರನೋಟವಿತ್ತಿಹುದು ಕಿಟಕಿಯಂತೆ

ಒಡಹಾಯ್ವ ಚಕ್ರಾರಪಂಕ್ತಿ ನಡುನಡುವೇಳ್ವ
ನೀಲಿಗಪ್ಪಿನ ಬೆರಕೆಯಾ ಬಿಳಿಯ ತೋಳು
ಹರಡಿರುವ ತರಲಮರುಭೂಮಿಯನು ಬಿಂಬಿಸುವ
ಉಬ್ಬಿದ ಸ್ನಾಯುಖಂಡದ ಬೆವರ ಬಿಂದು

ಏನು ಯಂತ್ರವೊ ಯಾರ ತಂತ್ರವೊ ಕುತೂಹಲಕೆ
ತಡೆಯಲಾರದೆ ತೆರೆದೆ ಬಾಗಿಲನ್ನು
ಮತ್ತದೇ ಘರ್ರ್ ಘರ್ರೆನುವ ಗಾಲಿ, ಜೊತೆಜೊತೆಗೆ
ಧಗೆಯೊಳಗೆ ತಂಪುಣಿಪ ತೀಡುಗಾಳಿ

ಗಾಲಿಯಂಚಿಗೆ ತಾಗಿ ತೂಗಿ ಬಿದ್ದಾಡುತಿರೆ
ಮರಳ ಕಣವೊಂದೊಂದು ಹೊರಳಿ ಹೊರಳಿ
ಯಾವುದೋ ಚುಕ್ಕಿ ಮತ್ತಾವುದೋ ಗ್ರಹ ಬಿದ್ದು
ಮತ್ತೆಲ್ಲಿಯೋ ಚಿಟ್ಟೆ ಪಾರ್ದ ಸದ್ದು

ಮತ್ತಗೇ ಮಲಗಿರುವ ಮಳಲಿನೊಂದೊಂದು ಕಣ
ದಿನ ಮುಗಿದು ಮಲಗಿರುವ ಮನುಜನಂತೆ
ಹರಳುಗಟ್ಟುವ ಮೊದಲ ಹಾರಾಟವುರಿದಾಟ
ಎಲ್ಲಿತ್ತು ಹೇಗಿತ್ತು ಊಹೆಪಡಬೇಕು

ಕಂಡದ್ದು ಸಾಕೆನದೆ ಅತ್ಯಾಶೆಯಲಿ ಕಣ್ಣು
ದೂರದ ಮರೀಚಿಕೆಗೆ ಚಾಚುತಿತ್ತು
ಆಹ್ ಅದಾಗಳೆ ಈ ಘರ್ರ್ ಘರ್ರೆನುವ ನಡುವೆ
ಕೇಳಿಹುದು ಘರ್ಘರದ ಘಳಿರಿನಿಂಪು

ಬಿಸಿಲ ತೊರೆಯಲೆಯಲ್ಲಿ ಹಾಗೊಮ್ಮೆ ಹೀಗೊಮ್ಮೆ
ಮೀನುಗಳು ಕಂಡು ಕಾಣದೆ ನುಣುಚುವಂತೆ
ರೂಪವೋ ದನಿಯೊ ಅದಕಾಸೆ ತುಣುಕಿನ ಗಾಳ
ಹಾಕಿ ಕಾದಿರುವ ಮನದೀ ಮೀನುಗಾರ

ಇನಿತನಿತು ಕಂಡಾಗಲಾ ಮರುಧರೆಯ ಮೇಲೆ
ನಲಿದಿರುವಳೊಬ್ಬ ಬೆಡಗಿ ಜಾಣೆ ದಿಟ್ಟೆ
ಹಿಡಿವೆನೆನೆ ಕಾಪಿಟ್ಟು ಮೇಲಿದ್ದು ನಿಂತಿತ್ತು
ಮತ್ತದೇ ಗಾಲಿ ತಿರುಗಿಸುವ ತೋಳು

– ನೀಲಕಂಠ ಕುಲಕರ್ಣಿ
17.07.2024

ಕವಿ ಮನ

ಅಮೃತ ಬಿಂದು

ಬಣ್ಣ ರುಚಿಯಿರದ ಜಲವೆ
ಬಣ್ಣಿಸಲೆನಿತು ನಿನ್ನ ಮಹಿಮೆ

ತಣಿಸಲು ಘನವಾಗಿ
ಗಿರಿ ಬುವಿಯಲಿ
ಶಾಖಕೆ ದ್ರವವಾಗಿ
ಝರಿ ತೊರೆ ನದಿಯಾಗಿ ಸಾಗರವ ಸೇರಿದೆ
ಕುದಿಸಲು ಅನಿಲವಾಗಿ
ಮೋಡವಾಗಿ ಚಲಿಸಿ
ಭೂವ್ಯೋಮ ವ್ಯಾಪಿಸುವೆ

ಜಗದ ಪ್ರತಿ ಕಣದಿ
ನೀ ತುಂಬಿರುವೆ
ಜಗದ ದಣಿವನಾರಿಸಿ
ಶಕ್ತಿಯ ನೀಡುತಿಹೆ
ಜೀವ ಉಗಮ ಅಸ್ತಿತ್ವಕೆ
ಚೇತನಶೀಲ ಜೀವಜಲವೆ!

ಇಳೆಯ ಕೊಳೆಯನೆಲ್ಲ
ಮಳೆಯಾಗಿ ತೊಳೆವೆ
ಕಣಕಣದಿ ಹರಿಯುತ
ಮಣ್ಣ ಅಣುಅಣುವಲು
ಹನಿಯುಣಿಸಿ ಚಿಗುರಿಸುವೆ
ಸಿರಿಧಾನ್ಯವ ಮೈತುಂಬಿಸಿ
ಕಳೆಯ ನೀಡುವೆ

ನಿನಗಿರದು ಆಕಾರ
ಧಾರಕದ ರೂಪ ಪಡೆವೆ
ನಿನ್ನೊಡನೆ ಬೆರೆತವರ
ಸುವಾಸನೆಯ ಬೀರುವೆ
ನೀರಾಗಬಾರದೆ ನರನು
ಹಿರಿಮೆಯ ಮರೆತು ಬೆರೆಯಬಾರದೆ?

ವಿಶ್ವವ ಆವರಿಸಿಹ ತ್ರಿವಿಕ್ರಮ ಜಲವೆ
ಆಪೋಶಿಸಿ ಬರಿದು ಮಾಡಲುಂಟೆ
ಬೊಗಸೆ ಬೇಕಿಲ್ಲ ಸಾಕು ಅಮೃತ ಬಿಂದುವೊಂದು!
ಜೀವಸುಧೆಯಲಿ ಮಿಂದು ಧನ್ಯತೆಯ ಭಾವ!

– ಕಮಲಾಕ್ಷಿ ಸಿ.ಆರ್.
31.07.2024

ಛಂದಸ್ಸು

– ಗಣಪತಿ ಹೆಗಡೆ

ಅರ್ಥವನ್ನು ಕೊಡುವ ಅಕ್ಷರಗಳ ಸಮೂಹವನ್ನು ಶಬ್ದವೆಂದೂ, ಪೂರ್ಣಾರ್ಥವನ್ನು ಕೊಡುವ ಶಬ್ದಸಮುಚ್ಚಯವನ್ನು ವಾಕ್ಯವೆಂತಲೂ ತಿಳಿಯಲಾಗುವದು ಎಂಬುದು ಭಾಷಾ ತಿಳುವಳಿಕೆಯಿರುವ ಎಲ್ಲರೂ ಗಮನಿಸಿದ ಸಂಗತಿಯೇ ಆಗಿದೆ.

ಇಂತಹ ವಾಕ್ಯಗಳನ್ನು ಬಳಸಿ ರಚಿಸಿದ ಬರಹಗಳ ಕೃತಿಯೇ ಸಾಹಿತ್ಯ. ಇಂತಹ ಬರಹಗಳು ಆಕರ್ಷಕವಾಗಿ ಮೂಡಿಬರಲು ಸಾಹಿತ್ಯಕ್ಕೆ ಒಂದು ನಿಯಮಿತವಾದ ಶಿಸ್ತಿನ ಆವರಣದ ಅವಶ್ಯಕತೆ ಇದೆ. ಈ ಶಿಸ್ತಿನ ಆವರಣವೇ ವ್ಯಾಕರಣ. ಇದು ಜಗತ್ತಿನ ಎಲ್ಲಾ, ಗ್ರಾಂಥಿಕ ಹಾಗೂ ಗ್ರಾಮ್ಯ ಭಾಷೆಗಳಿಗೂ ಅನ್ವಯವಾಗಿರುತ್ತದೆ. ಆದರೆ ಗ್ರಾಮ್ಯ ಭಾಷೆಗಳು ಮತ್ತೂ ಮೌಖಿಕ ಭಾಷೆಗಳು ಎಷ್ಟೋ ಸಲ ಈ ವ್ಯಾಕರಣದ ಆವರಣವನ್ನು ಮೀರಿ ನಿಂತಿರುತ್ತವೆ. ಇನ್ನೊಂದು ರೀತಿಯಿಂದ ಹೇಳುವದಾದರೆ 'ಗ್ರಾಮ್ಯ ಭಾಷೆ ಗ್ರಾಂಥಿಕವಾಗುವಾಗ ಒಳಪಡುವ ಸಂಸ್ಕಾರವೇ ವ್ಯಾಕರಣ.'

ಈ ಸಾಹಿತ್ಯವನ್ನು ಶಬ್ದಗಳ ವಿಂಗಡಣೆ ಹಾಗೂ ವಾಕ್ಯ ರಚನೆಗಳ ಕ್ರಮದ ಹಿನ್ನೆಲೆಯಲ್ಲಿ, ಗದ್ಯ ಹಾಗೂ ಪದ್ಯ ಎಂದು ಎರಡು ವಿಭಾಗಗಳಾಗಿ ವಿಂಗಡಿಸಬಹುದು. ಈ ಎರಡೂ ಪ್ರಕಾರಗಳಿಗೂ ವ್ಯಾಕರಣವು ಬೇಕೇಬೇಕು.

ಅನುಭವಿ ಸಾಹಿತ್ಯಾಸಕ್ತರು ಗದ್ಯ ಹಾಗೂ ಪದ್ಯಗಳ ಭೇದವನ್ನು ಕೂಡಲೇ ಗ್ರಹಿಸುತ್ತಾರೆ. ಪದ್ಯದಲ್ಲಿ ಶಬ್ದಗಳ ಜೋಡಣೆ ಲಯಬದ್ಧವಾಗಿರುತ್ತದೆ. 'ಪದಗಳ ಹದವಾದ ಚಲನೆಯೇ ಲಯ.'

'ಮೊದಲು। ತಾಯ। ಹಾಲ ।ಕುಡಿದು।
ನಲ್ಮೆ।ಯಿಂದ। ತೊದಲಿ। ನುಡಿದು।
ಗೆಳೆಯ।ರೊಡನೆ। ಬೆಳೆದು। ಬಂದ। ಮಾತ।ದಾವುದು॥ '

ಇದರ ಬದಲಿಗೆ
'ಮೊದಲು ತಾಯಿಯ ಹಾಲನ್ನು ಕುಡಿದು, ಆಮೇಲೆ ನಲ್ಮೆಯಿಂದ ತೊದಲು ಮಾತನ್ನು ನುಡಿಯತ್ತಾ ನಂತರದಲ್ಲಿ ಗೆಳೆಯರೊಟ್ಟಿಗೆ ಬೆಳೆದು ಬೆಳವಣಿಗೆಯನ್ನು ಹೊಂದಿ ಬಂದ ಮಾತು ಯಾವುದು?' ಅಂತ ಹೇಳಿದರೆ ಗೇಯತೆ ಬರದು. ಗೇಯತೆ ಅಂದರೆ ಸಂಗೀತಕ್ಕೆ ಅನುಕೂಲವಾದ, ಹಾಡಲು ಅನುಕೂಲವಾದ ಸಾಹಿತ್ಯ.

ಹೀಗೆ ಗೇಯತೆ ಬರಲು, ಪದಗಳನ್ನು ಜೋಡಿಸುವಾಗ ಒಂದು ನಿರ್ದಿಷ್ಟ ವ್ಯವಸ್ಥೆ ಹಾಗೂ ಆವರ್ತಗಳಲ್ಲಿ ಪದ ಪ್ರಯೋಗ ಮಾಡಬೇಕಾಗುತ್ತದೆ. ಈ ಪದ ಪ್ರಯೋಗ ಗದ್ಯದಲ್ಲಿಯ ಪದಪ್ರಯೋಗಕ್ಕಿಂತ ತೀರಾ ವಿಭಿನ್ನವಾಗಿರುತ್ತದೆ. ಇಂತಹ ಪದ್ಯ ರಚನೆಗೆ ಒಂದು ನಿಯಮ ಇದೆ. ಈ ನಿಯಮವೇ ಸಾಹಿತ್ಯಕ್ಕೆ ಗೇಯತೆಯನ್ನು ಒದಗಿಸಿ ಕೊಡುತ್ತದೆ.

ಗೇಯತೆಗೆ ಒಳಪಡದ ಸಾಹಿತ್ಯ ಪ್ರಕಾರವನ್ನು ಗದ್ಯ ಸಾಹಿತ್ಯವೆಂದೂ, ಗೇಯತೆಗೆ ಒಳಪಡುವ ಸಾಹಿತ್ಯ ಪ್ರಕಾರವನ್ನು ಪದ್ಯ ಸಾಹಿತ್ಯವೆಂತಲೂ ಸ್ಥೂಲವಾಗಿ ವಿಭಾಗಿಸಬಹುದು.

ಹೀಗೆ ಪದ್ಯರಚನೆಯನ್ನು ಒಂದು ನಿರ್ದಿಷ್ಟ ನಿಯಮಕ್ಕೆ ಅಳವಡಿಸುವ ಶಾಸ್ತ್ರವೇ 'ಛಂದಶ್ಶಾಸ್ತ್ರ'. ಈ ಶಾಸ್ತ್ರಕ್ಕೆ ಅನುಗುಣವಾಗಿ ರಚಿಸುವ ಕವಿತೆಯೇ ಛಂದೋಬದ್ಧ ಪದ್ಯ.

ಸಾಮಾನ್ಯವಾಗಿ ಸಾಹಿತ್ಯವನ್ನು ಕಾವ್ಯ ಅಂತ ಕರೆದರೂ, ಶಾಸ್ತ್ರೀಯವಾಗಿ ಕಾವ್ಯದ ವ್ಯುತ್ಪತ್ತಿ 'ಕವಿಯಿಂದ ಹುಟ್ಟಿದ್ದು' ಅಂತ. ಕವನ ಅಥವಾ ಕವಿತೆಯನ್ನು ಬರೆಯುವವನು ಕವಿ. ಹೀಗೆ ಕವನ ಅಥವಾ ಕವಿತೆಯನ್ನು ಕಾವ್ಯ ಅಂತ ಸಾಮಾನ್ಯೀಕರಿಸಬಹುದು.

ಛಂದಸ್ಸು ಅಂದರೆ ಪದ್ಯವನ್ನು ರಚಿಸುವ ಶಾಸ್ತ್ರ. ಇದು ಛದ್, ಛಾದ್ ಅಥವಾ ಛಂದ್ ಧಾತುವಿನಿಂದ ಹುಟ್ಟಿದ ಶಬ್ದ.

'ಛದಿರೂರ್ಜನೇ' ಎನ್ನುವದು ಹೆಚ್ಚಾಗಿ ಬಳಸುವ ವ್ಯುತ್ಪನ್ನ ರೂಪ. ಅಂದರೆ ಬಲಿಷ್ಠಗೊಳಿಸುವದು. ಪದ್ಯ ರೂಪದಿಂದ ಕಾವ್ಯದ ಬಂಧ ಬಿಗುವಾಗುತ್ತದೆ ಅಂತ ಅರ್ಥ.

'ಛದಿ ಆಹ್ಲಾದೇ' ಅಂದರೆ ಆಹ್ಲಾದ ಕೊಡುವದರಿಂದ. 'ವಾಕ್ಯಂ ರಸಾತ್ಮಕಂ ಕಾವ್ಯಂ' ಅಂತ ನಾವೆಲ್ಲ ತಿಳಿದಿದ್ದೇ ಆಗಿದೆ. ಆದುದರಿಂದ ಛಂದಸ್ಸಿನಿಂದಾಗಿ ಕಾವ್ಯದಲ್ಲಿ ರಸೋತ್ಪತ್ತಿ ಉಂಟಾಗುತ್ತದೆ ಅಂತ ಗ್ರಹಿಸಬಹುದು.

'ಛದಪವಾರಣೇ' ಅಂದರೆ ದೋಷಗಳನ್ನು ನಿವಾರಣೆ ಗೊಳಿಸುವದು.

ಯಾಸ್ಕನು 'ಛಂದಾಂಸಿ ಛಾದನಾತ್' ಅಂತ ಹೇಳಿದ್ದಾನೆ. (ಬೆತ್ತಲೆಯಾದ ಶುಷ್ಕ ಸಾಹಿತ್ಯಕ್ಕೆ ಅಲಂಕಾರದ ಹೊದಿಕೆ ಹೊದೆಸುವದು ಛಂದಸ್ಸು)

ಇವೆಲ್ಲವುಗಳೂ ಸಾಹಿತ್ಯದಲ್ಲಿ ಛಂದಸ್ಸಿನಿಂದಾಗುವ ಲಾಭ ಹಾಗೂ ಪ್ರಯೋಜನಗಳನ್ನು ದಾಖಲಿಸುತ್ತವೆ.

ಪದ್ಯಗಳ ಲಯವನ್ನು ಹಿಡಿದಿಡುವದು ಛಂದಸ್ಸು. ಲಯಗಳು ಎಲ್ಲಾ ಪದ್ಯಗಳಲ್ಲಿಯೂ ಒಂದೇ ತರನಾಗಿರುವದಿಲ್ಲ. ಕೇವಲ ಸಂಸ್ಕರಿಸಲ್ಪಟ್ಟ ಕಾವ್ಯಗಳಲ್ಲಿ ಮಾತ್ರವಲ್ಲ, ಜನಸಾಮಾನ್ಯರು ವಿಶೇಷವಾಗಿ ಹಳ್ಳಿಯ ಹೆಂಗಸರು ಹಾಡುವ ಜಾನಪದ ಹಾಡುಗಳೂ ಛಂದಸ್ಸಿಗೊಳಗಾಗಿಯೇ ಇವೆ. ಅಂದರೆ ಇದು ಕೇವಲ ಶಿಕ್ಷಣದಿಂದ ಬರುವಂತದ್ದಲ್ಲ. ಬಹುತೇಕವಾಗಿ ಈ ಛಂದಸ್ಸು ಬುದ್ಧಿಪೂರ್ವಕವಾಗಿ ಛಂದಸ್ಸನ್ನು ಅನುಲಕ್ಷಿಸಿ, ನೀರನ್ನು ಒಡ್ಡುಕಟ್ಟಿ ಹಾಯಿಸಿದ ಹಾಗೆ, ರಚಿಸಿದ ಕಾವ್ಯವಾಗಿರದೇ, ಸಹಜ ಸ್ಫೂರ್ತಿಯಿಂದ, ನೀರಿನ ಒರತೆಯ ಹಾಗೆ, ಹುಟ್ಟಿಕೊಳ್ಳುವ ಪದ್ಯವಾಗಿರುತ್ತದೆ.

ಈ ಲಯ ವಿಧಾನಗಳು ಬೇರೆ ಬೇರೆ ಭಾಷೆಗಳಲ್ಲಿ ಬೇರೆ ಬೇರೆಯಾಗಿರುತ್ತವೆ. ಛಂದಸ್ಸಿನ ಇತಿಹಾಸ ವೇದಕಾಲಕ್ಕಿಂತಲೂ ಪೂರ್ವದಲ್ಲಿಯೇ ಕಂಡುಬರುತ್ತದೆ. ಛಂದಸ್ಸನ್ನು ವೇದಾಂಗಗಳಲ್ಲಿ ಒಂದನ್ನಾಗಿ ಗುರುತಿಸಲಾಗಿದೆ.

ಪ್ರಾಚೀನ ಸಂಸ್ಕೃತ ವೈದಿಕ ಸಾಹಿತ್ಯದಲ್ಲಿಯೇ ಛಂದಸ್ಸಿನ ಲಕ್ಷಣಗಳನ್ನು ಕಾಣಬಹುದು. ವೈದಿಕ ಸಾಹಿತ್ಯದಲ್ಲಿ ತನ್ನದೇ ಆದ ಸ್ವರಘಾತದಿಂದ (ಉದಾತ್ತ, ಅನುದಾತ್ತ ಹಾಗೂ ಸ್ವರಿತ) ವೇದಮಂತ್ರಗಳು ಅರ್ಥ ವ್ಯತ್ಯಾಸದ ಜೊತೆ ಗೇಯತೆಯನ್ನೂ ಬದಲಿಸುತ್ತವೆ. ಹಾಗೆಯೆ ಕಾವ್ಯ– ಪುರಾಣಗಳಂತಹ ಸಂಸ್ಕೃತ ಲೌಕಿಕ ಕಾವ್ಯಗಳಲ್ಲಿ ಪದ್ಯಪಾದಗಳಲ್ಲಿರುವ ಅಕ್ಷರಗಣ ಸಂಖ್ಯೆಯನ್ನು ಅನುಸರಿಸಿ ಪದ್ಯವು ನಡೆಯುತ್ತದೆ. ಹೀಗೆ ಛಂದಸ್ಸಿಗನುಗುಣವಾದ ಪದ್ಯವನ್ನು 'ಶ್ಲೋಕ' ಅಂತ ಕರೆಯುತ್ತಾರೆ.

ಕನ್ನಡದಲ್ಲಿಯ ವೃತ್ತಗಳಲ್ಲಿ ಸಂಸ್ಕೃತದಂತೆ ಅಕ್ಷರಗಳನ್ನು ಅನುಲಕ್ಷಿಸಿ ಪದ್ಯಪ್ರಯೋಗವಾದರೂ ಉಳಿದಂತೆ ಕೇವಲ ಅಕ್ಷರಗಳನ್ನು ಅನುಲಕ್ಷಿಸಿ ಪದ್ಯ ರಚನೆಯಾಗುವದಿಲ್ಲ. ಇಲ್ಲಿಯ ಪದ್ಯಗಳು ಹೆಚ್ಚಾಗಿ ಮಾತ್ರಾಗಣಗಳುಳ್ಳವುಗಳಾಗಿವೆ. ದ್ವಿಪದಿ, ತ್ರಿಪದಿ, ಚೌಪದಿ, ಕಂದ, ಷಟ್ಪದಿ, ಮೊದಲಾದ ಪದ್ಯಭೇದಗಳು ಮಾತ್ರಾಗಣಗಳನ್ನೇ ಅವಲಂಬಿಸಿರುತ್ತವೆ. ಕನ್ನಡದ ಬಹುತೇಕ ಕಾವ್ಯಗಳಲ್ಲಿ ಇಂತಹ ಛಂದಸ್ಸನ್ನೇ ಕಾಣುತ್ತೇವೆ.

ಛಂದಸ್ಸಿಗೆ ಆಧಾರ ಗ್ರಂಥವಾಗಿ ಪಿಂಗಳನ ಕೃತಿ 'ಛಂದಸ್ಸೂತ್ರವನ್ನು' ಲಕ್ಷಿಸುತ್ತಾರೆ. ಇದಕ್ಕೆ ವ್ಯಾಖ್ಯಾನವನ್ನು 'ಭಟ್ಟ ಹಲಾಯುದನು' ರಚಿಸಿರುತ್ತಾನೆ. ವೇದಗಳ ಮಂತ್ರಗಳಾದ ಗಾಯತ್ರಿ, ಅನುಷ್ಟುಪ್, ತ್ರಿಷ್ಟುಪ್ಗಳು ಆ ಆ ಮಂತ್ರಗಳ ಛಂದಸ್ಸಿನಿಂದಾಗಿ, ಅಂತಹ ಛಂದಸ್ಸುಗಳಿಗೆ ಗಾಯತ್ರಿ, ಅನುಷ್ಟುಪ್, ತ್ರಿಷ್ಟುಪ್ ಹೀಗೆ ಹೆಸರುಗಳನ್ನು ಗಮನಿಸಬಹುದು.

ಛಂದಸ್ಸಿನಿಂದಾಗಿ ಕಾವ್ಯಕ್ಕೆ ಗೇಯತೆ ಬರುತ್ತದೆ ಎನ್ನುವದನ್ನು ನಾವು ಈ ಹಿಂದೆಯೇ ತಿಳಿದಿರುತ್ತೇವೆ. ಗೇಯತೆ ಎನ್ನುವದು ಸಂಗೀತಕ್ಕೆ ಸಹಕರಿಸುವ ಅಂಶ. ಇದಕ್ಕಾಗಿಯೇ, 'ಸಾಹಿತ್ಯವನ್ನು ಸಂಗೀತಕ್ಕೆ ಅಳವಡಿಸುವಂತೆ ಮಾರ್ಪಡಿಸುವ ಮಾಧ್ಯಮವೇ ಛಂದಸ್ಸು' ಅಂತ ಛಂದಸ್ಸನ್ನು ಗುರುತಿಸುವದುಂಟು. ಆದರೆ ಛಂದಸ್ಸು ಸಾಹಿತ್ಯದ ಅಂಗವೇ ಹೊರತು ಸಂಗೀತದ ಅಂಗವಲ್ಲ. ಆದುದರಿಂದ ಸಂಗೀತದ ಸಕಲ ಲಕ್ಷಣಗಳನ್ನು ಛಂದಸ್ಸಿನಲ್ಲಿ ಹುಡುಕಬಾರದು.

ಆದರೆ ಡಿ.ಎಸ್.ಕರ್ಕಿಯವರು 'ಛಂದಸ್ಸು ಒಂದು ಕೈಯಲ್ಲಿ ಕಾವ್ಯವನ್ನು ಹಾಗೂ ಇನ್ನೊಂದು ಕೈಯಲ್ಲಿ ಸಂಗೀತವನ್ನು ತೋರಿಸುತ್ತದೆ' ಅಂತ ಹೇಳಿ ಛಂದಸ್ಸು ಹೇಗೆ ಕಾವ್ಯ ಹಾಗೂ ಸಂಗೀತವನ್ನು ಬೆಸೆದಿರುತ್ತದೆ ಅಂತ ವಿವರಿಸಿದ್ದಾರೆ.

ಜಯಕೀರ್ತಿ ಎನ್ನುವ ಸಂಸ್ಕೃತ ಪಂಡಿತನು 'ಛಂದೋನುಶಾಸನ' ಎನ್ನುವ ಛಂದಶ್ಶಾಸ್ತ್ರ ಕುರಿತಾದ ಕೃತಿಯನ್ನು ರಚಿಸಿದ್ದಾನೆ. ಇವನು ತನ್ನ ಈ ಕೃತಿಯಲ್ಲಿ 'ಕಾವ್ಯಸಾಗರವನ್ನು ದಾಟುವ ಬಯಕೆಯುಳ್ಳವನಿಗೆ ಛಂದಶ್ಶಾಸ್ತ್ರವೇ ನೌಕೆ' ಎಂದು ಹೇಳಿ ಕಾವ್ಯದಲ್ಲಿ ಛಂದಸ್ಸಿನ ಮಹತ್ತಿಕೆಯನ್ನು ಸಾರಿದ್ದಾನೆ.

ಹೀಗೆ ಕನ್ನಡವಿರಲಿ, ಸಂಸ್ಕೃತವಿರಲಿ ಅಥವಾ ಇತರ ಯಾವುದೇ ಭಾಷೆಗಳಿರಲಿ ಛಂದಸ್ಸಿನ ಅನುಸಾರವಾಗಿ ರಚಿತವಲ್ಲದ ಕಾವ್ಯ ಅಥವಾ ಕವಿತೆಗಳು ಸಂಗೀತಕ್ಕೆ ಹೊಂದುವದಿಲ್ಲ ಅಂತಲೂ, ಕಾವ್ಯದ ಸಂಪೂರ್ಣ ರಸವನ್ನು ಅನುಭವಿಸಲು ಛಂದಸ್ಸಿನ ತಿಳುವಳಿಕೆ ಅನಿವಾರ್ಯ ಅಂತಲೂ ಹೇಳುವದು ಸರಿಯಿದೆ ಅಂತ ಅನಿಸದೇ ಇರದು.

***

ನಾ ಕಂಡಂತೆ ಕಂಸಾಳೆ

– ಸ್ನೇಹ ಶಶಿಧರ್

2021ರಲ್ಲಿ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಏನಾದರೂ ವಿಶೇಷವಾಗಿ ಮಾಡಬೇಕೆಂಬ ಉದ್ದೇಶದಿಂದ ನಾವು ಗೆಳತಿಯರೆಲ್ಲ ಸೇರಿ "ಕಂಸಾಳೆ" ಎಂದು ತೀರ್ಮಾನಿಸಿದೆವು. ಆಗ ಯೂಟ್ಯೂಬ್‌ನಲ್ಲಿ ವಿಡಿಯೋ ನೋಡಿದೆವು. ಸುಲಭವೆನಿಸಿತು. ಆದರೆ ಫಾರ್ಮೇಶನ್ಸ್ ನೋಡಿ ಭಯವಾಯಿತು. ಇನ್ನೂ ಯೂಟ್ಯೂಬ್ ನೋಡಿ, ಮಾಡಿ ಅಭಾಸವಾಗಬಹುದೆಂದು ನಮ್ಮ ಲಕ್ಷ್ಮಿ ಹೇಳಿದಳು. ಆಗ ನಮ್ಮ ನೆರವಿಗೆ ಬಂದದ್ದು ನಮ್ಮ ನಿವೃತ್ತ ಸಹೋದ್ಯೋಗಿ ಮೀನಾಕ್ಷಿ ಮೇಡಂ. ಅವರು ಕಾರ್ತಿಕ್ ಉಪಮನ್ಯುರವರನ್ನು ಪರಿಚಯಿಸಿದ್ದರು.

ನಾವು ಆ ಸಂಜೆಯೇ ಗುರುಗಳ ಭೇಟಿಗಾಗಿ ಅವರ ಮನೆಗೆ ಹೋದೆವು. ನಮಗಿಂತ ವಯಸ್ಸಿನಲ್ಲಿ ಕಿರಿಯರು. ವಯಸ್ಸಿಗೆ ಮೀರಿದ ಪಾಂಡಿತ್ಯ. ಅವರ ಮನೆಯ ಮೇಲ್ಮಹಡಿಯೇ ನಮ್ಮ ನೃತ್ಯಶಾಲೆ. ಅಟ್ಟದ ಮೇಲೆ ಇಟ್ಟಿರುವ ಡಮರುಗ, ಢೋಲು, ತಮಟೆ, ಕಂಭಗಳು, ಅಲ್ಲಲ್ಲಿ ಜೋಡಿಸಿರುವ ಫಲಕಗಳು. ಅವರ ಮನೆಯೇ ವಸ್ತು ಸಂಗ್ರಹಾಲಯವೆಂಬಂತೆ ಕಂಡಿತು.

ನಮ್ಮ ತಂಡದಲ್ಲಿ ಕೆಲವರು ಸೇರಿದರು, ಕೆಲವರು ಬಿಟ್ಟರು. ಹಾಗೂ ಹೀಗೂ ಏಳು ಜನ ಖಾತ್ರಿಯಾದೆವು. ಕೆಲವೇ ದಿನಗಳಲ್ಲಿ ನಮ್ಮ ಕೈಲಿ ಕಂಸಾಳೆ ಮಾಡಲಾಗುವುದಿಲ್ಲವೆಂದು ಗುರುಗಳಿಗೆ ತಿಳಿಯಿತು. ಆಗ ಅವರು ಸೂಚಿಸಿದ್ದು ಪಟ ಕುಣಿತ ಹಾಗೂ ಪೂಜಾ ಕುಣಿತ. 2021ರ ಕಾರ್ಯಕ್ರಮ ಅತಿ ಅದ್ಭುತವಾಗಿ ಮೂಡಿಬಂತು. ಅದರ ಹೆಮ್ಮೆ ನಮಗಿದ್ದರೂ ಕಂಸಾಳೆ ಮಾಡಲಾಗಲಿಲ್ಲವಲ್ಲವೆಂಬ ಕೊರಗಿತ್ತು. ಈ ವರ್ಷ (2023) ಸ್ವಲ್ಪ ಮುಂಚಿತವಾಗಿಯೇ ಅಭ್ಯಾಸ ಶುರುಮಾಡಿದೆವು. ನಮ್ಮ ಜೊತೆ ಬೇರೆ ಬ್ಯಾಂಕಿನ ಮಹಿಳೆಯರು ಕೈ ಜೋಡಿಸಿದರು.



28 ಸೆಪ್ಟೆಂಬರ್ 2023ರಿಂದ ನಮ್ಮ ಕಂಸಾಳೆ ಪಯಣ ಶುರುವಾಯಿತು. ಮೊದಲು ವ್ಯಾಯಾಮ– ಬೆಳಗಿನ ವಾಕಿಂಗ್/ ಯೋಗ ಬಿಟ್ಟು ಜಾಗಿಂಗ್ ಶುರುಹಚ್ಚಿಕೊಂಡೆವು. ನಮ್ಮಲ್ಲಿ ಹಲವರದು "ತೂಕದ" ವ್ಯಕ್ತಿತ್ವ. ನಮ್ಮಂಥವರಿಗೆ ನೃತ್ಯಾಭ್ಯಾಸ ಮಾಡಿಸುವುದು ಗುರುಗಳಿಗೆ ಕಬ್ಬಿಣದ ಕಡಲೆ. ಆದರೂ ಛಲಬಿಡದ ತ್ರಿವಿಕ್ರಮರಂತೆ ನಮ್ಮ ಅಭ್ಯಾಸ ಮುಂದುವರೆಯಿತು. ಕೆಲವೊಮ್ಮೆ ಇದೆಲ್ಲ ನಮಗೆ ಬೇಕಿತ್ತಾ ಎನಿಸಿದ್ದು ನಿಜ. ಅದರೆ ಚಪ್ಪಾಳೆಯ ನಶೆ ನಮ್ಮನ್ನು ಪ್ರೇರೇಪಿಸುತ್ತಲೇ ಇತ್ತು.

ಒಂದು ಬಾರಿ ಕಾರ್ತಿಕ್ ಸರ್ ಅವರ ಗುರುಗಳಾದ ಶ್ರೀ ಯು.ಎಸ್.ರಾಮಣ್ಣನವರನ್ನು ಭೇಟಿ ಮಾಡಿದೆವು. ಅವರು ಲೀಲಾಜಾಲವಾಗಿ ಕಂಸಾಳೆ ಬೀಸುವುದು ಕಂಡು ಬೆರಗಾಗಿದೆವು. ನಶಿಸಿ ಹೋಗುತ್ತಿದ್ದ ಜನಪದ ಕಲೆಗಳ ಉಳಿವಿಗೆ ಅವರು ಪಟ್ಟಿರುವ ಪರಿಶ್ರಮ ಅಪಾರ. ನಾವು ಅವರ ಶಿಷ್ಯರೆಂದು ಹೇಳಿಕೊಳ್ಳಲು ಬಹಳ ಹೆಮ್ಮೆ ಇದೆ.

ನವೆಂಬರ್ 2023ರಲ್ಲಿ ಒಮ್ಮೆ ಮೈಸೂರಿನ ವೀಣೆ ಶೇಷಣ್ಣ ಗಾನ ಭಾರತಿಯಲ್ಲಿ ಹಾಗೂ ಇನ್ನೊಮ್ಮೆ ಕಲಾಮಂದಿರದಲ್ಲಿ ನೃತ್ಯ ಪ್ರದರ್ಶಿಸಿದೆವು. ಅತ್ಯಂತ ಕ್ಲಿಷ್ಟಕರ ಅನುಭವ. ಒಟ್ಟಿಗೆ ಹದಿನೈದರಿಂದ ಹದಿನಾರು ನಿಮಿಷಗಳ ಕಾಲ ತ್ರಾಣ ಉಳಿಸಿಕೊಳ್ಳುವುದೇ ಸವಾಲು. ನಾವೆಲ್ಲರೂ ಬ್ಯಾಂಕ್ ಉದ್ಯೋಗಿಗಳು. ಮದುವೆಯಾಗಿ, ಮಕ್ಕಳಾಗಿರುವವರು. ಗಂಡು ಕಲೆಯಾದ ಕಂಸಾಳೆಗೆ ನಮ್ಮ ದೇಹ ಸ್ಪಂದಿಸಿದ ರೀತಿಯಲ್ಲಿ ನಿಜಕ್ಕೂ ನಮಗೆ ಆತ್ಮಾಭಿಮಾನ ತುಂಬಿತು.

ಆರು ತಿಂಗಳ ಬಳಿಕ ಇದೇ ಜುಲೈ 01ರ ಸ್ಟೇಟ್ ಬ್ಯಾಂಕ್ ದಿನಾಚರಣೆಗೆ ಸ್ಥಳೀಯ ಪ್ರಧಾನ ಕಚೇರಿ, ಬೆಂಗಳೂರಿಗೆ ಇದೇ ಕಂಸಾಳೆಯನ್ನು ಪ್ರದರ್ಶಿಸಲು ಕರೆ ಬಂದಿತು. ಅತ್ಯಂತ ಸಂತೋಷದ ಸಂಗತಿ. ನಮ್ಮ ಸರ್ಕಲ್ ಸಿಜಿಎಂ ಮುಂದೆ ಪ್ರದರ್ಶಿಸುವುದು ನಮಗೆ ಬಹಳ ಖುಷಿಯ ವಿಷಯ. ಗುರುಗಳಿಗೆ ತಿಳಿಸಿದಾಗ ಅವರು ಒಂದು ಸಲಹೆ ನೀಡಿದರು. ಹೇಗಿದ್ದರೂ ಬೆಂಗಳೂರಿಗೆ ತೆರಳುತ್ತಿದ್ದೇವೆ. ಇನ್ನೂ ಎಲ್ಲಾದರು ಬೇರೆ ಕಡೆ ಪ್ರದರ್ಶಿಸಲು ಅವಕಾಶ ಸಿಕ್ಕರೆ ನೋಡಿ. ಸದಾ ನಮ್ಮ ಕಂಫರ್ಟ್ ಜೋನ್‌ನಲ್ಲಿ ನೃತ್ಯವಾಡುವ ನಮಗೆ ಬೇರೆ ಹೊಸ ಮುಖಗಳ ಸಮ್ಮುಖದಲ್ಲಿ ಹೇಗೆ ಆಗುವುದೊ ನೋಡೋಣ ಎಂದರು.

ಅದರಂತೆ ಉಳ್ಳಾಲದ ಒಂದು ಶಾಲೆಯಲ್ಲಿ ವೈದ್ಯರ ದಿನಚರಣೆಯ ಪ್ರಯುಕ್ತ ಏರ್ಪಡಿಸಿದ್ದ ಕಾರ್ಯಕ್ರಮಕ್ಕೆ ಹೋಗಿ ಕಂಸಾಳೆ ಪ್ರದರ್ಶಿಸಿದೆವು. ಮಕ್ಕಳಂತೂ ತುಂಬಾ ಇಷ್ಟಪಟ್ಟರು, ನಮ್ಮ ಕಂಸಾಳೆಯ ತಾಳದೊಂದಿಗೆ ಚಪ್ಪಾಳೆ ಹಾಕಿ ಪ್ರೋತ್ಸಾಹಿಸಿದರು.



01.07.2024ರಂದು ನಡೆದ ಸ್ಟೇಟ್ ಬ್ಯಾಂಕ್ ದಿನಾಚರಣೆಯಲ್ಲಿ ಕಂಸಾಳೆ ಪ್ರದರ್ಶಿಸಿದ ಮಹಿಳಾ ಕಲಾವಿದರ ತಂಡ – ಬ್ಯಾಂಕಿನ ಉನ್ನತ ಅಧಿಕಾರಿಗಳೊಂದಿಗೆ

ಮುಖ್ಯ ಶಿಕ್ಷಕರಂತೂ ನಮಗೆ ಗೌರವ ಸಮರ್ಪಿಸುತ್ತ, "ಇವರೆಲ್ಲ ಬ್ಯಾಂಕ್ ಉದ್ಯೋಗಿಗಳು. ತಮ್ಮ ಒತ್ತಡಗಳ ನಡುವೆ ಹವ್ಯಾಸಕ್ಕೆ ಸಮಯ ಮಾಡಿಕೊಂಡು ಈ ಹಂತ ತಲುಪಿದ್ದಾರೆ. ಇವರನ್ನು ನೋಡಿ ನಮ್ಮ ಶಿಕ್ಷಕರೆಲ್ಲ ಪಾಠ ಕಲಿಯಬೇಕು" ಎಂದರು. ಹೆಮ್ಮೆಯಾದರೂ ಬೇರೆ ಶಿಕ್ಷಕರು ನಮ್ಮನ್ನು ಬೈಕೊಂಡಿರಬಹುದು ಎನಿಸಿತು. ಒಳ್ಳೆಯತನದಲ್ಲಿ ನೋಡಿದರೆ ನಾವು ಒಬ್ಬರ ಜೀವಕ್ಕೆ ಸ್ಫೂರ್ತಿಯಾದವೆಲ್ಲ ಅಂತ ತೃಪ್ತಿಪಟ್ಟೆವು.

ಸ್ಥಳೀಯ ಪ್ರಧಾನ ಕಚೇರಿಯ ಕಾರ್ಯಕ್ರಮದಲ್ಲಿ ನಮ್ಮದೊಂದೇ ಹದಿನೈದು ನಿಮಿಷಗಳ ಕಾಲಾವಕಾಶ. ರಾಜ್ಯದ ಮೂಲೆ ಮೂಲೆಯಿಂದ ಬಂದಿದ್ದ ಪ್ರತಿಭೆಗಳೆಲ್ಲ ಒಂದಕ್ಕಿಂತ ಒಂದು ಮೇಲುಗೈ ಸಾಧಿಸುತ್ತಿದ್ದರು. ಎಲ್ಲರ ನಡುವೆ ನಮ್ಮ ನೃತ್ಯ ಎಲ್ಲಕ್ಕಿಂತ ವಿಭಿನ್ನ ಹಾಗೂ ಕಣ್ಣು ಕಟ್ಟುವಂತಿತ್ತು ಎಂಬ ಅಹಂ ನಮಗಿದೆ. ಮರುದಿನ ಸರ್ಕಲ್ ವೆಬ್‌ಸೈಟ್‌ನಲ್ಲಿ ನಮ್ಮ ಭಾವಚಿತ್ರಗಳನ್ನು ಕಂಡು ಅಪಾರ ಹೆಮ್ಮೆಯಾಯಿತು.



ಒಟ್ಟು ನಾಲ್ಕು ಬಾರಿ ಪ್ರದರ್ಶನ ಕೊಟ್ಟಿರುವ ನಮಗೆ ಅಭಿಮಾನಿಗಳು ಹುಟ್ಟಿರುವುದು ಸರಿಯೇ. ನಮ್ಮ ಯಶಸ್ಸಿಗೆ ಆ ಮಾದಪ್ಪನೆ ಕಾರಣವೆಂದು ನಾವು ತಿಳಿದಿದ್ದೆವು. ಮಲೈಮಹದೇಶ್ವರ ಬೆಟ್ಟಕ್ಕೆ ಹೋಗಿ ಭಗವಂತನ ಅನುಗ್ರಹಕ್ಕೆ ಪಾತ್ರವಾಗ ಬೇಕೆಂದು ನಿರ್ಧರಿಸಿದೆವು. ಕುಟುಂಬದವರು, ಸ್ನೇಹಿತರು ಇನ್ನೂ ಅನೇಕರು ಸೇರಿ ರಥಯಾತ್ರೆ ದಿನದಂದು ದಂಡು ದಾಳಿ ಸಮೇತ ರಥ (ಬಸ್) ಮಾಡಿಕೊಂಡು ಹೊರಟು ನಿಂತೆವು.

ದಾರಿಯಲ್ಲಿ ಒಂದೆರಡು ದೇವಸ್ಥಾನ ದರ್ಶನ ಪಡೆದು, ಕೆಲವು ಛಾಯಾಚಿತ್ರಗಳನ್ನು ಕ್ಲಿಕ್ಕಿಸಿಕೊಂಡು, ತಿಂಡಿಗೆ ಅಲ್ಲಿ ಇಲ್ಲಿ ನಿಲ್ಲಿಸಿ ಆಗೋ ಸಿಕ್ಕೇಬಿಟ್ಟಿತು ಪಾದ. ಅಲ್ಲಿ ಧೂಪ ಹಚ್ಚಿ, ಎಪ್ಪತ್ತೇಳು ಬೆಟ್ಟ ಹತ್ತಲು ಅಣಿ ಯಾದೆವು. ಬೆಟ್ಟಗಳನ್ನು ಹತ್ತಿ, ಇಳಿದು, ಸಣ್ಣ ಹೇರ್‌ಪಿನ್ ಕರ್ವ್ ನಡುವೆ ಪ್ರಕೃತಿ ಸೌಂದರ್ಯದಲ್ಲಿ ಮಿಂದು ಕೂತೆವು.

ಅಲ್ಲೊಂದು ದೂರದಲ್ಲಿ ದೊಡ್ಡ ಕಂಚಿನ ಮೂರ್ತಿ ಕಾಣತೊಡಗಿತು. ಕೊನೆಗೂ ತಲುಪುವ ಲಕ್ಷಣ ಕಾಣಿತಲ್ಲ ಅಂತ ಸಮಾಧಾನಪಟ್ಟೆವು. ಬೆಟ್ಟ ತಲುಪಿ ಸಾಲಿನಲ್ಲಿ ನಿಂತು ಪರಮಾತ್ಮನ ದರ್ಶನ ಪಡೆದೆವು. ಒಳಗಿರುವ ಪರಮಾತ್ಮನನ್ನು ತೃಪ್ತಿಪಡಿಸಲು ಭೋಜನ ಶಾಲೆಗೆ ತೆರಳಿ ಪ್ರಸಾದ ಸ್ವೀಕರಿಸಿದೆವು. ಇನ್ನೂ ಏನೋ ಕೊರತೆ ಕಾಡುತ್ತಿತ್ತು. ಆಗ ನಮ್ಮ ನೃತ್ಯ ತಂಡದವರೆಲ್ಲರೂ ಸೇರಿ ಕಂಸಾಳೆ ಕೈಲಿ ಹಿಡಿದು ಅಲ್ಲೇ ಪ್ರಾಕಾರದಲ್ಲಿ ಸಿದ್ದರಾದೆವು. ಅಲ್ಲಿ ಭಿಕ್ಷಾಟನೆಯಲ್ಲಿ ನಿರತರಾಗಿದ್ದ ದಾಸರಿಗೆ ನಮ್ಮನ್ನು ಕಂಡು ಆಶ್ಚರ್ಯ. ಎಲ್ಲಿ ತಮ್ಮ ಕೆಲಸ ಕಿತ್ತುಕೊಳ್ಳುವರೋ ಎಂಬ ಸಂಶಯ. ನಮ್ಮ ಮುಂದೆ ಮೂರ್ನಾಲ್ಕು ದಾಸರು ಬಂದು ನಮ್ಮನ್ನು ದಿಟ್ಟಿಸಿ ನೋಡುತ್ತಿದ್ದರು. ಅಷ್ಟರಲ್ಲಿಯೇ ನಮ್ಮ ಗುರುಗಳು ದಮಡಿ ವಾದ್ಯ ನುಡಿಸಿದರು. ನಾವು ವೃತ್ತಾಕಾರದಲ್ಲಿ ನಿಂತು ಕುಣಿಯಲಾರಂಭಿಸಿದೆವು. ಅಲ್ಲಲ್ಲಿ ನೆರೆದಿದ್ದ ಜನರೆಲ್ಲ ಬಿಟ್ಟ ಕಣ್ಣು ಬಿಟ್ಟು ನಮ್ಮ ಸುತ್ತ ಬಂದು ನಿಂತರು. ದಾಸರು ನಮ್ಮಿಂದ ಅವರಿಗೆ ತೊಂದರೆ ಇಲ್ಲವೆಂದು ಮನವರಿಕೆಯಾದ ನಂತರ ಗುರುಗಳ ಜೊತೆ ತಮ್ಮ ಕಂಸಾಳೆಯು ಒಗ್ಗೂಡಿಸಿ ತಾಳ ಹಾಕಿದರು. ಸುಮಾರು ಜನ ವೀಡಿಯೋ ಮಾಡಿಕೊಳ್ಳುತ್ತಿದ್ದರು. ನಾವೂ ನಿಶ್ಚಯಿಸಿದ್ದಕ್ಕಿಂತ ಹೆಚ್ಚೇ ಕುಣಿದೆವು. ಎಲ್ಲರೊಳಗೊಂದಾಗು ಮಂಕುತಿಮ್ಮ ಎಂಬುವಂತೆ ನಾವು ಅಲ್ಲಿ ನೆರೆದಿದ್ದ ಮಹದೇಶ್ವರನ ಒಕ್ಕಲಾಗಿ ಸಂತೃಪ್ತಿಯನ್ನು ಅನುಭವಿಸಿದೆವು. ನಮ್ಮ ಈವರೆಗಿನ ಅತ್ಯಂತ ಕಚ್ಚಾ ಪ್ರದರ್ಶನ ಇದಾಗಿತ್ತು. ಅತಿ ಹೆಚ್ಚು ಪ್ರೀತಿ ಕೊಟ್ಟ ಜನ, ಮಾದಪ್ಪನ ಅನುಗ್ರಹ ಆಂತರ್ಯದ ಸಂತೃಪ್ತಿ ತಂದುಕೊಟ್ಟಿತು. ಮಾದಪ್ಪನಲ್ಲಿ ನಮ್ಮ ಹರಕೆ ನೆರವೇರಿತು. ಹೃದಯ ತುಂಬಿ ಬಂತು. ಸಿಹಿ ನೆನಪುಗಳೊಡನೆ ಹಿಂದಿರುಗಿದೆವು.

***

ಕತೆ

ಸಂಗೀತ ಪ್ರೇಮಿ ರಾಜ

– ವಿಠ್ಠಲ ಇಜೇರಿ

ಕತೆ ಹೇಳುವುದು, ಕತೆ ಕೇಳುವುದು ಎರಡೂ ಮನಸ್ಸಿಗೆ ಮುದ ನೀಡುವುವು. ಕತೆ ಹೇಳುವುದನ್ನು ಮನಸ್ಸು ಎಂದಿಗೂ ನಿಲ್ಲಿಸುವುದಿಲ್ಲ. ಪ್ರತಿನಿತ್ಯ ಮನಸ್ಸು ಕತೆ ಹೆಣೆಯುತ್ತಿರುತ್ತದೆ. ಯಾಕೆಂದರೆ ನಮ್ಮ ಬದುಕು ಒಂದು ಕತೆಯೇ ಆಗಿರುತ್ತದೆ. ಮನಸ್ಸು ಹೇಳುವ ಕತೆಗಳಲ್ಲಿ ಹೆಚ್ಚಿನವು ಋಣಾತ್ಮಕವಾಗಿರುತ್ತವೆ. ನಾವು ಇತರರಿಗಿಂತ ಕಡಿಮೆ ಎಂದು ಭಾವಿಸುವುದೇ ಹೆಚ್ಚು.

ನಾವು ಮನಸ್ಸಿಗೆ ಅಭ್ಯಾಸ ಮಾಡಿಸಿ ನಮ್ಮ ಚಿಂತನೆಗಳು ಸಕಾರಾತ್ಮವಾಗಿರುವಂತೆ ನೋಡಿಕೊಳ್ಳಬೇಕು. ಕಾಲ್ಪನಿಕ ಲೋಕದಲ್ಲಿ ವಿಹರಿಸುವ ಪಾತ್ರಗಳಿಗೆ ಕತೆಗಾರನು ತನ್ನದೇ ರೀತಿಯಲ್ಲಿ ಜೀವ ತುಂಬುತ್ತಾನೆ. ಅದು ಓದುಗನ, ಕೇಳುಗನ ಮನಸ್ಸಿನ ಮೇಲೆ ಅಳಿಸಲಾಗದ ಪರಿಣಾಮ ಬೀರುತ್ತದೆ. ಈ ಜಗತ್ತಿನಲ್ಲಿ ಒಬ್ಬೊಬ್ಬರೂ ಒಂದೊಂದು ರೀತಿ. ಪ್ರತಿಯೊಬ್ಬರೂ ತಮ್ಮದೇ ಆದ ರೀತಿಯಲ್ಲಿ ಬದುಕುತ್ತಿರುತ್ತಾರೆ. ಬೇರೆಯವರ ಮೇಲೆ ನಮ್ಮ ಬದುಕನ್ನು ಹೇರಲು ಯತ್ನಿಸಬಾರದು. ನಮ್ಮ ಹವ್ಯಾಸ ನಮಗೆ, ಇತರರ ಅಭ್ಯಾಸ, ಹವ್ಯಾಸಗಳು ಅವರಿಗೆ ಸೇರಿದ್ದು. ಇತರರ ಬದುಕಿನಲ್ಲಿ ನಾವು ಇಣುಕುವ ಯತ್ನ ಮಾಡಬಾರದು. ಅದನ್ನು ಬಿಂಬಿಸುವ ಚಿಕ್ಕ ಕತೆ.

ಒಬ್ಬ ರಾಜನಿದ್ದ. ಅವನು ಸಂಗೀತ ಪ್ರಿಯ. ಸಂಗೀತ ಕೇಳುತ್ತ ಕೇಳುತ್ತ ಅವನು ಧ್ಯಾನಸ್ಥ ಸ್ಥಿತಿಯನ್ನು ತಲುಪಿ ಅಪಾರವಾದ ಆನಂದವನ್ನು ಪಡೆಯುತ್ತಲಿದ್ದ. ಸ್ವತಃ ಅವನು ಉತ್ತಮ ಶಾರೀರ ಹೊಂದಿದ್ದು, ಚೆನ್ನಾಗಿ ಹಾಡುತ್ತಲಿದ್ದ. ಅರಸನಿಗೆ ತಾನು ಸಂಗೀತದಿಂದ ನೆಮ್ಮದಿ ಮತ್ತು ಮನಶ್ಶಾಂತಿ ಪಡೆಯುವಂತೆ ತನ್ನ ಪ್ರಜೆಗಳೂ ಸುಖದಿಂದ, ಆನಂದದಿಂದ ಸಂಗೀತದ ಸಂಗದಲ್ಲಿ ಇರಲಿ ಎಂಬ ಸದುದ್ದೇಶದಿಂದ ತನ್ನ ರಾಜ್ಯದ ಪ್ರಜೆಗಳು ಸಂಗೀತ ಕಲಿಯಬೇಕು. ದಿನನಿತ್ಯದ ವ್ಯವಹಾರದಲ್ಲಿ ಸಂಗೀತ ಉಪಯೋಗಿಸಬೇಕು ಎಂದು ಕಟ್ಟಳೆ ತಂದ. ಅಂದಿನಿಂದ ಬೆಳಗಿನ ಕಾಫಿಗೆ ಹೋಗುವ ಗೆಳೆಯರ ಮಾತು ಕವನಮಯವಾದವು.

ಕಾಫೀಗೆ ಹೋಗೋಣ ಬಾರೋ
ಕಾಸನು ಕೊಡೋಣ ಬಾರೋ
ಕಾಸನು ಕೊಟ್ಟು ಕಾಫಿಯ ಕುಡಿದು
ಖುಷಿಯಾಗಿ ಬರೋಣ ಬಾರೋ !!

ಅದಕ್ಕೆ ಗೆಳೆಯನ ಉತ್ತರ :

ಅಂತಿತಾ ಕಾಫಿ ಇಲ್ಲಿಲ್ಲ
ಇದರಂಥ ಕಾಫಿ ಬೇರೆ ಇಲ್ಲ
ನಾವ್ ಕುಡಿವ ಕಾಫಿ
ಬಿಸಿ ಬಿಸಿ ಸ್ಟ್ರಾಂಗ್ ಕಾಫಿ
ಎಲ್ಲೆಡೆ ಘಮ ಘಮ ಘಮಿಸುವ ಕಾಫಿ !!

ಇನ್ನು ಗಂಡ ಹೆಂಡತಿ ಸಂಭಾಷಣೆ :

ಹೆಂಡತಿ :
ಮಾಲುಗಳೆಲ್ಲೊ ಶಾಪುಗಳೆಲ್ಲೊ
ಅಲ್ಲೇ ಇರುವೆ ನಾ!
ನನಗೆ ನೀ ಕೊಡಿಸುವ ಸೀರೆಯ
ನೆನೆದು...ನೆನೆದು ಮರೆತು ಹೋದೆ ನಾ!!

ಗಂಡ :
ಎಲ್ಲೆಲ್ಲಿ ನೋಡಲಿ
ಅಲ್ಲೆಲ್ಲ ಸೀರೆಗಳಿವೆ
ಮನೆಯತುಂಬ ಸೀರೆಗಳಿರಲು
ಮನ ತುಂಬಾ ನಾನಿರಲು
ಮತ್ತೇಕೆ ಈ ಶಾಪು, ಆ ಮಾಲ್, ಆ ಸೀರೆ!

ಹುಡುಗ ಹುಡುಗಿಯರ ಮಾತುಕತೆ :

ಹುಡುಗ :
ಬೈಕ್ ಹಿಂದೆ ಜಾಗೆ ಇದೆ
ಬರ್ತೀಯೇನೇ,
ನನ್ನ ಸಂಗಡ ಸಂಜೆವರೆಗೂ ಇರತೀಯೇನೆ !!

ಹುಡುಗಿ :
ಬೇಡ ಹುಡುಗ,
ರಂಗು ರಂಗಿನ ಕನಸು ಬೇಡ
ಬಣ್ಣ ಬಣ್ಣದ ಮಾತನಾಡಿ
ಮನಸಿಗೆ ನೋವು ಬೇಡ.

ಹೊಸದಾಗಿ ಮದುವೆಯಾದ ಕನ್ಯೆಯರು ಗಂಡನನ್ನು ಕುರಿತು ಹೇಳುತ್ತಿದ್ದರು.

ಕುಂತ ಸಭಾದಾಗ ನಿಂತಗೊಂಡು ಹೇಳ್ತೀನಿ
ಎಂದಿದ್ರು ನನಗಂಡ ಸರದಾರ
ನಾಕು ಮಂದ್ಯಾಗ ಬಲು ಧೀರ
ಹ್ಯಾಂಗ್ ಮರೀಲೆವ್ವಾ ಅವನ ಸಂಸಾರ !!

ಹಿಂದೆಂದೂ ಕಾಣದ ಮುಂದೆಂದೂ ನೋಡದ
ತೋರಿಸಯಾನ ನನಗ ಮೈಸೂರ
ಮ್ಯಾಲೆ ತಿನಿಸ್ಯಾನ ಇಡ್ಲಿ ಸಾಂಬಾರ,
ಮತ್ತೆ ಕೊಡಿಸ್ಯಾನ ಜಿಲೇಬಿ, ಜಹಾಂಗೀರ
ಹ್ಯಾಂಗ್ ಮರೀಲೆವ್ವಾ ಅವನ ಸಂಸಾರ !!

ಹಳ್ಳಿಯ ಯುವತಿಯರು ಹೇಳೋದು :

ಇದ್ದೂರಿನಲ್ಲಿಯ ಮುದ್ದಾದ ಹುಡುಗಿ ನಾ,
ಮೊದಲ ನೋಟಕ್ಕೆ ಬಿದ್ದೆಯಲ್ಲೋ ,
ಪ್ರೀತಿಗೆ ನೀತಿಯ ಭಯ ಬೇಡ,
ಗೋಡೆ ಹಾರಿ ಬಳಿ ಬಾರೋ,!!

ಹೊತ್ತು ಮುಳುಗಿದ ಬಳಿಕ ಹಿತ್ತಲದೊಳಗಿರುವೆ
ಕತ್ತಲ ಆದ ಮೇಲೆ ಮೆತ್ತಗೆ ಬಾರೋ !!

ಯುವಕರು :

ಚಿಗರಿ ಮಾಟದ ಹೆಣ್ಣು ಎದುರಿಗೆ ಬಂದರೆ
ಬಾಣ ಬಡಿದಾಂಗ ಆಯ್ತೋ ಎದೆಯೊಳಗೆ
ಮಾರ್ಯಾಳ ಬಜಾರಕ ಬಂದಾಳ,
ಸಿಂಗಾರದ ಹುಡುಗನ್ನ ನೋಡಿ, ಮನೆಯೊಳಗಿನ ಗಂಡನ್ನ ಮರೆತಾಳ !!

ಮುದುಕ ಮುದುಕಿಯರು ಮಾತಾಡಿಕೊಂಡಿದ್ದರು:

ಮುದುಕ :
ಗುಟ್ಟೊಂದು ಹೇಳುವೆ ನೀ ಕೇಳು ಸತಿಯೇ ,
ಈಗ ಕೆಟ್ಟ ಬುದ್ದಿಯ ಸ್ವಾಮಿಗಳು, ನೀಚ ಬುದ್ದಿಯ
ಆಸಾಮಿಗಳು
ಕೆಟ್ಟೋಯ್ತು ಜಗ, ಕೆಟ್ಟೋಯ್ತು

ಮುದುಕಿ :
ನಾ ನಿನ್ನ ಬಿಡಲಾರೆ
ಕಳ್ಳ ಒಳ್ಳೆಯವನಾಗಲಾರ,
ಮಳ್ಳ ಬುದ್ದಿ ಬಿಡಲಾರ, ಸುಳ್ಳು ಬಾಳಿದು
ನಾಲ್ಕು ದಿನದ ಗೋಳಿದು, ಅದೇನೇ ಆಗಲಿ,
ನಾ ನಿನ್ನ ಬಿಡಲಾರೆ !!

ಹೀಗೆ ಎಲ್ಲೆಡೆ ರಾಗ, ತಾಳ, ಮಾನಸಗಳಿಲ್ಲದಿದ್ದರೂ ಎಲ್ಲರೂ ಅವರವರ ರೀತಿಯಲ್ಲಿ ಹಾಡಿನಲ್ಲಿ ಮಾತಾಡುತ್ತ ದೊರೆಯ ಕಟ್ಟಳೆ ಪಾಲಿಸುತ್ತಿದ್ದರು.

ಒಂದು ದಿನ ಅರಸನ ಕುದುರೆ ಲಾಯಕ್ಕೆ ಬೆಂಕಿ ಬಿತ್ತು. ಕುದುರೆ ಲಾಯದ ಅಧಿಕಾರಿ ಅರಸನ ಬಳಿ ವಿಷಯ ತಿಳಿಸಿ ಬೆಂಕಿ ಅವಘಡ ಬೇಗ ನಿವಾರಿಸಬೇಕು ಎಂದು ತಿಳಿಸಲು ಓಡಿಬಂದ. ಅವನು ಮಾಲಕಂಸ ರಾಗ ಕಲಿತಿದ್ದ. ಅರಸನಿಗೆ ಆ ರಾಗದಲ್ಲಿಯೇ,

ಹೇ, ಪ್ರಭೋ,... ಹೇ ಪ್ರಭೋ...
ಆನಂದ ದಾತಾ,
ಆ ನಂದದಾತಾ
ಹೇ ಪ್ರಭು ಅನ್ನದಾತಾ
ಪ್ರಭೋ ಅನ್ನದಾತಾ
ಅಗ್ನಿದೇವ ಆ ಅಗ್ನಿದೇವನ
ಕುಣಿತ, ಆಹಾ ಕುಣಿತ..
ಕುದುರೆ ಲಾಯದಲಿ !!

ಅರಸನಿಗೆ ಆ ಅಧಿಕಾರಿಯ ರಾಗಾಲಾಪ ಇಷ್ಟವಾದರೂ ಅದೇನೋ ಕಷ್ಟವೆಂದು ಅನಿಸಿ ಅಧಿಕಾರಿಗೆ "ಅದೇನು ವಿಷಯ ಹೇಳು, ನಿನ್ನ ರಾಗ ಈಗ ರೋಗದಂತೆ ಭಾಸವಾಗುತ್ತಲಿದೆ" ಅಂದ.

ಕುದುರೆ ಲಾಯದ ಅಧಿಕಾರಿ ಕುದುರೆ ಲಾಯಕ್ಕೆ ಬೆಂಕಿ ಬಿದ್ದ ವಿಷಯ ತಿಳಿಸಿದ. ಅರಸ ಅಧಿಕಾರಿಯೊಡನೆ ಓಡಿಬಂದು ನೋಡಿದ. ಲಾಯವೂ ಇಲ್ಲ, ಒಂದು ಕುದುರೆಯೂ ಇಲ್ಲ. ಅರಸ ತನ್ನ ಸಂಗೀತ ಸಂಭಾಷಣೆ ಕಟ್ಟಳೆ ಮರಳಿ ಪಡೆದ. ಅಂದರೆ ಸಕಲರಿಗೂ ಸಂಗೀತ ಕಾನೂನು ರೋಲ್ ಬ್ಯಾಕ್ ಅಂದ.

***

ಗಝಲ್

– ಸುಜಾತಾ ರವೀಶ್

ಅನುಮಾನ ಸದಾ ಸುಡುತಿಹ ದಾವಾನಲ ದಮನವಾಗದು ಎಂದೂ
ಅವಮಾನದ ಕಿಚ್ಚಿನ ತಾಪಧಗೆ ಬಡಬಾಗ್ನಿ ಶಮನವಾಗದು ಎಂದೂ

ಸಂಶಯದ ಗೋಡೆ ಕೆಡವಿ ನಂಬಿಕೆ ದಾರಿಯಲಿ ನಡೆಯಲಾಗದೆ ಹೇಳು
ಸಂತಾಪದ ತೆರೆಯ ಸರಿಸದಿರೆ ಸಂವಹನ ಸಹನವಾಗದು ಎಂದೂ

ಅಭಿಮಾನದ ಬಾಂಧವ್ಯಗಳ ಸುತ್ತ ಕಟ್ಟಬಾರದು ಸಂದೇಹದ ಹುತ್ತ
ಅವಮಾನದ ಗೆದ್ದಲು ಪುಡಿ ಮಾಡುವುದು ಮನನವಾಗದು ಎಂದೂ

ಮನಸೆಂಬ ಭಿತ್ತಿಯನು ಶುಭ್ರ ಧವಳ ಸ್ವಚ್ಛ ಇಟ್ಟುಕೊಂಡಿರಬೇಕು ಸದಾ
ಕಿನಿಸೆಂಬ ಮಸಿಯ ಚಿತ್ತಾರ ಬಿಡಿಸದಿರೆ ಮಲಿನವಾಗದು ಎಂದೂ

ಅರಿವಿನ ಜ್ಯೋತಿಯಲಿ ಹೃದಯ ಮಂದಿರ ಬೆಳಗಲಿ ಎಂದು ಸುಜಿಯಾಸೆ
ತಿಳಿವಿನಾ ಬೆಳಕ ಹರಿಸುತಿರೆ ವಿಚಕ್ಷಣೆ ಹನನವಾಗದು ಎಂದೂ

***

ನಗೆ ಬರಹ

SSLC ಜಸ್ಟ್ ಪಾಸ್

– ಎಂ ಎಸ್ ಎನ್

“ನಮ್ಮ ದೇಶದಲ್ಲಿ ತೆರಿಗೆ ಮತ್ತು ಹೆರಿಗೆ ಜಾಸ್ತಿ ಆಗ್ತಿದೆ” ಎಂದು ವಿಶ್ವ ಮಡದಿಗೆ ಹೇಳಿದ. ದಂಪತಿಗಳು ರೈಲಿನಲ್ಲಿ ಕೂತು ಪುಣ್ಯಕ್ಷೇತ್ರ ದರ್ಶನಕ್ಕೆ ಹೋಗುತ್ತಿದ್ದರು. ಎದುರು ಸೀಟಿನಲ್ಲಿ ಕುಳಿತಿದ್ದ ಸಹ ಪ್ರಯಾಣಿಕ ನಾಣಿ ಮಾಸ್ತರು ಚರ್ಚೆಯಲ್ಲಿ ಭಾಗವಹಿಸಿದರು.

“ತೆರಿಗೆ ಕಟ್ಟಬಹುದು, ಹೆರಿಗೆ ಮಾಡಿಸಬಹುದು, ಆದರೆ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಭವಿಷ್ಯ ರೂಪಿಸುವುದು ಕಷ್ಟ” ಎಂದರು.

“ಯಾವ ಕಡೆ ರೈಲು ಪ್ರಯಾಣ?” ಎಂದು ವಿಶ್ವ ಕೇಳಿದ.

“ಎಸ್.ಎಸ್.ಎಲ್.ಸಿ. ಪೇಪರ್ ವ್ಯಾಲ್ಯೂಯೇಷನ್ ಮುಗ್ಸಿದ್ ಮೇಲೆ ದೇವಸ್ಥಾನಕ್ಕೆ ಹೋಗಲೇಬೇಕು. ಇಲ್ಲವಾದರೆ ತಲೆ ಕೆಟ್ಟು ಹೋಗುತ್ತೆ, ಕೆಲವು ಮಕ್ಕಳು ಬರೆಯೋ ಉತ್ತರಗಳನ್ನ ಓದಿದರೆ ತಲೆಕೂದಲು ಕಿತ್ತಕೊಂಡು ಶರ್ಟ್, ಬನಿಯನ್ ಹರ್ಕೊಳ್ಳೋ ಹಂಗ್ ಆಗುತ್ತೆ, ನಮ್ಮ ವಿದ್ಯಾಮಟ್ಟ ಕೆಳಕ್ಕೆ ಇಳೀತಿದೆ” ಎಂದು ಆತಂಕ ವ್ಯಕ್ತಪಡಿಸಿದರು.

“ಅಷ್ಟು ಕೆಟ್ಟದಾಗಿ ಬರೀತಾರಾ?” ವಿಶಾಲೂಗೆ ಕುತೂಹಲ.

“ಫೋಟೋಸಿಂಥೆಸಿಸ್ ಅಂದ್ರೇನು ಎಂಬ ಪ್ರಶ್ನೆ ಇತ್ತು. ಸೂರ್ಯನ ಬೆಳಕಿನಲ್ಲಿ ಗಿಡಗಳಿಂದ ಆಮ್ಲಜನಕ ಬಿಡುಗಡೆ ಆಗುವ ಪ್ರಕ್ರಿಯೆ ಇದು ಅಂತ ಒಂದು ಪಾಯಿಂಟ್ ಹೇಳಿದ್ರೂ ನಾವು ಫುಲ್ ಮಾರ್ಕ್ಸ್ ಕೊಡ್ತಿದ್ದೆವು”

“ಏನಂತ ಉತ್ತರ ಕೊಟ್ಟಿದ್ರು?”

“ಫೋಟೋಸಿಂಥೆಸಿಸ್‌ಗೆ ಫೋಟೋಗ್ರಾಫರ್ ಕಾರಣ. ಆತ ಅಜ್ಜಿ ಫೋಟೋ ತೆಗೆದು ಸಿಂಥೆಟಿಕ್ ಗಾಜು ಮತ್ತು ಕಟ್ಟು ಹಾಕಿ ಕೊಡುತ್ತಾನೆ”.

“ಸಖತ್ ಕಾಮಿಡಿ” ಎಂದು ವಿಶಾಲು ನಕ್ಕಳು.

“ನ್ಯೂಟನ್ ಗುರುತ್ವಾಕರ್ಷಣೆಯ ಬಗ್ಗೆ ಕೇಳಿದಾಗ ಹುಡುಗ ಸೇಬಿನ ಮರ ಮರೆತು ತೆಂಗಿನಮರ ಹತ್ತಿದ್ದ. ನ್ಯೂಟನ್ ತೆಂಗಿನಮರದ ಕೆಳಗೆ ಕೂತಿದ್ದ, ಅವನ ತಲೆ ಮೇಲೆ ತೆಂಗಿನಕಾಯಿ ಬಿತ್ತು, ಆಗ ತಲೆ ಕಾಪಾಡಿಕೊಳ್ಳುವ ಬಗ್ಗೆ ಗುರುತ್ವಾಕರ್ಷಕ ನಿಯಮಗಳನ್ನು ಬರೆದ”.

“ಇಷ್ಟು ಕಳಪೇನಾ?”

“ನಮ್ಮ ವ್ಯವಸ್ಥೆ ಹಾಗಿದೆ, ನಮ್ಮ ವಿದ್ಯಾರ್ಥಿಗಳಿಗೆ ಗುಣಮಟ್ಟದ ಬೋಧನೆ ಆಗ್ತಿಲ್ಲ. ಭಾರತೀಯ ಸಂಸ್ಕೃತಿ ಬಗ್ಗೆ ರಾಮಾಯಣ, ಮಹಾಭಾರತ ಮೊದಲಾದ ಪುರಾಣ ಕೃತಿಗಳ ಬಗ್ಗೆ ನಮ್ಮ ಮಕ್ಕಳಿಗೆ ಏನೇನೂ ಗೊತ್ತಿಲ್ಲ” ಎಂದು ಮಾಸ್ತರು ವಿಷಾದಿಸಿದರು.

"ಕಾರಣ ಏನು?"

"ಹಳ್ಳಿ ಹೈಸ್ಕೂಲ್‌ಗಳಲ್ಲಿ ಮೂರು ನಾಲ್ಕು ಮೇಷ್ಟುಗಳಿರುವುದೇ ಹೆಚ್ಚು. ಎಲ್ಲ ಕೆಲಸ ಅವರೇ ನೋಡಬೇಕು. ಮಧ್ಯಾಹ್ನ ಬಿಸಿ ಊಟ ಮಕ್ಕಳಿಗೆ ಮಾಡಿಕೊಡಬೇಕು, ಅಡಿಗೆಯವಳು ಚಕ್ಕರ್ ಕೊಟ್ರೆ ಹೆಡ್ ಮಾಷ್ಟ್ರೇ ಹೋಗಿ ಸೌಟು ಹಿಡಿದು ಸೌದೆ ಒಲೆಯ ಮೇಲೆ ಬೇಳೆ ಕುದಿಯೋಕ್ ಇಟ್ಟು ಬಂದು ಪಾಟ ಮಾಡಬೇಕು, ಮತ್ತೆ ಓಡಿ ಸಾಂಬಾರ್‌ಗೆ ಉಪ್ಪು, ಖಾರ ಹಾಕಿ ಬಂದು ಪಾಟ ಮುಂದುವರೆಸಬೇಕು"

"ಕಾನ್ಸೆಂಟ್ರೇಷನ್ ಎಲ್ಲಿ ಉಳಿಯುತ್ತೆ?" ಎಂದು ಕೇಳಿದ ವಿಶ್ವ.

"ಚಿಕ್ಕ ಶಾಲೆಯಲ್ಲಿನ ಮಾಸ್ತರುಗಳ ಸಮಸ್ಯೆ ನಿಮಗೆ ತಿಳಿಯದಮ್ಮ, ಶಾಲೆ ಪ್ರಾರಂಭವಾದ ಮೊದಲ ಮೂರು ತಿಂಗಳು ಪಾಟಗಳೇ ನಡೆಯೊಲ್ಲ. ಮಕ್ಕಳಿಗೆ ಶೂಗಳನ್ನು ಕೊಡು, ಸಾಕ್ಸ್‌ಗಳನ್ನು ಕೊಡು, ಪುಸ್ತಕಗಳನ್ನು ಕೊಡು, ಶಾಲೆಯ ಬ್ಯಾಗ್‌ಗಳನ್ನು ಕೊಡು, ಇದೇ ಆಗಿಬಿಡುತ್ತೆ. ಜೊತೆಗೆ ಬಿಸಿ ಊಟ, ಮೊಟ್ಟೆ, ಬಾಳೆಹಣ್ಣು, ಚಿಕ್ಕಿ ವಿತರಣೆ ಮಾಸ್ತರ ಜವಾಬ್ದಾರಿ".

"ಸಿಲಬಸ್ ಹೇಗಿದೆ?"

"ಸರ್ಕಾರ ಬದಲಾದಂತೆಲ್ಲ ಶಾಲಾ ಪಠ್ಯಪುಸ್ತಕಗಳು ಬದಲಾಗ್ತಿರೋದು ಮಕ್ಕಳ ದುರ್ದೈವ. ನಮ್ಮ ಕಾಲದಲ್ಲಿ 10–15 ವರ್ಷವಾದ್ರೂ ಟೆಕ್ಸ್ಟ್ ಬುಕ್ ಬದಲಾಗ್ತಾ ಇರ್ಲಿಲ್ಲ, ಈಗಂತೂ ಅನೇಕ ಶಾಲೆಗಳಲ್ಲಿ ವಿಷಯಧಾರಿತ ಶಿಕ್ಷಕರಿಲ್ಲ, ಕಡಿಮೆ ಶಿಕ್ಷಕರಿರೋ ಶಾಲೇಲಿ ಎಲ್ಲಾ ಸಬ್ಜೆಕ್ಟ್‌ನ ಒಬ್ಬರೇ ಬೋಧಿಸುತ್ತಾರೆ. ಇದು ಕೂಡ ಸರಿ ಇಲ್ಲ. ಕನ್ನಡ ಮಾಸ್ತರು ಸಮಾಜ ಶಾಸ್ತ್ರದಲ್ಲಿ ಪರಿಣಿತಿ ಹೊಂದಿರೋಲ್ಲ. ಗಣಿತ ಸೂತ್ರಗಳು ಎಷ್ಟು ಮಾತ್ರ ಗೊತ್ತಿರುತ್ತೆ ಅವರಿಗೆ" ಎಂದರು ನಾಣಿ.

"ಹಾಗಿದ್ರೆ ಮಾಸ್ತರುಗಳನ್ನ ನೇಮಿಸಿಕೊಳ್ಳಿ" ಎಂದ ವಿಶ್ವ.

"2008ರಿಂದ ಸರ್ಕಾರ ಮಾಸ್ತರುಗಳ ನೇಮಕ ಮಾಡಿಲ್ಲ, ಸುಮಾರು 30 ಸಾವಿರ ಶಿಕ್ಷಕರ ಕೊರತೆ ಇದೆ, ಹಂಗಾಮಿ ಶಿಕ್ಷಕರ ಸಹಾಯ ಪಡೀತಿದ್ದೀವಿ".

ವಿಶ್ವ ಹೆಮ್ಮೆಯಿಂದ ತನ್ನ ಊರಿನ ವಿಷಯ ಹೇಳಿದ.

"ನಮ್ಮ ಮಾಲೂರಿನ ಮಾರಿಕಾಂಬ ದೇವಾಲಯ ಟ್ರಸ್ಟ್‌ನವರು ಸ್ಥಳೀಯ ಸರ್ಕಾರಿ ಪ್ರೌಢಶಾಲೆಗೆ ನುರಿತ ಇಂಗ್ಲಿಷ್ ಮಾಸ್ತರ್ ಮತ್ತು ಎಕ್ಸ್‌ಪರ್ಟ್ ಕಂಪ್ಯೂಟರ್ ಟೀಚರಗಳನ್ನು ಕೊಡ್ತಾರಂತೆ, ಸಂಬಳಾನೂ ದೇವಾಲಯವೇ ಕೊಡುತ್ತೆ ಅಂತ ರಾಮಕೃಷ್ಣ ಸಾರ್ ಫೋನ್ ಮಾಡಿದ್ರು" ಎಂದ.

"ಆದರೆ ಎಲ್ಲಾ ಊರುಗಳಲ್ಲೂ ಹೀಗಿಲ್ವಲ್ಲ ಸರ್, ಈ ಸಲ ಎಸ್.ಎಸ್.ಎಲ್.ಸಿ.ಯಲ್ಲಿ 53% ಫಲಿತಾಂಶ ಬಂದಿತ್ತು. ಫೇಲ್ ಆದವರಿಗೆ 20 ಗ್ರೇಸ್ ಮಾರ್ಕ್ಸ್ ಕೊಟ್ಟು ಫಲಿತಾಂಶ ಜಾಸ್ತಿ ತೋರಿಸಿದ್ವಿ. ಎಸ್.ಎಸ್.ಎಲ್.ಸಿ. ಮಟ್ಟದಲ್ಲಿ ಫೌಂಡೇಶನ್ ಭದ್ರವಾಗಿ ಬೀಳದಿದ್ದರೆ ನಾಳೆ ನಮ್ಮ ಮಕ್ಕಳು ಡಾಕ್ಟರ್, ಇಂಜಿನಿಯರ್ ಹೇಗೆ ಆಗ್ತಾರೆ? ಕಡಿಮೆ ಫಲಿತಾಂಶ ಬಂದ ಶಾಲೆಗೆ ಸರ್ಕಾರದಿಂದ ನೋಟೀಸ್ ಬರುತ್ತೆ, ವಿದ್ಯಾರ್ಥಿಗಳನ್ನ ಮುಂದಕ್ಕೆ ತಳ್ಳೋದೇ ಶಾಲೆಗಳ ಗುರಿ ಆಗಿರೋದು ದುರದೃಷ್ಟಕರ" ಎಂದು ಬೇಸರಪಟ್ಟರು.

"ನಮಗೆ ಇದ್ದ ಟೀಚರ್‌ಗಳು ಪಾಠ ಒಪ್ಪಿಸಲಿಲ್ಲ ಅಂದ್ರೆ ಜೀವ ತೆಗೀತಿದ್ರು, ಅವರ ಪ್ರತೀ ಏಟಿನ ಹಿಂದೆ ಪ್ರೀತಿ ಇರ್ತಿತ್ತು" ಎಂದ ವಿಶ್ವ.

"ಒದೆಗಳು ತಿಂದ ನಮ್ ಯಜಮಾನ್ರಿಗೆ ಎಸ್.ಎಸ್.ಎಲ್.ಸಿ.ಯಲ್ಲಿ ಫಸ್ಟ್ ಕ್ಲಾಸ್ ಬಂದಿತ್ತು" ಎಂದು ವಿಶಾಲು ರೇಗಿಸಿದಳು.

"ಈಗ ಜಸ್ಟ್ ಪಾಸ್ ಆದ್ರೆ ಸಾಕು ಮೇಡಂ, ಕ್ವಾಲಿಟಿ ಆಫ್ ಎಜುಕೇಷನ್ ಕುಗ್ಗಾ ಇದೆ. ಎಸ್.ಎಸ್.ಎಲ್.ಸಿ. ಪಾಸ್ ಆದ ಕೆಲವು ಹುಡುಗರಿಗೆ "Diarrhoea" ಆದಾಗ ಲೀವ್ ಅಪ್ಲಿಕೇಷನ್ ಬರೆಯೋಕೆ ಸ್ಪೆಲ್ಲಿಂಗ್ ಗೊತ್ತಿರೋಲ್ಲ" ಎಂದರು ಮಾಸ್ತರು.

"ಡೈಯೇರಿಯಾ ಮಾಡೋದು ಸುಲಭ. ಸ್ಪೆಲ್ಲಿಂಗ್ ಬರೆಯೋದು ಕಷ್ಟ" ಎಂದ ವಿಶ್ವ ನಕ್ಕ.

"ಶಾಲಾ ಕಟ್ಟಡದ ದುರಸ್ತಿ ಕಾಲಕಾಲಕ್ಕೆ ಆಗ್ತಿಲ್ಲ, ಹೆಣ್ಣುಮಕ್ಕಳಿಗೆ ಸರಿಯಾದ ಶೌಚಾಲಯಗಳು ಇಲ್ಲ, ಶಾಲೆಯ ಕಿಟಕಿ ಬಾಗಿಲುಗಳು ಭದ್ರ ಇಲ್ಲ, ಹಳೇ ಬ್ಲಾಕ್ ಬೋರ್ಡ್ ಮೇಲೆ ಬರೆದರೆ ಸರಿಯಾಗಿ ಕಾಣ್ಸೋದೇ ಇಲ್ಲ" ಎಂದು ಮಾಸ್ತರು ಕಷ್ಟಗಳನ್ನು ಹೇಳಿಕೊಂಡರು.

"ಸರ್ಕಾರ ಇದನ್ನ ಗಮನಿಸಬೇಕು. ಒಂದು ತಿಂಗಳು ಇತರೇ ಭಾಗ್ಯಗಳನ್ನು ನಿಲ್ಸಿ, "ಶಾಲಾ ಭಾಗ್ಯ" ಅಂತ ಶುರು ಮಾಡಬೇಕು, ಶಾಲೆಗೆ ಅಗತ್ಯವಾದ ಉಪಕರಣಗಳು ಪೂರೈಸಿ ದುರಸ್ತಿ ಮಾಡಿಸಿದರೆ ಇಡೀ ನಾಡು ಸಂತೋಷ ಪಡುತ್ತೆ" ಎಂದಳು ವಿಶಾಲು.

"ಈಗ ತಾವು ದೇವಾಲಯ ಟೂರ್ ಮಾಡ್ತಿರೋದೇಕೆ?" ಎಂದು ಕೇಳಿದ ವಿಶ್ವ.

"ದೇವರಿಗೆ ನನ್ನ ಕಷ್ಟ ಹೇಳೋದಿದೆ. ಬೇರೆ ಯಾರಿಗೇ ಹೇಳಿದ್ರೂ ಪ್ರಯೋಜನ ಆಗ್ತಾ ಇಲ್ಲ, ಮಕ್ಕಳ ಕಷ್ಟಕ್ಕೆ ಪರಿಹಾರ ಸಿಗ್ತಿಲ್ಲ, ಅದಕ್ಕೆ ದೇವರಿಗೆ ಕೈ ಮುಗಿದು, ದೇವರೇ, ಅಮಾಯಕರಾದ ಮಕ್ಕಳು ನಮ್ಮ ಇಂದಿನ ರಾಜಕೀಯ ವ್ಯವಸ್ಥೆಗೆ ಸಿಲುಕಿ ನಲುಗ್ತಿದ್ದಾರೆ, ಅವರಿಗೆ ಉತ್ತಮ ಶಿಕ್ಷಣ ದಯಪಾಲಿಸು ಅಂತ ಬೇಡುತ್ತೇನೆ" ಎಂದರು.

***

ಸಹಿಷ್ಣುತೆ

– ಸಿಂಧು ಹರಿತಸ

ಕೈಲಾಸದಲ್ಲಿದೆ ಶಿವ ಪರಿವಾರ,
ಸತಿ–ಪತಿ ಜೊತೆಗೆ ಗಣಪ–ಕುಮಾರ.
ಬಂಡಿಗೆ ಲಾಂಛನ ಗುಣ ವಿಪರೀತ;
ಆದರೂ ಸಂಗಡ ಬಾಳು ಸುಲಲಿತ.

ಶಿವನು ಚಲಿಸುವ ನಂದಿ ಸಾಧು,
ಕೊರಳಲಿ ವಿಷಕರ ನಾಗರ ಇಹುದು.
ಈಶನ ಕಂಠದಿ ಇದೆ ಹಾಲಾಹಲ
ಜಟೆಯಲಿ ಬಿಗಿದ ಚಂದಿರ ಶೀತಲ.

ಆಕಳ ಭಕ್ಷಿಸಿ ಜೀವಿಪ ವ್ಯಾಘ್ರ,
ನಂದಿಯ ಮುಂಗಡೆ ಆಗದು ಉಗ್ರ.
ಪಾರ್ವತಿ ಏರುವ ಹೆಬ್ಬುಲಿ ಅತಿಬಲ,
ಕೈಲಾಸದಲ್ಲಿಯ ಜೀವನ ನಿರ್ಮಲ

ಗಣಪತಿ ಗಮಿಸುವ ವಾಹನ ಮೂಷಿಕ,
ನಾಗರ ಕಂಡರೆ ಗಡಗಡ ನಡುಕ.
ಇದ್ದರೂ ಒಡೆಯನ ಉದರದಿ ಉರುಗ,
ಗಣಪನ ಹೊತ್ತು ಪಯಣ ಸರಾಗ.

ಮುರುಗನ ಬಂಡಿಯು ಮಯೂರ ರಾಜ,
ಸ್ಕಂದಗೆ ಸರ್ಪದಿ ಸ್ನೇಹವು ಸಹಜ.
ಕಾಣದು ಹಾವಿಗೆ ನವಿಲಿನ ಭೀತಿ,
ಇದು ಕೈಲಾಸದಿ ಬಾಳುವ ರೀತಿ.

ಬೇರೆ–ಪರಭಕ್ಷಕ ನೀತಿಯ ಬಿಟ್ಟು,
ಇರುವುವು ಜೊತೆಯಲಿ ಸುಖದಲಿ ಒಟ್ಟು.
ಶಕ್ತಿಯ ಜೊತೆಯಲಿ ಮಮತೆಯ ಮಿಶ್ರ,
ಪ್ರೇಮ ಸಹಿಷ್ಣುತೆಗಿದು ಆಧಾರ.

***

ನೋಡಿದ ಊರಿನ ನೋಡದ ಸ್ಥಳಗಳು

– ಮಹಾಬಲ

ಇತ್ತೀಚೆಗೆ ನಮ್ಮ ಪ್ರವಾಸದ ಭರಾಟೆ ಅದರಲ್ಲೂ ವಿದೇಶ ಯಾತ್ರೆ ಏಕೋ ಹೆಚ್ಚಾಗಿದೆ. "ನಿಮ್ಮ ಕೈಯ ಕಾಸು ಮೇಲುಕೋಟೆ ನಾಮ, ಏನಾದ್ರೂ ಮಾಡಿಕೊಳ್ಳಿ (ಅಥವಾ ಹೇಗಾದ್ರೂ ಹಾಕಿಕೊಳ್ಳಿ ನಾಮ) ಅಂತೀರಾ? ಹೋಗಲಿ ಬಿಡಿ, ನಾನು ಇಲ್ಲಿ ಹೇಳಹೊರಟಿರುವುದು ಅದಲ್ಲವೇ ಅಲ್ಲ.

ನೀವು ಪ್ರವಾಸ ಹೊರಟಿರುವ ವಿಷಯ ಬೆಳಗಿನ ವಾಯುಸಂಚಾರದ ಅವಿಭಾಜ್ಯ ಅಂಗವಾದ ಕಾಫಿ ಕಟ್ಟೆ ಸಭೆಯಲ್ಲಿ ಒಬ್ಬ ಮಿತ್ರನಿಗೆ ತಿಳಿಸುತ್ತೀರಿ. ಅಷ್ಟು ಸಾಕು ಬಿಡಿ, ನಿಮ್ಮ ಎಲ್ಲ ಇತರ ಮಿತ್ರರಿಗೆ (ಹಿತಶತ್ರುಗಳಿಗೂ) ತಮಟೆಯ ಸಹಾಯವಿಲ್ಲದೆ ತಿಳಿಸುವ ಕಂತ್ರಾಟನ್ನು ಅವನು ತಂತಾನೇ ತೆಗೆದುಕೊಳ್ಳುತ್ತಾನೆ. ನೀವು ಕಾಫಿಕಟ್ಟೆಯಿಂದ ಮನೆ ತಲುಪುವ ಹೊತ್ತಿಗೆ ಆ ದಿನ ಕಾಫಿ ಕಟ್ಟೆಗೆ ಬಾರದಿರುವವರು, ಇತರರು ಹಾಗೂ ಸಕಲರಿಂದ ನಿಮಗೆ ಫೋನ್ ಪುಂಖಾನುಪುಂಖವಾಗಿ ಬರತೊಡಗುತ್ತದೆ. ವಿದೇಶ ಪ್ರವಾಸ ಹೋಗ್ತಾ ಇದ್ದೀಯಂತೆ, ಅಭಿನಂದನೆ, ಶುಭಪ್ರವಾಸ, ನನಗೇನು ತರ್ತೀಯಾ, ಪಾಸ್ಪೋರ್ಟ್ ಹುಷಾರು, ಟ್ರಾವಲ್ ಕಾರ್ಡ್ ತಗೋ. ನಗದು ಕಡಿಮೆ ಇರಲಿ. ಅಬ್ಬ ಎಷ್ಟು ತರಹೆವಾರಿ ಪ್ರಶ್ನೆಗಳು. ಪಾಪ ಮೊದಲ ಬಾರಿ ವಿದೇಶಕ್ಕೆ ಹೋಗುವವರಿಗೆ ಇಂಥ ಪುಕ್ಕಟೆ ಸಲಹೆಗಳು ದಾರಿದೀಪವೇ ಸರಿ. ಕೇಳು ಜನಮೇಜಯ ರೀತಿ ಕಿವಿಗೊಟ್ಟರೇನು ನಷ್ಟ?

ಇದರ ಜತೆಗೆ ಇನ್ನೂ ಹಲವು ಪೂರ್ವಾನುಭವಿಗಳು ಅಲ್ಲಿ ಹೋದಾಗ ಅದನ್ನು ನೋಡುವುದನ್ನು ಮರೀಬೇಡ, ಇದನ್ನು ಮರೀಬೇಡ, ಪ್ರವಾಸಿ ಸಂಸ್ಥೆಯವರ ಪಟ್ಟಿಯಲ್ಲಿ ಇರದಿದ್ದರೂ ನೀನೇ ಹೋಗಿ ಬಾ, ಇಂಥ ಸಲಹೆಗಳನ್ನು ನೀಡುತ್ತಾರೆ. ಇವೆಲ್ಲ ನೀವು ಗೂಗಲ್‌ನಲ್ಲಿ ಕೂತಲ್ಲೇ ಪರ್ಯಟಣೆ ಮಾಡುವಾಗ ತಿಳಿದು ಬಂದದ್ದೇ. ಆದರೂ ಮಿತ್ರರ ಸ್ವಾನುಭವದ ಅಮೃತವಾಕ್ಕುಗಳಿಗೆ ಹೂಂಗುಡಲು ಅಡ್ಡಿಯೇನು? ಬರೆದಿಟ್ಟುಕೊಳ್ಳುತ್ತೀರಿ.

ಪ್ರವಾಸ ಆರಂಭವಾಗುತ್ತದೆ. ಆಗಲೇಬೇಕು ಬಿಡಿ. ಕಾಲ ಯಾರಿಗೂ ಕಾಯುವುದಿಲ್ಲ. ಲಂಡನ್ ನಗರ ವೀಕ್ಷಣೆ ಅಂತಿಟ್ಟುಕೊಳ್ಳಿ. ಎಂದಿನಂತೆ ಪ್ರವಾಸಿ ಸಂಸ್ಥೆಯವರು ಹೈಡ್ ಪಾರ್ಕ್, ಟ್ರಫಾಲ್ಗರ್ ಚೌಕ, ಬಕಿಂಗ್ ಹ್ಯಾಮ್ ಪ್ಯಾಲೇಸ್, ವೆಸ್ಟ್ ಮಿನಿಸ್ಟರ್ ಅಬೆ, ಬೇಕರ್ ಸ್ಟ್ರೀಟಿನ ಶೆರ್ಲಾಕ್ ಹೋಮ್ಸ್ ಪ್ರತಿಮೆ ಮತ್ತು ಅಲ್ಲಲ್ಲಿ ಕಣ್ಣಿಗೆ ಬಿದ್ದ ಇತರ ಸ್ಮಾರಕಗಳನ್ನು, ಲಂಡನ್‌ಐ ಇಂಥ ಮೋಜಿನ ವಿಹಾರವನನ್ನೋ ತೋರಿಸುವ ಮುತುವರ್ಜಿ ವಹಿಸುತ್ತಾರೆ. ಆದರೆ ಕ್ರಿಕೆಟ್ ಪ್ರಿಯರು ವಿಶ್ವವಿಖ್ಯಾತ ಲಾರ್ಡ್ಸ್ ಕ್ರೀಡಾಂಗಣವನ್ನೋ, ಸ್ಪಿನ್ ಗಾರುಡಿಗ ಚಂದ್ರಶೇಖರ್ ಪವಾಡ ಸೃಷ್ಟಿಸಿದ ಓವಲ್ ಮೈದಾನವನ್ನೋ ನೋಡುವ ತುಡಿತ ಹೊಂದಿರುತ್ತಾರೆ. ವಸ್ತು ಸಂಗ್ರಹಾಲಯಗಳನ್ನು ನೋಡುವ ಹಂಬಲದವರೂ ಇರುತ್ತಾರೆ. ಆದರೆ ಪ್ರವಾಸದ ಬಿಗಿ ವೇಳಾಪಟ್ಟಿಯಲ್ಲಿ ಇವೆಲ್ಲ ಸಾಧ್ಯವಿಲ್ಲ ಎನ್ನುತ್ತಾರೆ ಪ್ರವಾಸ ವ್ಯವಸ್ಥಾಪಕರು. ಬಿಡುವಿನ ವೇಳೆಯಲ್ಲಿ ಹೋಗಿಬರೋಣವೆಂದರೆ ಸಮಾನ ಮನಸ್ಕರು ಸಿಗುವುದಿಲ್ಲ. ಅಲ್ಲದೆ ಗೊತ್ತಿಲ್ಲದ ದೇಶದಲ್ಲಿ ತಿರುಗಾಡುವುದಂತೂ ಅಪಾಯಕಾರಿ. ಜತೆಗೆ ಸಮಯದ ಕೊರತೆ. ಅಂತೂ ನಿಮ್ಮ ಕನಸಿನ, ಮತ್ತು ಸ್ನೇಹಿತರಿಂದ ಕೇಳಿದ ಹಾಗೂ ಗೂಗಲ್ ವಿಡಿಯೋ ನೋಡಿ ಆಶಿಸಿದ್ದ ಸ್ಥಳಗಳು ಕನಸಿನಲ್ಲೇ ಉಳಿಯುತ್ತವೆ.

ಹೀಗೆಯೇ ನಮ್ಮದೇ ನಿವೇಶನದಲ್ಲಿ, ಸಾಲ ಹೊತ್ತುಕೊಂಡು ಕಟ್ಟಿದ ಮನೆ ಕೂಡ ನಮ್ಮ ಕನಸಿನ ಮನೆಯಂತೆ ಇರುವುದಿಲ್ಲ ಅಲ್ಲವೇ?

ಈ ಕೊರತೆಯ ಬಗ್ಗೆ ಒಬ್ಬ ಮಿತ್ರನೊಂದಿಗೆ ಲೋಕಾಭಿರಾಮವಾಗಿ ಚರ್ಚಿಸುತ್ತಿದ್ದೆ. ಅವನು "ಹೌದಯ್ಯ, ಈ ವ್ಯವಸ್ಥಿತ ಪ್ರವಾಸ ಹೋಗುವವರ ಹಣೆಬರಹವೇ ಹೀಗೆ. ಕಾಸೂ ಹಾಳು,ತ ಲೇನೂ ಬೋಳು ಅಂದರೆ ಅಂದುಕೊಂಡಂತೆ ನೋಡೋಕೆ ಆಗೋಲ್ಲ...'' ಎಂದು ಮಾತನಾಡುತ್ತಿದ್ದಾಗ ಕಾಫಿ ಬಂತು. ಅದನ್ನು ನಿಧಾನವಾಗಿ ಗುಟುಕರಿಸುತ್ತ. ‘‘ನಾನು ಹೋದಾಗ ಈ ತರಹ ಆಗಲಿಲ್ಲ...'' ಎಂದು ಮಾತು ನಿಲ್ಲಿಸಿದ.

ನನಗೇಕೋ ಮಾತಿನ ನಡುವೆ ಅವನ ಈ ವಿರಾಮಗಳು ಸುತರಾಂ ಇಷ್ಟವಾಗಲಿಲ್ಲ. ಅವನ ಮಾತಿಗೆ ಇಂಧನ ಹಾಕುವಂತೆ "ಮತ್ತೆ?" ಎಂದು ಪ್ರಶ್ನಿಸಿದೆ.

ಅವನು ಸಾವಕಾಶವಾಗಿ ಕಾಫಿ ಮುಗಿಸಿ, "ಏನಾಯ್ತು ಅಂದರೆ ನನ್ನ ದೊಡ್ಡಪ್ಪನ ಮಗ ರಘು ಲಂಡನ್ನಿನಲ್ಲೇ ಇರೋದು? ಅದೇ ಕಣಯ್ಯ ಆ ಆರಡಿ ಉದ್ದದ ಸೈಂಧವ ನೀನೂ ನೋಡಿರಬಹುದು".

"ಹೌದು ನೋಡಿ ಬಹಳ ವರ್ಷವಾಯಿತು." ಎಂದೆ.

"ನಾನು ಲಂಡನ್ನಿನಲ್ಲಿ ಅವನ ಮನೆಯಲ್ಲೇ ಠಿಕಾಣಿ ಹಾಕಿದ್ದೆ. ಯು ಕೆ ವೀಸಾಗೆ ಅವನೇ ಎನ್ ಓ ಸಿ ನೂ ಕೊಟ್ಟಿದ್ದ. ಒಂದು ತಿಂಗಳು ಇದ್ದೆ. ಶನಿವಾರ ಭಾನುವಾರ ಎಲ್ಲಾಕಡೆ ಕಾರಿನಲ್ಲೇ ಸುತ್ತಿಸೋನು, ಉಳಿದ ದಿನ ನಾನೇ ಮೆಟ್ರೋದಲ್ಲಿ ಪೋಲಿ ಅಲೀತಿದ್ದೆ. ಬಹಳ ಮಜವಾಗಿತ್ತು. ಇಡೀ ಯುಕೆಯಲ್ಲಿ ಒಂದು ಕಲ್ಲನ್ನೂ ಬಿಟ್ಟಿಲ್ಲ ಅಂತೀನಿ, ನೀನೂ ಹಾಗೇ ಯಾರದ್ದಾದ್ರೂ ಬಾಲ ಹಿಡೀಬೇಕಾಗಿತ್ತು" ಎಂದ. ಪಾಪ ಇರೋ ವಿಷಯ ಹೇಳ್ತಾ ಇದ್ದಾನೆ ಬಡಾಯಿ ಅಂತ ಬಾಯಿ ಬಡಿಯೋದು ಸರಿಯಲ್ಲ ಎಂದು ಅವನಿಂದ ಬೀಳ್ಕೊಂಡೆ.

ಪ್ರತಿ ಬಾರಿ ಪ್ರವಾಸದಿಂದ ವಾಪಸು ಬಂದ ಮೇಲಂತೂ ಪ್ರವಾಸ ವರದಿ ಕೇಳುವವರ, ಪ್ರಶ್ನಿಸುವವರ ದಾಳಿಯನ್ನು ಎದುರಿಸುವುದು ಪ್ರಯಾಸದ ವಿಷಯವಾಯಿತು.

ಕಳೆದ ವರ್ಷ ನಾವು ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಪ್ರವಾಸ ಹೋಗಿ ಬಂದಾಗಲೂ ಹೀಗೇ ಆಯಿತು. ಆಸ್ಟ್ರೇಲಿಯಾದಲ್ಲಿ ಏನೇನು ನೋಡಿದಿರಿ? ಎಂದು ಕೇಳುವವರಿಗೆ ಮೆಲ್ಬರ್ನ್, ಕೇರ್ನ್ಸ್, ಬ್ರಿಸ್ ಬೇನ್, ಗೋಲ್ಡ್ ಕೋಸ್ಟ್, ಸಿಡ್ನಿ ಎಂದು ಉತ್ತರಿಸಿದಾಗ, "ಹೋ, ಹಾಗಾದರೆ ನೀವು ಅಡಿಲೇಡ್, ಪರ್ತ್, ಹೋಬರ್ಟ್ ಎನ್ನಿ" ಎಂದು ಹಲವರು ತಣ್ಣಗೆ ಪ್ರತಿಕ್ರಿಯಿಸುತ್ತಿದ್ದರು. ಅಡಿಲೇಡ್ ಪ್ರವಾಸದ ಪಟ್ಟಿಯಲ್ಲಿ ಇರಲೇ ಇಲ್ಲ. ಪರ್ತ್ ಬೇರೊಂದು ದಿಕ್ಕು, ವಿಪರೀತ ದೂರ. ಆದರೆ ಈ ಪ್ರತಿಕ್ರಿಯೆಗಳು ನೋಡಲಿಲ್ಲ ಎಂಬ ಕೊರಗನ್ನು ನಮ್ಮಲ್ಲೂ ಬಿತ್ತುವುದರಲ್ಲಿ ಸಫಲವಾಗುತ್ತಿದ್ದವು.

ಹಾಗೆಯೇ ನ್ಯೂಜಿಲೆಂಡಿನಲ್ಲಿ ನಾವು ನೋಡಿದ ದೊಡ್ಡ ನಗರಗಳು ಆಕ್ಲೆಂಡ್ ಹಾಗೂ ಕ್ರೈಸ್ಟ್ ಚರ್ಚ್. ಉಳಿದ ಸ್ಥಳಗಳಾದ ರೋಟರೋವಾ, ಕ್ವೀನ್ಸ್ ಟೌನ್, ಟ್ವೈಜೆಲ್‌ಗಳು ಚಿಕ್ಕ ನಗರಗಳು. ವೆಲಿಂಗ್ಟನ್ ನೋಡಲಿಲ್ಲವಾ, ಡನೆಡಿನ್ ನೋಡಲಿಲ್ಲವಾ ಎಂದರೆ ಇಲ್ಲ ಎನ್ನದೆ ವಿಧಿ ಇರಲಿಲ್ಲ.

ದುಬಾಯಿಗೆ ನಾವು ಹೋಗಿದ್ದಾಗ ಫ್ಯೂಚರ್ ಮ್ಯೂಸಿಯಂ ಎಂಬ ಅತ್ಯಾಧುನಿಕ ನಿರ್ಮಾಣವನ್ನು ನಾವು ನೋಡಲಾಗಲಿಲ್ಲ. ಎರಡು ತಿಂಗಳ ಮುಂಚೆ ಆನ್ಲೈನಿನಲ್ಲಿ ಟಿಕೆಟ್ ಕಾದಿರಿಸಬೇಕಂತೆ. ಪ್ರವಾಸ ವ್ಯವಸ್ಥಾಪಕನಾಗಲೀ ಮತ್ತಾರಾದರೂ ಆಗಲಿ ನಮಗೆ ಈ ವಿಷಯ ಹೇಳಿರಲೇ ಇಲ್ಲ. ನಮ್ಮ ಜತೆ ಬಂದ ಸಹಪ್ರವಾಸಿಗರೂ ಪಾಪ ಇಂಥ ಅಜ್ಞಾನಿಗಳೇ. ಆಸಕ್ತರಿಗೆ ಟಿಕೆಟ್ ಕಾದಿರಿಸಿ ನಮ್ಮಿಂದ ಪ್ರತ್ಯೇಕವಾಗಿ ದುಡ್ಡು ವಸೂಲು ಮಾಡಲೂ ಪ್ರವಾಸ ವ್ಯವಸ್ಥಾಪಕನಿಗೆ ಅವಕಾಶವಿತ್ತು.

ಪ್ರವಾಸದ ವೇಳೆ ನಮಗೆ ತೃಪ್ತಿಯಾದಷ್ಟು ನೋಡಿದ್ದೇವೆ ಎಂದು ನಮಗೆ ನಾವೇ ಸಮಾಧಾನಪಟ್ಟುಕೊಂಡೆವೋ ಮನಶಾಂತಿ. ಇಲ್ಲದಿದ್ದರೆ ಮನಸ್ಸಿನೊಳಗೆ ಅಂತಃಕಲಹ, ಮತ್ತೆ ಮನೆಯವರೊಂದಿಗೆ ವಾಗ್ವಾದ ಎಲ್ಲ ಕಟ್ಟಿಟ್ಟ ಬುತ್ತಿ. ಹಾಗಾಗಿ ಪ್ರವಾಸ ಹೋಗಿ ಬಂದಮೇಲೆ ಸ್ಥಿತಪ್ರಜ್ಞರಾಗಿ. ನೋಡದ ಸ್ಥಳಗಳನ್ನು ಕೂತಲ್ಲೇ ನೋಡಲು ಕಾಫಿ ಲೋಟ ಕೈಯಲ್ಲಿ ಹಿಡಿದು, ಗೂಗಲ್ಗೆ ಶರಣಾಗಿ. ಅದೇ ಮತ್ತೊಮ್ಮೆ ಉಣ್ಣುವೆ ಕದ ತೆಗೆ ಎನ್ನುವ ಗಾದೆಮಾತಿನ ರೀತಿ. ಹೋಗುವ ಮೊದಲು ನೀವು ಮಾಡಿದ್ದೂ ಅದೇ ಅಲ್ಲವೆ.!

***

ಊಹಾಪೋಹಗಳೆಂಬ ಸುಳಿ

– ಕಮಲಾಕ್ಷಿ ಸಿ.ಆರ್.

ಇದೇನು ಯಾವ ಅಂತೆ ಕಂತೆ ಸುದ್ಧಿಯನ್ನು ತಗೊಂಡು ಬಂದಿರಬೇಕು ಅಂದುಕೊಂಡಿರಾ? ಇಲ್ಲ.. ಹಾಗಲ್ಲ. ಅಂತೆ ಕಂತೆ ವಿಚಾರಗಳ ಕುರಿತು ಒಂದಷ್ಟು ಹರಟುವಾ ಅಂತಾ.

ಅಂತೆ ಕಂತೆ ವಿಚಾರಗಳನ್ನು ಊಹಾಪೋಹ, ವದಂತಿ, ಪುಕಾರು, ಗಾಳಿಸುದ್ದಿ, ಗುಲ್ಲು, ಹಾರಿಕೆ ಸುದ್ದಿ, ಗಾಸಿಪ್ ಎಂದೆಲ್ಲ ಕರೆಯಲಾಗುತ್ತೆ. ಊಹಾಪೋಹಗಳಿಗೆ ಯಾವುದೇ ಆಧಾರವಿರದು. ಅವುಗಳ ಸತ್ಯಾ ಸತ್ಯತೆಗಳನ್ನು ದುರ್ಬೀನು ಹಾಕಿಕೊಂಡೇ ಹುಡುಕಬೇಕು. ವಸ್ತುನಿಷ್ಠ ವಿಚಾರಕ್ಕೂ ಊಹಾಪೋಹಗಳಿಗೂ ಎಣ್ಣೇ ಸೀಗೆ ಇದ್ದಹಾಗೆ.

'ಊದುಬತ್ತಿ ಹಚ್ಚಿಕೊಂಡು ಬಾ ಅಂದ್ರೆ ಊರನ್ನೇ ಸುಟ್ಟುಕೊಂಡು ಬಂದ್ರಂತೆ' ಎನ್ನುವಂತೆ ಈ ಊಹಾಪೋಹಗಳು. ಒಂದು ಸಣ್ಣ ವಿಚಾರ ಸಿಕ್ಕರೂ ಸಾಕು, ಬೇರೆಯವರ ಮುಂದೆ ಸುಣ್ಣ ಬಣ್ಣ ಹಚ್ಚಿ ಮಸಾಲೆ ಹಾಕಿ ರಸವತ್ತಾಗಿ ಬಿತ್ತರಿಸುವ ಗೀಳು ಇರುವವರೇ ಊಹಾಪೋಹ ಕರ್ತೃಗಳು. ಆಗಾಗ್ಗೆ ಊಹಾಪೋಹ ವಿಚಾರ ಸೃಷ್ಟಿಸಿ ಗಾಳಿಸುದ್ದಿ ಬಿತ್ತದಿದ್ದರೆ ಅಂಥವರಿಗೆ ಊಟ ಸೇರಲ್ಲ, ಸರಿಯಾಗಿ ನಿದ್ದೆಯೂ ಬಾರದೆ ಚಡಪಡಿಸುತ್ತಾರೆ.

ಊಹಾಪೋಹ ಸೃಷ್ಟಿಸಲು ಇಂತಹುದೇ ವಿಚಾರ ಬೇಕು ಅಂತಿಲ್ಲ. ಯಾರದೋ ಮನೆಯ ಮುಂದೆ ಕಾಗೆ ಕಾ ಕಾ ಎಂದು ಅರಚಿದರೂ ಸುದ್ದಿ, ಇಬ್ಬರು ಜೊತೆಯಾಗಿ ನಿಂತು ಮಾತನಾಡೋದು ಕಣ್ಣಿಗೆ ಬಿದ್ದರೂ ಸುದ್ದಿ. ಕೇಳಲು ಕಿವಿ ಸಿಕ್ಕರೆ ಸಾಕು ಅಂತ ಕಾದಿದ್ದು ಸನ್ನಿವೇಶಗಳನ್ನು ತಮ್ಮ ಕಲ್ಪನೆಗೆ ಸಿಕ್ಕಂತೆ ಬಣ್ಣಿಸೋದೆ ಅಂಥವರ ಗೀಳು.

ನವ ವಿವಾಹಿತೆ ಒಬ್ಬಳು ತವರಿಗೆ ಒಬ್ಬಳೇ ಬಂದರೆ ಆ ವಿಚಾರ ಊಹಾಪೋಹಿಗಳ ಕಣ್ಣು ಕಿವಿ ನಾಲಿಗೆಗೆ ರಸಗವಳ ಸಿಕ್ಕಂತೆ. "ರೀ.. ಪಂಕಜ ನೋಡಿದ್ರಾ? ಆ ಖುಷಿ ಮದುವೆ ಆಗಿ ಇನ್ನೂ ಎರಡು ತಿಂಗಳಾಗಿಲ್ಲ. ಆಗಲೇ ಒಬ್ಬಳೇ ತವರು ಮನೆಗೆ ಬಂದಿದ್ದಾಳೆ. ಇಲ್ಲಿದ್ದಾಗಲೇ ಯಾರ ಜೊತೆ ಹೊಂದಿಕೊಳ್ಳದೇ ಇದ್ದೋಳು, ಇನ್ನು ಗಂಡನ ಜೊತೆ ಹೊಂದಿಕೊಂಡು ಇರೋಕೆ ಹೇಗೆ ಸಾಧ್ಯ ಅಂತೀನಿ.." ಎಂದು ತಮಗನಿಸಿದ್ದೇ ಸತ್ಯ ಎನ್ನುವಂತೆ ಗುಲ್ಲೆಬ್ಬಿಸಿ ಸಮಾಧಾನ ಪಡುತ್ತಾರೆ ಈ ಚಪಲಗಾರರು.

ಪಕ್ಕದ ಮನೆಯ ಗಂಡ ಹೆಂಡತಿ ಏರು ಧ್ವನಿಯಲ್ಲಿ ಮಾತನಾಡಿದರೆ ಊಹಾಪೋಹಕ್ಕೆ ನಾಂದಿ ಹಾಡಿದಂತೆ. ಬಾಯಿಂದ ಬಾಯಿಗೆ ವಿಷಯ ಹರಿದಾಡುತ್ತ ಪತಿ ಪತ್ನಿ ವಿಚ್ಛೇದನ ತೆಗೆದುಕೊಳ್ಳುವರಂತೆ ಎನ್ನುವವರೆಗೆ ತಲುಪಿಬಿಡುತ್ತದೆ. ಟಿವಿ, ಸಿನಿಮಾ, ಶಾಪಿಂಗ್ ಹೀಗೆ ಊಹಾಪೋಹಗಳಿಗೆ ನಿಲುಕದ ತಾಣವೇ ಇಲ್ಲ. ಹಾಗಾಗಿ ಇವರು ಸರ್ವಾಂತರ್ಯಾಮಿ ದೇವರ್ಷಿ ನಾರದರ ಹಾಗೆ. ನಾರದರು ಒಳಿತಿಗಾಗಿ ಊಹಾಪೋಹ ವಿಚಾರ ಹಬ್ಬಿಸ್ತಾ ಇದ್ರು. ಕಲಿಗಾಲದ ಊಹಾಪೋಹಿಗಳಿಂದ ಒಳಿತಾದ ಉದಾಹರಣೆಯಂತೂ ಸಿಗಲಾರದು ನೋಡಿ.

ಆಕಸ್ಮಿಕವಾಗಿ ಸಿಕ್ಕವರೊಡನೆ ನಗುತ್ತ ಮಾತನಾಡವವರು ಈ ಊಹಾಪೋಹಗಳ ಕಣ್ಣಿಗೆ ಬಿದ್ದರೆ ನಾಲಿಗೆಗೆ ಹಬ್ಬ. ಇವರ ಭೇಟಿಯ ಕುರಿತು ಹಲವು ರೂಪ ನೀಡಿ ಅವರ ನಡುವೆ ಸಂಬಂಧ ಕಟ್ಟಿಬಿಡುವ ಹಂತದವರೆಗೂ ಬೆಳೆಸಿ ನೈಜ ವಿಷಯನ್ನು ಕುರೂಪಗೊಳಿಸುವರು.

ಸರ್ಕಾರಿ ಸಂಸ್ಥೆಗಳಲ್ಲಿ ವರ್ಗಾವಣೆ ಸಾಮಾನ್ಯ. ನಮ್ಮೊಬ್ಬ ಸಹೋದ್ಯೋಗಿ ನಮ್ಮಲ್ಲಿಗೆ ಯಾರೇ ಹೊಸದಾಗಿ ಬರುವ ಮುನ್ನ ಅವರ ಬಗ್ಗೆ ಅವರಿವರಿಂದ ಮಾಹಿತಿ ಕಲೆ ಹಾಕಿ "ಅಯ್ಯೋ.. ಕಷ್ಟ ರೀ. ಅವರು ಹಾಗಂತೆ ಹೀಗಂತೆ.." ಎಂದು ಅವರ

ಸ್ವಭಾವದ ಕುರಿತು ಭೀತಿಗೊಳಿಸುವ ಚಪಲ. ಆದರೆ, ಇವರು ಹೇಳೋದಕ್ಕೂ ಅವರುಗಳು ಇರೋದಕ್ಕೂ ಹೊಂದಾಣಿಕೆಯೇ ಇರುತ್ತಿರಲಿಲ್ಲ.

ಬಡ್ತಿ ಪಡೆದರೆ ಅರ್ಹತೆಯಿಂದ ಪಡೆದರು ಎನ್ನುವುದನ್ನು ಸಹಿಸದ ಊಹಾಪೋಹಿಗಳು, ಶಿಫಾರಸಿನಿಂದಲೋ ಅಧಿಕಾರಿಯ ಸ್ನೇಹದ ಕಾರಣದಿಂದಲೋ ಪಡೆದರು ಎಂದು ಗುಲ್ಲೆಬ್ಬಿಸಿ ಸಂತಸಪಡುವವರುಂಟು.

ಮದುವೆ ಮುನ್ನ ಹೆಣ್ಣಿನ ಚಾರಿತ್ರ್ಯದ ಬಗ್ಗೆ ವದಂತಿಗಳನ್ನು ಹರಿಯಬಿಟ್ಟು ವಿವಾಹಕ್ಕೆ ಅಡ್ಡಗಾಲು ಹಾಕುವ ಜನರೂ ಇದ್ದಾರೆ.

ಮದುವೆ, ಗೃಹಪ್ರವೇಶ, ನಾಮಕರಣ, ಜನ್ಮದಿನ ಹೀಗೆ ಜನ ಸೇರುವ ಸ್ಥಳಗಳೇ ಊಹಾಪೋಹಗಳ ಮೂಲ. ಅಲ್ಲಿನ ಸನ್ನಿವೇಶಗಳಲ್ಲಿ ಸಿಕ್ಕ ಸಣ್ಣ ಎಳೆಯನ್ನು ಚ್ಯೂಯಿಂಗ್ ಗಮ್ಮಿನಂತೆ ಎಳೆದು ಯಾರಾದಾದರೂ ಕಿವಿ ತಲುಪಿಸಿದರೆ ಗಾಳಿ ಸುದ್ದಿಯನ್ನು ಊದಿಬಿಡುವರು. "ಇದೇನು ಈಗಲೇ ಹೊರಟುಬಿಟ್ಟಿರಿ? ನಿಮ್ಮನ್ನು ಯಾಕೋ ಅವರು ಸರಿಯಾಗಿ ಮಾತಾಡಿಸಿದಂತೆ ಕಾಣಲಿಲ್ಲ ಅಲ್ವಾ? ಹೊಸ ಸ್ನೇಹ ಸಿಕ್ಕಿರಬೇಕೇನೊ.. ನಿಮ್ಮ ಜೊತೆ ಸರಿಯಾಗಿ ಒಂದು ಪೋಟೋ ಕೂಡ ತಗೆಸಿಕೊಳ್ಳಲಿಲ್ಲ.. " ಹೀಗೆ ತಮ್ಮ ಕಲ್ಪನೆಯನ್ನು ಹೇರಿಬಿಡುವರು.

ಕೆಲವೊಮ್ಮೆ ಊಹಾಪೋಹಗಳು ಅತಿಯಾದರೆ ಸಂಬಂಧದ ಸಾಮರಸ್ಯವನ್ನು ಹಾಳುಮಾಡುತ್ತದೆ. ಅನಿವಾರ್ಯವಾಗಿ ಮಹಿಳೆಯೋರ್ವಳು ಪುರುಷನೊಡನೆ ಓಡಾಡಿದರೆ ಅವರೀರ್ವರ ನಡುವೆ ಇಲ್ಲದ ಸಂಬಂಧಗಳನ್ನು ಸೃಷ್ಟಿಸಿ, ಅವರಿಬ್ಬರ ಮನೆಯವರಿಗೆ ಬೇಡದ ವಿಚಾರ ತಲುಪಿದಾಗ ಸಂಭ್ರಮಿಸುವ ವಿಘ್ನಸಂತೋಷಿಗಳು ಈ ಊಹಾಪೋಹಿಗಳು.

ಇನ್ನು ಊಹಾಪೋಹ ಸುದ್ದಿಗಳನ್ನು ಸೃಷ್ಟಿಸುವುದರಲ್ಲಿ ಮಾಧ್ಯಮದವರು ಎತ್ತಿದ ಕೈ. ಶಾಸಕರೊಬ್ಬರು ದೆಹಲಿಗೆ ಹೋದರೆ ಸಾಕು, ಕೆಲವೇ ದಿನಗಳಲ್ಲಿ ಶೀಘ್ರವಾಗಿ ಮುಖ್ಯಮಂತ್ರಿ ಬದಲಾವಣೆ, ಮಂತ್ರಿಮಂಡಲ ವಿಸ್ತರಣೆ, ಪಕ್ಷ ಬದಲಾವಣೆ, ಚುನಾವಣೆ ಸನ್ನಿಹಿತ ಇಂತಹ ಊಹಾಪೋಹಗಳನ್ನು ಹಬ್ಬಿಸಿ ಜನರನ್ನು ಗೊಂದಲಕ್ಕೆ ನೂಕವರು.

ಆಟ ಯಾವುದೇ ಪಂದ್ಯವಾಗಿರಲಿ, ಸೋಲು ಗೆಲವುಗಳಿಗೂ ದೃಶ್ಯ ಮಾಧ್ಯಮದವರ ಊಹಾಪೋಹಗಳ ವಿಮರ್ಶೆ ಚಕಿತವಾಗಿಸುತ್ತದೆ. ಅಸಂಬದ್ಧ ಕಾರಣಗಳಿಂದ ಗೆದ್ದರು ಇಲ್ಲವೆ ಸೋತರು ಎಂದರು ಎಂದು ಗಾಳಿಸುದ್ದಿ ಹಬ್ಬಿಸುವುದು ಕೆಲವೊಮ್ಮೆ ಹಾಸ್ಯಾಸ್ಪದ ಎನಿಸುತ್ತದೆ.

ರವಿ ಕಾಣದ್ದನ್ನು ಕವಿ ಕಂಡ ಎಂಬುದು ಕವಿಗಳ ಸೃಜನಶೀಲತೆಗೆ ಸಾಕ್ಷಿಯಾದರೆ, ಈ ದೃಶ್ಯ ಮಾಧ್ಯಮದವರ ಊಹಾಪೋಹಗಳು ಕಲ್ಪನಾತೀತವಾಗಿರುತ್ತವೆ. ನಂಬಲರ್ಹ ಮೂಲಗಳಿಂದ ತಿಳಿದುಬಂದ ವಿಷಯ ಎಂಬ ಒಕ್ಕಣಿಕೆಯು ಕೆಲವೊಮ್ಮೆ ಪ್ರಶ್ನಾತೀತವಾಗಿಯೂ ಇರುತ್ತದೆ ಬಿಡಿ. ರಾಜಕೀಯ, ಕ್ರೀಡೆ, ಸಿನಿಮಾ, ಸೆಲೆಬ್ರಿಟಿಗಳ ವೈಯಕ್ತಿಕ ವಿಚಾರ, ಶೇರು ಮಾರುಕಟ್ಟೆ ಹೀಗೆ ದೃಶ್ಯ ಮಾಧ್ಯಮ ಕೈ ಹಾಕದ ವಿಚಾರಗಳೇ ಇಲ್ಲ. ಒಂಥರಾ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವ ಹಾಗೆ.

ಗಾಜಿನ ಮನೆಯಲ್ಲಿ ನಿಂತವರು ಬೇರೆಯವರತ್ತ ಕಲ್ಲು ಎಸೆಯಬಾರದು ಎಂಬ ಮಾತಿದೆ. ಊಹಾಪೋಹಗಳನ್ನು ಸೃಷ್ಟಿಸಿ ಸುದ್ದಿ ಬಿತ್ತರಿಸುವವರ ಬಗ್ಗೆ ಸಾಮಾನ್ಯವಾಗಿ ಎಲ್ಲರಿಗೂ ಬೇಗನೆ ತಿಳಿಯುತ್ತದೆ. ಈ ಗೀಳು ಪುನರಾವರ್ತಿತವಾದಾಗ ನಗೆಪಾಟಲಿಗೆ ಗುರಿಯಾಗಬೇಕಾಗುತ್ತದೆ. ಹುಲಿ ಬಂತು ಹುಲಿ ಎಂಬ ಮಾತಿನಂತೆ, ಊಹಾಪೋಹಿಗಳು ಸತ್ಯ ಹೇಳಿದಾಗಲೂ ಊಹಾಪೋಹ ಎಂದು ತಳ್ಳಿಹಾಕುವ ಸಾಧ್ಯತೆ ಇದೆ. ಹಾಗಾಗಿ ಸನ್ನಿವೇಶಗಳ ವಸ್ತುನಿಷ್ಠ ವಿಚಾರ ಹಂಚಿಕೊಳ್ಳುವುದು ಸದಾ ಅಪೇಕ್ಷಣೀಯ ಅಲ್ಲವೆ?

***

ನಿರಾಕರಣ

– ಸರಸ್ವತಿ ನಟರಾಜ್

ಅದೊಂದು ದಿನ ಬೆಳಿಗ್ಗೆಯೇ ಬಂದಳು ಆಶಾಳ ತಾಯಿ, ಗಾಯತ್ರಿ. ಮುಖ ನೋಡುತ್ತಲೇ ಏನೋ ಸಮಸ್ಯೆಯನ್ನು ತಂದಿದ್ದಾಳೆಂದು ತಿಳಿಯಿತು. ಕೇಳಿದೆ.

"ನಿನ್ನ ಸಲಹೆ ಕೇಳೋಕೆ ಅಂತ ಬಂದೆ ಜಯಾ. ನಮ್ ಆಶಾಗೆ ಒಳ್ಳೇ ಸಂಬಂಧ ಬಂದಿದೆ. ಅವರೆಲ್ಲಾ ಒಪ್ಕೊಂಡೂ ಆಯ್ತು. ಈಗ ನಮ್ ಒಪ್ಪಿಗೆಗೆ ಕಾಯ್ತಾ ಇದಾರೆ. ಏನ್ಮಾಡ್ಲಿ ಗೊತ್ತಾಗ್ತಾ ಇಲ್ಲ," ಎಂದಳು ಗಾಯತ್ರಿ.

"ಇದೇನು ಗಾಯತ್ರಿ? ಒಳ್ಳೇ ಸಂಬಂಧ ಅಂತಿದೀ.. ಒಪ್ಕೊಂಡಿದಾರೆ ಅಂತಿ. ಇನ್ನೇನು ಯೋಚನೆ? ಆಶಾ ಬೇಡಾ ಅಂದ್ಲಾ?''

"ಅವಳಿನ್ನೂ ಬೇಡಾ ಅಂದಿಲ್ಲ. ನನಗೇ ಏನೋ ಗೊಂದಲ. ಅದಕ್ಕೆ ನಿನ್ನ ಹತ್ರ ಬಂದೆ."

ಆಶಾಗೆ ಸುಮಾರು ಮೂರು ವರ್ಷದಿಂದ ಗಂಡು ಹುಡುಕುತ್ತಿದ್ದಾರೆ. ಆಗಲೇ ಇಪ್ಪತ್ತೇಳು ವರ್ಷವಾಗಿದೆ. ಅವಳು ನೋಡಲು ಸುಮಾರಾಗಿದಾಳೆ. ಪ್ರತಿ ಸಲ ಗಂಡುಗಳ ಭೇಟಿಯಾದಾಗಲೊಮ್ಮೆ ಅವರ ಮನೆಯ ವಾತಾವರಣ ಬಿಗಡಾಯಿಸುತ್ತಿದೆ. ಇಲ್ಲಾ ತೀರಾ ಕಳಪೆಯಾದ ಸಂಬಂಧ ಬರುತ್ತೆ. ಇಲ್ಲ ಬಂದವರು ಹುಡುಗಿ ಇಷ್ಟವಾಗಲಿಲ್ಲ ಅಂತ ಹೇಳಿ ಹೋಗುತ್ತಾರೆ. ಒಟ್ಟಿನಲ್ಲಿ ಹುಡುಗಿಗೆ ಕಂಕಣ ಭಾಗ್ಯ ಇನ್ನೂ ಕೂಡಿ ಬಂದಿಲ್ಲ. ಇವಳಿಗೆ ಮದುವೆಯಾಗದೇ ಇವಳ ಅಣ್ಣನಿಗೂ ಮಾಡಲಾಗುತ್ತಿಲ್ಲ. ಆಶಾಳೂ ಒಮ್ಮೊಮ್ಮೆ 'ಆಂಟೀ, ನನಗ್ಯಾಕೆ ಈ ಶಿಕ್ಷೆ? ಮದುವೆಯಾಗದಿದ್ರೆ ಅಷ್ಟೇ ಹೋಯ್ತು. ಈ ಗಂಡುಗಳ ಎದುರು ಕೂತು ಕೂತು ಸಾಕಾಯ್ತು. ನಮ್ಮಮ್ಮಂಗೆ ನೀವಾದ್ರೂ ಹೇಳಿ, ಯಾರನ್ನೂ ಕರೆಸ್ಬೇಡ ಅಂತ. ಬೇಕಾದರೆ ಅಣ್ಣಂಗೆ ಮದುವೆ ಮಾಡ್ಲಿ' ಎಂದು ತನ್ನ ಅಳಲನ್ನು ತೋಡಿಕೊಳ್ತಾಳೆ. ಇದೀಗ ಗಾಯತ್ರಿ ಒಳ್ಳೆಯ ಸಂಬಂಧ ಸಿಕ್ಕಿದೆ ಅಂದ್ರೂ ಒಪ್ಪೋಕೆ ಹಿಂದೆ ಮುಂದೆ ಮಾಡ್ತಿದಾಳೆ ಅಂದ್ರೆ ಆ ಒಳ್ಳೆಯದರ ಹಿಂದೆ ಇನ್ನೇನೋ ಇದೆ ಅಂತಲೇ? ಅವಳು ವಿವರಿಸಿದಳು.

ಕತೆಯೊಳಗೊಂದು ಕತೆ.

"ಜಯಾ, ಈಗ ಬಂದಿರೋ ಹುಡುಗ ಬ್ಯಾಂಕ್‌ನಲ್ಲಿ ಕೆಲ್ಸದಲ್ಲಿದಾನೆ. ಅಪ್ಪ ಅಮ್ಮನಿಗೆ ಒಬ್ಬನೇ ಮಗ. ಆದರೆ ಪ್ರಾಬ್ಲಂ ಅಂದ್ರೆ ಹುಡುಗನಿಗೆ ಇದು ಎರಡನೇ ಮದುವೆ."

"ಅಂದ್ರೆ ಮೊದಲನೇ ಹೆಂಡತಿ ಇಲ್ವಾ? ಅಥವಾ ಡಿವೋರ್ಸೀನಾ?"

"ಇಲ್ಲ ಇಲ್ಲ, ಅವರು ಮಾಡದ ತಪ್ಪಿಗೆ ಶಿಕ್ಷೆ ಅನುಭವಿಸ್ತಾ ಇದಾರೆ. ಆ ಹುಡುಗ ಸುನೀಲ್‌ಗೆ ಈ ಊರಿನದೇ ಸಂಬಂಧ ಗೊತ್ತಾಗಿತ್ತು, ಸುಧಾ ಅಂತ. ಹುಡುಗ, ಹುಡುಗನ ಮನೆಯವರು ಎಲ್ಲ ಹುಡುಗಿ ನೋಡಿ ಒಪ್ಪಿಕೊಂಡು ಬಂದಿದಾರೆ. ಆಮೇಲೆ ಸುಧಾ ಈ ಮದುವೆಗೆ ಒಪ್ಪಲಿಲ್ಲವಂತೆ. ಇಷ್ಟು ಒಳ್ಳೇ ಸಂಬಂಧ ತಪ್ಪಿಹೋಗುತ್ತೆ ಅಂತ ಗಲಾಟೆ ಮಾಡಿದ್ರಂತೆ, ಅವಳ ಅಪ್ಪ ಅಮ್ಮ. ಆಗ ಅವಳು ಯಾರನ್ನೋ ಲವ್ ಮಾಡ್ತಿರೋ ವಿಷಯ ಬಾಯಿಬಿಟ್ಟಿದಾಳೆ. ಹುಡುಗ ಬೇರೆ ಜಾತಿ, ಅವರ ಮನೆತನಕ್ಕೂ ಇವರ ಮನೆತನಕ್ಕೂ ಸರಿಹೋಗಲ್ಲ ಅಂತ ಅಪ್ಪ ಅಮ್ಮ ಒಪ್ಪಿಕೊಂಡಿಲ್ಲ. ಸುಧಾ ಹಟ ಹಿಡಿದ್ಲಂತೆ, ಅವರ ಅಮ್ಮ ಇನ್ನೂ ಮೊಂಡು, ನೀನೇನಾದ್ರೂ ನಾನು ನೋಡಿರೋ ಈ ಸಂಬಂಧ ಒಪ್ಪಿಕೊಳ್ದೇ ಹೋದ್ರೆ ನಾನು ನಿನ್ನ ಕಣ್ಣೆದಿರಿಗೇ ಸುಟ್ಟುಕೊಂಡು ಸತ್ತುಹೋಗ್ತಿನಿ, ಅಂತ ಬ್ಲಾಕ್‌ಮೇಲ್ ಮಾಡಿದಾರೆ. ಅಮ್ಮ ಮೊದಲೇ ಹಠ ಜಾಸ್ತಿ, ಇನ್ನು ಹೇಳಿದಂತೆ

ಮಾಡಿಬಿಟ್ಟರೆ ಅಂತ ಹೆದರಿಕೊಂಡು ಸುಧಾ, ಸುನಿಲ್ ಜೊತೆ ಮದುವೆಗೆ ಒಪ್ಪಿಕೊಂಡಳಂತೆ. ಮದುವೆಗೆ ಮೊದಲು ಹುಡುಗ ಮಾತಾಡೋಕೆ ಬಂದರೆ ಸುಧಾ ಅವನ ಜೊತೆ ಸರಿಯಾಗಿ ಮಾತಾಡ್ತಾ ಇರಲಿಲ್ವಂತೆ. ಎಲ್ಲಾದ್ರೂ ಆಚೆ ಕಳಿಸಿ ಅಂತ ಹುಡುಗ ಕೇಳಿದರೆ, ಅವಳೊಬ್ಬಳನ್ನೇ ಕಳಿಸದೇ ಜೊತೆಗೆ ಯಾರನ್ನಾದ್ರೂ ಕಳಿಸ್ತಿದ್ರಂತೆ. ವರನ ಮನೆಯವರಿಗೂ ಇದೇನು ಈಗಿನ ಕಾಲದಲ್ಲೂ ಹೀಗೆ? ಇದೆಲ್ಲಾ ವಿಚಿತ್ರ ಅನಿಸಿತ್ತು. ಆದರೆ ಏನೋ ಹುಡುಗೀನ ಒಬ್ಬಳನ್ನೇ ಕಳಿಸೋಕೆ ಹಿಂಜರೀತಿದ್ದಾರೆ. ಎಷ್ಟಾದರೂ ಹುಡುಗಿಯ ಮನೆಯವರ ಆತಂಕ, ಇನ್ನೇನು ಒಂದು ತಿಂಗಳಿಗೇ ಮದುವೆ ಅಂತ ಅದನ್ನೇನೂ ದೊಡ್ಡದು ಮಾಡದೆ ಸುಮ್ಮನಿದ್ರಂತೆ. ಅವಳು ಗಂಡಿನ ಮನೆಯವರಿಗೆ ತನಗೆ ಮದುವೆ ಇಷ್ಟವಿಲ್ಲ ಅಂತ ಎಲ್ಲಿ ಹೇಳಿಬಿಡ್ತಾಳೊ ಅಂತ ಆತಂಕ ತಾಯಿಗೆ. ಅದಕ್ಕೇ ಅವಳೊಬ್ಬಳನ್ನೇ ಹುಡುಗನ ಜೊತೆ ಕಳಸ್ತಾ ಇರ್ಲಿಲ್ವಂತೆ. ಮದುವೆಯಾದ್ರೆ ಎಲ್ಲ ಸರಿಹೋಗುತ್ತೆ ಅನ್ನೋ ಆಸೆ."

ಅವಳ ಬಾಯಿಂದ ಕೇಳುತ್ತಿದ್ದ ಹಾಗೆ ಎಲ್ಲಾ ಕಣ್ಣೆದುರು ನಡೆದಂತಾಯಿತು. ನಾನೂ ಅಲ್ಲೇ ಪ್ರೇಕ್ಷಕಳಾಗಿದ್ದೆ.

"ಮದುವೆ ಮನೆ, ಧಾರೆ ಮುಗಿದು ಊಟಕ್ಕೆ ಹೋಗುವವರೆಲ್ಲಾ ಹೋಗಿ. ಅರ್ಧಕ್ಕರ್ಧ ಜನ ಖಾಲಿಯಾಗಿದ್ದಾರೆ, ಪುರೋಹಿತರು ವಧೂವರರಿಗೆ ನಾಗೋಲಿ, ಲಾಜಾಹೋಮ ಮಾಡಿಸಿದ್ದಾಗಿದೆ. ಹೆಣ್ಣು ಒಪ್ಪಿಸಿಕೊಡುವ ಶಾಸ್ತ್ರವೂ ಆಯಿತು. ಈಗ ಗಂಡಿನ ಕಡೆಯವರು ಹುಡುಗಿಯನ್ನು ಮನೆತುಂಬಿಸಿಕೊಳ್ಳಬೇಕಿದೆ. ವರನ ಮನೆ ದೂರವಾದ್ದರಿಂದ ಬಿಡದಿ ಮನೆಯಲ್ಲೇ ಮನೆತುಂಬಿಸಿಕೊಳ್ಳುವುದೆಂದಿದೆ, ತಾಯಿಯಿಟ್ಟ ಮಡಿಲಕ್ಕಿ ಸಮೇತ ಮದುಮಗಳು ಗೃಹಪ್ರವೇಶ ಮಾಡಬೇಕಿದೆ. ಹುಡುಗಿ ಅದುವರೆಗೂ ಮೌನಗೌರಿಯಂತಿದ್ದವಳು ಈಗ ತಲೆಯೆತ್ತಿ ತನ್ನ ಅತ್ತೆ ಮಾವನ ಕಡೆ ನೋಡುತ್ತಾ ಹೇಳುತ್ತಿದ್ದಾಳೆ. "ಆಂಕಲ್, ಆಂಟಿ, ನೀವು ನನ್ನ ಕ್ಷಮಿಸ್ಬೇಕು. ನನಗೆ ಈ ಮದುವೆ ಇಷ್ಟವಿಲ್ಲ. ನಾನು ಬೇರೆ ಒಬ್ಬರನ್ನ ಇಷ್ಟಪಡ್ತಿದ್ದೀನಿ. ಈ ಮದುವೆಗೆ ನನ್ನನ್ನ ಬಲವಂತವಾಗಿ ಒಪ್ಪಿಸಿದ್ದಾರೆ. ನಾನು ನಿಮ್ಮ ಮನೆಗೆ ಬಂದರೆ ನಿಮಗೂ ಅನ್ಯಾಯ ಮಾಡಿದ ಹಾಗಾಗುತ್ತೆ. ನನಗೂ ಅನ್ಯಾಯವಾಗುತ್ತೆ. ನನ್ನ ಹೀಗೇ ಕಳುಹಿಸಿಕೊಡಿ. ನಾನು ಹೊರಟುಹೋಗುತ್ತೇನೆ." ಅವಳು ಆ ಹಿರಿಯರ ಕಾಲಿಗೆ ಬೀಳುತ್ತಿದ್ದಾಳೆ. ಒಂದೇ ಕ್ಷಣದಲ್ಲಿ ಅಲ್ಲೆಲ್ಲಾ ಕೋಲಾಹಲವಾಗಿದೆ. ಹುಡುಗಿಯ ತಾಯಿ, ''ಸುಧಾ, ನಿಂಗೇನು ತಲೆಕೆಟ್ಟಿದೆಯಾ" ಎಂದು ಅಬ್ಬರಿಸುತ್ತಿದ್ದಾರೆ. ತಂದೆ ಏನು ಮಾಡಲೂ ತೋಚದೇ ಕಳವಳಗೊಂಡಿದ್ದಾರೆ. ಸುಧಾಳ ತಾಯಿ ಒಮ್ಮೆಲೇ ಮಗಳ ಬಳಿ ಬಂದು 'ಇದೇನು ಮಾಡ್ತಿದೀ ನೀನು. ನಮ್ಮ ಮರ್ಯಾದೆ ಕಳೀಬೇಕೂಂತ ಇದೀಯಾ' ಎನ್ನುತ್ತಿದ್ದಾರೆ. ಸುಧಾ ತಾಯಿಯಿಂದ ಬಿಡಿಸಿಕೊಳ್ಳುತ್ತಾ ''ನೀನು ನನ್ನನ್ನ ಧಾರೆಯೆರೆದು ಕೊಟ್ಬಾಯ್ತು. ಈಗ ನಾನು ನಿನಗೆ ಸೇರಿದವಳಲ್ಲ. ನನಗೂ ನಿನಗೂ ಇದ್ದ ಸಂಬಂಧ ಕಡಿದುಹೋಯ್ತು" ಎನ್ನುತ್ತಿದ್ದಾಳೆ. ಸುನಿಲ್ ತಂದೆ ನಾಗರಾಜ್, "ಇದೇನು ಸ್ವಾಮಿ, ಏನು ನಡೀತಿದೆ?" ಎಂದು ಬೀಗರನ್ನು ಕೇಳುತ್ತಿದ್ದಾರೆ. ಸುನಿಲ್ ಅವಾಕ್ಕಾಗಿ ಸುಧಾಳನ್ನೇ ನೋಡುತ್ತಿದ್ದಾನೆ. "ಏನಿದು ಸುಧಾ, ತಮಾಷೆ ಮಾಡ್ತಿಲ್ಲ ತಾನೆ? ನೋಡು, ಎಲ್ಲ ನಮ್ಮನ್ನೇ ನೋಡ್ತಿದಾರೆ." ಎಂದು ಮೆಲ್ಲಗೆ ಹೇಳುತ್ತಿದ್ದಾನೆ. ಸುಧಾ ಅವನೆಡೆಗೆ ಕೈ ಮುಗಿಯುತ್ತಾ ''ನನ್ನನ್ನು ನೀವು ಕ್ಷಮಿಸಬೇಕು. ಈ ಮದುವೆ ನನ್ನ ಇಷ್ಟಕ್ಕೆ ವಿರೋಧವಾಗಿ ನಡೆದಿದೆ. ನಿಮಗೆ ಅನ್ಯಾಯ ಮಾಡ್ತಿದೀನಿ ನಾನು. ದಯವಿಟ್ಟು ನನ್ನ ಕಳಿಸಿಕೊಡಿ." ಎನ್ನುತ್ತಿದ್ದಾಳೆ.

"ಮೊದಲೇ ಹೇಳೋಕೇನಾಗಿತ್ತು? ಎಲ್ಲರೆದುರೂ ಮಾನ ತೆಗೆಯೋಕೆ ನೋಡ್ತಿದೀರಾ? ದೊಡ್ಡೋರಾಗಿ ನಿಮಗಾದ್ರೂ ಬುದ್ಧಿ ಇರಲಿಲ್ವೇ" ನಾಗರಾಜ ಕೋಪಾವಿಷ್ಟರಾಗಿ ಕೇಳುತ್ತಿದ್ದಾರೆ. ಸುಧಾಳ ತಂದೆ ಹಿಡಿಯಷ್ಟಾಗಿದ್ದಾರೆ. ತಾಯಿ ಅಳುತ್ತಾ ಕುಳಿತಿದ್ದಾರೆ.

"ಹೌದು ಅಂಕಲ್, ಮೊದಲೇ ಹೇಳಬೇಕಾಗಿತ್ತು. ಅವರಲ್ಲವಾದರೂ ನಾನು ಹೇಳಬೇಕಾಗಿತ್ತು. ಆದರೇನು ಮಾಡಲಿ? ಈ ಮದುವೆಗೆ ಒಪ್ಪದೇ ಇದ್ದರೆ ನಮ್ಮಮ್ಮ ಸುಟ್ಟುಕೊಂಡು ಪ್ರಾಣಬಿಡ್ತೀನಿ ಅಂತ ಹೆದರಿಸಿದ್ರು, ಅಪ್ಪಾನೂ ನನಗೆ ಸಪೋರ್ಟ್ ಮಾಡಲಿಲ್ಲ. ತಾಯಿಯಾದವಳ ಸಾವಿಗೆ ಕಾರಣವಾದರೆ ಅನ್ನೋ ಭಯ ನನ್ನನ್ನ ಈ ಮದುವೆಗೆ ಒಪ್ಪಿಕೊಳ್ಳುವಂತೆ ಮಾಡ್ತು. ನಾನಿಷ್ಟ ಪಟ್ಟವನ ಮೇಲಿನ ಪ್ರೀತಿ ನಿಮಗೆ ನಿಜ ತಿಳಿಸುವಂತೆ ಧೈರ್ಯ ಕೊಡ್ತು."

"ನೀನೇನೋ ಸುಲಭವಾಗಿ ಹೇಳಿಬಿಟ್ಟೆ, ನನ್ನ ಮಗನ ಕತೆಯೇನು ಈಗ? ಮದುವೆಯಾಗಿ, ತಾಳಿ ಕಟ್ಟಿಸಿಕೊಂಡಮೇಲೆ ಹುಡುಗಿ ಅವನನ್ನ ಬಿಟ್ಟುಹೋದ್ಲು ಅಂದ್ರೆ ಅವನ ಜೀವನ ಹಾಳಾಗಲ್ವೇ? ನಮ್ ಮರ್ಯಾದೆ ಗತಿ ಏನು, ಜನ ತಲೆಗೊಂದು ರೀತಿ ಮಾತಾಡ್ತಾರೆ. ನಾವು ನೇಣು ಹಾಕ್ಕೋಬೇಕು ಅಷ್ಟೇ."

"ದಯವಿಟ್ಟು ಹಾಗೆ ಮಾತಾಡ್ಬೇಡಿ ಆಂಟಿ. ನನ್ನಿಂದ ನಿಮಗೆಲ್ಲಾ ತುಂಬಾ ಅನ್ಯಾಯವಾಗಿದೆ. ಆದ್ರೆ ನಾನು ವಿಷಯ ಮುಚ್ಚಿಟ್ಟು ನಿಮ್ಮ ಮನೆಗೆ ಬಂದು ಅವನ ನೆನಪಲ್ಲೇ ನಿಮ್ಮ ಮಗನ ಜೊತೆ ಸಂಸಾರ ಮಾಡಿದ್ರೆ ಅದು ಇನ್ನೂ ತಪ್ಪಾಗತ್ತೆ. ನೀವು ಬೇರೆ ಒಳ್ಳೇ ಹುಡುಗೀನ ನೋಡಿ ಮದುವೆಮಾಡಿ. ನನ್ನ ಕಾರಣವಾಗಿ ಏನೂ ತೊಂದರೆಯಾಗದ ಹಾಗೆ ನಾನು ಮಾಡ್ತೀನಿ. ಯಾರೇನಂದ್ರೂ ನಾನು ಇರೋ ವಿಷಯ ತಿಳಿಸಿ, ಇದ್ರಲ್ಲಿ ನಿಮ್ಮ ತಪ್ಪೇನಿಲ್ಲ. ತಪ್ಪೆಲ್ಲಾ ನಂದೇ ಅಂತ ಒಪ್ಪಿಸ್ತೀನಿ. ನಾನು ಮಾತ್ರ ನಿಮ್ಮ ಮನೆಗೆ ಬಂದು ನಿಮಗೆ ಮೋಸ ಮಾಡ್ಲಾರೆ. ದಯವಿಟ್ಟು ನನ್ನ ಕಳಿಸಿಕೊಡಿ." ಅವಳು ಅಳುತ್ತಾ ಹೇಳುತ್ತಿದ್ದರೆ ಒಬ್ಬೊಬ್ಬರ ಮನಸ್ಸಿನಲ್ಲಿ ಒಂದೊಂದು ಯೋಚನೆ. ಸುಧಾಳ ತಂದೆತಾಯಿಯರಂತೂ ಹಿಡಿಯಷ್ಟಾಗಿದ್ದರು. ಎಲ್ಲ ಮೌನವಾಗೇ ಮುಖ ಮುಖ ನೋಡುತ್ತಿದ್ದರು. ಅದುವರೆಗೂ ಸುಂದರವಾದ ಕನಸಿನಲ್ಲಿ ತೇಲುತ್ತಿದ್ದ ಸುನಿಲ್ ಈಗ ಇದ್ದಕ್ಕಿದ್ದಂತೆ ಎದುರಾದ ಈ ಪರಿಸ್ಥಿತಿಯಲ್ಲಿ ಬೇಗನೇ ವಾಸ್ತವಕ್ಕೆ ಬಂದ. ತನ್ನ ಕೊರಳಿನಲ್ಲಿದ್ದ ಹಾರ ತೆಗೆಯುತ್ತಾ 'ಅಪ್ಪಾ, ಅಮ್ಮಾ ಒಳಗೆ ಬನ್ನಿ' ಎಂದು ಕೊಠಡಿಯ ಒಳಗೆ ಕರೆದುಕೊಂಡುಹೋಗಿ ಬಾಗಿಲು ಹಾಕಿಕೊಂಡ. ಒಂದೆರಡು ನಿಮಿಷದಲ್ಲೇ ಹೊರಗೆ ಬಂದು ತನ್ನ ಕಡೆಯ ನೆಂಟರಿಗೆ ತಮ್ಮ ವಸ್ತುಗಳನ್ನು ಪ್ಯಾಕ್ ಮಾಡಿಕೊಳ್ಳಲು ಹೇಳಿದ, ಸುಧಾಳ ಕಡೆ ತಿರುಗಿ ''ನೀನು ಮಾಡಿದ್ದು ನಮ್ಮ ಮಟ್ಟಿಗೆ ಅನ್ಯಾಯವಾದ್ರೂ. ನಿನ್ನ ಧೈರ್ಯಕ್ಕೆ ಮೆಚ್ಚಲೇಬೇಕು. ಹೋಗು, ಈ ಮದುವೆಯಿಂದ ನಿನ್ನನ್ನ ಬಿಡುಗಡೆ ಮಾಡಿದೀನಿ.' ಎಂದು ಒಳಗೆ ಹೋದ. ಸುಧಾ ತನ್ನವರನ್ನೆಲ್ಲಾ ಧಿಕ್ಕರಿಸಿ, ಮದುಮಗಳ ವೇಷದಲ್ಲೇ ಮದುವೆಮನೆಯಿಂದ ಹೊರಟುಹೋದಳು. ಅವಳನ್ನು ತಡೆಯುವ ಶಕ್ತಿ ಯಾರಿಗೂ ಇರಲಿಲ್ಲ.

ನನ್ನ ಕಣ್ಣೆದುರಿಗೆ ಎಲ್ಲಾ ನಡೆಯುತ್ತಿದ್ದಂತಿತ್ತು. ಆ ಹುಡುಗಿ ಮಾಡಿದ್ದು ಸರಿಯೆ? ಅವರಮ್ಮ ಮಾಡಿದ್ದು ತಪ್ಪೆ? ಆ ಹುಡುಗನ ಮನೆಯವರಿಗೆ ಆದ ಅನ್ಯಾಯಕ್ಕೆ ಯಾರು ಕಾರಣ? ಸುಧಾ ತಾನು ಪ್ರೀತಿಸಿದವನನ್ನು ಮರೆತು ಸುನಿಲ್‌ನೊಂದಿಗೆ ಸುಖವಾಗಿದ್ದರೆ ಹೇಗಿರುತ್ತಿತ್ತು? ಪ್ರಶ್ನೆಗಳು ಒಂದರ ಹಿಂದೆ ಒಂದು ಮುತ್ತುತ್ತಿತ್ತು. ಗಾಯತ್ರಿ ಹೇಳುತ್ತಿದ್ದಳು. "ನನಗೆ ಗೊತ್ತು ಇದ್ರಲ್ಲಿ ಸುನಿಲ್ ಮನೆಯವರ ತಪ್ಪಿಲ್ಲ ಅಂತ. ಆದರೆ ಎರಡನೇ ಸಂಬಂಧ ಅಂತ ನೆಂಟರಿಷ್ಟರು ಆಡಿಕೊಂಡ್ರೆ? ನಾಳೆ ಆಶಾ ನನ್ನ ಎರಡನೇ ಸಂಬಂಧಕ್ಕೆ ಕೊಟ್ರೆ ಅಂತ ಕೋಪ ಮಾಡಿಕೊಂಡ್ರೆ?"

"ನಿನಗೆ ಈ ಸಂಬಂಧ ಬೆಳೆಸೋಕೆ ಇಷ್ಟವೇ ಗಾಯತ್ರಿ?"

"ಇಂಥ ಹುಡುಗ ಖಂಡಿತಾ ಮತ್ತೆ ಸಿಗಲ್ಲ ಜಯಾ. ಮೂರು ವರ್ಷದಿಂದ ಎಷ್ಟು ಹುಡುಗರನ್ನ ನೋಡಿದ್ದಾಯ್ತು? ಎಲ್ಲ ಬಂದು, ತಿಂದು, ಬೇಡ ಎಂದು ಓಡಿ ಹೋಗುವವರೇ. ನಮ್ ಆಶಾಗಿಂತ ತೀರಾ ಸಾಮಾನ್ಯವಾಗಿರೋರೂ ಅವಳನ್ನು ಬೇಡ ಅಂದಾಗ ಎಷ್ಟು ಅಳುತ್ತಿದ್ದಳು ಗೊತ್ತಾ? ಹುಡುಗ ಬರೀ ಚೆನ್ನಾಗಿರೋದೊಂದೇ ಅಲ್ಲ. ಒಳ್ಳೆ ಕೆಲಸ, ಅಪ್ಪ, ಅಮ್ಮನೂ ಒಳ್ಳೇ ಜನ. ಬಿಡೋಕೂ ಇಷ್ಟವಿಲ್ಲ – ಮನಸ್ಸಿಗೆ ಏನೋ ಸ್ವಲ್ಪ ಅಳುಕು. ಯಾರೇನಂತಾರೋ ಅಂತ ಭಯ".

''ನೀನು ಕನ್ವಿನ್ಸ್ ಆದ್ರೆ ಸರಿ. ಯಾರು ಏನೆಂದರೂ ಸಮರ್ಥಿಸಿಕೊಳ್ಳಹುದು. ಇಷ್ಟಕ್ಕೂ ಆಶಾ ಅಭಿಪ್ರಾಯ ಕೇಳಿದೆಯಾ?"

''ಇಲ್ಲ. ನಾನಿನ್ನೂ ಅವಳ ಜೊತೆ ಮಾತಾಡಿಲ್ಲ. ಇಷ್ಟು ಒಳ್ಳೇ ಸಂಬಂಧ ಅವಳ್ಯಾಕೆ ಬೇಡ ಅಂತಾಳೆ? ಇಷ್ಟು ದಿನ ಮದುವೆಯಾಗ್ಲಿಲ್ಲ ಅಂತ ನಾನು ಅಂದಾಗೆಲ್ಲಾ ಅವಳು ಎಷ್ಟು ಅಳ್ತಾ ಇದ್ಲು ಗೊತ್ತಾ? ನಾನೂ ಅವಳನ್ನ ತುಂಬಾ ನೋಯ್ಸಿದೀನಿ.'' ಗಾಯತ್ರಿಯ ಕಣ್ಣಲ್ಲಿ ನೀರು ತುಂಬಿತು.

‘‘ಹೌದು ಗಾಯತ್ರಿ. ಆಶಾ ನನ್ನ ಹತ್ರ ತುಂಬಾ ನೊಂದುಕೊಳ್ತಿದ್ಲು. ಇನ್ನೇಲೆ ಅವಳನ್ನ ಏನೂ ಅನ್ಬೇಡ. ಮದುವೆಯಾಗದಿದ್ರೆ ಇದ್ರಲ್ಲಿ ಅವಳ ತಪ್ಪೇನಿದೆ ಹೇಳು?’’

"ಈಗೇನ್ಮಾಡ್ಲಿ ಹೇಳು?’’ ಗಾಯತ್ರಿ ಅಸಹಾಯಕ ಧ್ವನಿಯಲ್ಲಿ ಕೇಳಿದಳು.

‘‘ಮೊದಲು ಆಶಾನ ಕೇಳು. ಅವು ಒಪ್ಪಿಕೊಂಡರೆ ಮಾಡಿಬಿಡು. ಯಾರೋ ಏನೋ ಅಂತಾರೆ ಅಂತ ಹಿಂಜರೀಬೇಡ.’’

‘‘ಸರಿ, ಹಾಗೇ ಮಾಡ್ತೀನಿ. ಈ ಸಲವಾದರೂ ಎಲ್ಲ ಸರಿಹೋದರೆ ಸಾಕು. " ಅವಳು ಹೊರಟಳು.

ಒಂದು ಹದಿನೈದು ದಿನ ಕಳೆದಿರಬಹುದು. ಇನ್ನೇನು ಗಾಯತ್ರಿ ಮನೆಯಲ್ಲಿ ಮದುವೆಯ ಓಡಾಟ ಶುರುವಾಯಿತೇನೋ, ಆದರೆ ಅವಳೇಕೆ ನನಗೆ ಫೋನ್ ಮಾಡಿಲ್ಲ? ಆ ದಿನ ನಾನೇ ಫೋನ್ ಮಾಡ್ದೆ. ಎತ್ತಿಕೊಂಡವಳು ಗಾಯತ್ರಿಯೇ.

"ಏನು ಮರೆತೇಬಿಟ್ಯಾ? ಹುಡ್ಗನ ವಿಷ್ಯ ಏನಾಯ್ತು?"

"ಅಯ್ಯೋ, ಆಶಾ ಮದುವೆ ಅಂದ್ರೆ ಅದೇನು ಸಾಮಾನ್ಯನಾ? ನಾನೂ ನೋಡ್ತೀನಿ. ಅದಿನ್ನೆಂಥ ರಾಜಕುಮಾರ ಬರ್ತಾನೆ ಇವಳನ್ನ ಹುಡುಕ್ಕೊಂಡು. ಇವ್ಳ ದೆಸೆಯಿಂದ ನನ್ ಮಗನ ಮದುವೇನೂ ಆಗ್ತಿಲ್ವೇ?" ಗಾಯತ್ರಿಯ ಧ್ವನಿಯಲ್ಲಿ ಕಹಿಯಿತ್ತು. ಹಿಂದುಗಡೆಯಿಂದ ಆಶಾನ ಧ್ವನಿ ಕೇಳಿಸುತ್ತಿತ್ತು. 'ಯಾಕಮ್ಮಾ ಹೀಗಾಡ್ತೀಯಾ? ನಾನೂ ಒಬ್ಬಳು ಮನುಷ್ಯಳೂಂತ ನೀನು ಯಾಕೆ ತಿಳ್ಕೊಳಲ್ಲ. ನೀನು ಅಣ್ಣನ ಮದುವೆ ಮಾಡು, ನಾನು ಬೇಕಾದ್ರೆ ಎಲ್ಲಾದ್ರೂ ಹಾಸ್ಟೆಲಿಗೆ ಹೊರಟುಹೋಗ್ತೀನಿ.’’

ನನಗೆ ಯಾಕೋ ಫೋನ್ ಮಾಡಿದ ಸಮಯ ಸರಿಹೋಗಲಿಲ್ಲ ಅಂತ ಗೊತ್ತಾಯಿತು. ಅಳುತ್ತಿದ್ದ ಗಾಯತ್ರಿಗೆ "ನಾನು ಆಮೇಲೆ ಫೋನ್ ಮಾಡ್ತೀನಿ, ಸಾಧ್ಯವಾದ್ರೆ ಆಶಾನ ಕಳಿಸ್ಕೊಡು, ಅವಳಿಗಿಷ್ಟವಾದ್ರೆ ನನ್ನ ಹತ್ರ ಮಾತಾಡ್ಲಿ' ಎಂದು ಫೋನಿಟ್ಟೆ.

ಅದೇ ಸಂಜೆ ಆಶಾ ಬಂದಳು. ಅವಳ ಮುಖ ದುಗುಡದಿಂದ ತುಂಬಿತ್ತು. ನನಗೆ ಪಾಪ ಅನ್ನಿಸಿತು.

‘‘ಬಾ, ಚಿಯರ್ ಅಪ್. ಆಗಬಾರದ್ದೇನೂ ಆಗಿಲ್ಲ’’ ಎಂದು ಜ್ಯೂಸ್ ತಂದಿತ್ತೆ. ಆ ವಿಷಯವನ್ನೇ ತೆಗೆಯದೆ ಒಂದಿಷ್ಟು ಹೊತ್ತು ಅವಳ ಕೆಲಸದ ಬಗ್ಗೆ, ಅದು ಇದು ಎಂದು ಒಂದಿಷ್ಟು ಹೊತ್ತು ಮಾತಾಡಿದೆವು. ಅವಳೇ ವಿಷಯ ತೆಗೆದಳು.

‘‘ನೀವು ಹೇಳಿ ಆಂಟಿ, ನಾನು ಮಾಡಿದ್ದು ತಪ್ಪಾ?"

‘‘ಏನ್ ಮಾಡ್ಲೆ ಹೇಳು? ತಪ್ಪೋ ಸರಿಯೋ ಅಂತ ಆಮೇಲೆ ಚರ್ಚಿಸೋಣ. ಇಷ್ಟಕ್ಕೂ ತಪ್ಪು ಸರಿ ಅನ್ನೋದು ಅವರವರ ಮನೋಭಾವನೆಗೆ ಸಂಬಂಧಪಟ್ಟಿದ್ದು. ಒಬ್ಬರಿಗೆ ಸರಿ ಅನಿಸಿದ್ದು, ಇನ್ನೊಬ್ಬರಿಗೆ ಸರಿ ಅನಿಸಬೇಕಿಲ್ಲ."

"ಅಮ್ಮ ಹಾಗಲ್ಲ ಆಂಟಿ, ತನಗೆ ಸರಿ ಅನಿಸಿದ್ದು ಮಾತ್ರ ಸರಿ ಅಂತಾರೆ. ಒಂದು ವಾರದಿಂದ ಬರೀ ಗಲಾಟೆ. ಈ ಸಲ ಅಮ್ಮ ನಿಮ್ ಹೆಸ್ರೂ ಹೇಳ್ತಾ, ನನ್ನನ್ನ ಬೈತಾ ಇದಾರೆ.’’

‘‘ನನ್ ಹೆಸರಾ? ನಾನೇನು ಮಾಡ್ದೆ?’’ ನನಗೆ ಆಶ್ಚರ್ಯವಾಯಿತು.

"ಅದೇ ಆ ಹುಡ್ಗ, ಎರಡನೇ ಮದುವೆ ಪ್ರಪೋಸಲ್ ಬಂದಿತ್ತಲ್ಲ, ನಿಮ್ಮ ಹತ್ತಿರ ಮಾತಾಡಿದಾಗ ನೀವೂ ಮಾಡಬಹುದು ಅಂತ ಹೇಳಿದ್ರಂತೆ. ಅಮ್ಮ ಒಂದೇ ಸಮ ನನ್ನ ಬಲವಂತ ಮಾಡ್ತಿದಾಳೆ."

"ಓಹ್! ಅದಾ ವಿಷ್ಯ? ಈ ಸಂಬಂಧ ನಿಂಗಿಷ್ಟವಿಲ್ವಾ?"

"ನಿಜ ಹೇಳಿಬಿಡ್ತೀನಿ ಆಂಟಿ, ಇದನ್ನ ಎರಡನೇ ಸಂಬಂಧ ಅಂತ ಖಂಡಿತ ಬೇಡ ಅಂತಾ ಇಲ್ಲ. ಇದರಲ್ಲಿ ಆ ಹುಡುಗನ, ಅವರ ಮನೆಯವರ ತಪ್ಪು ಇಲ್ಲ ಅಂತ ಗೊತ್ತು. ಆದರೆ ನನಗೇಕೋ ಈ ಸಂಬಂಧ ಬೇಡಾ ಅನ್ನಿಸ್ತಿದೆ."

"ಅವರ ತಪ್ಪೇನೂ ಇಲ್ಲ ಅಂತ ಹೇಳ್ತಿದೀ. ಮದುವೆ ಒಪ್ಪಿಗೆ ಇಲ್ಲ ಅಂತಾನೂ ಹೇಳ್ತಿದೀ. ನನಗರ್ಥವಾಗ್ತಿಲ್ಲ."

"ಆಂಟೀ, ಮೂರು ವರ್ಷದಿಂದ ನನ್ನ ಮದುವೆ ಪ್ರಯತ್ನ ನಡೀತಿದೆ. ಎಷ್ಟೋ ಜನ ಬಂದ್ರು, ಹೋದ್ರು. ಕೆಲವರು ಸ್ವಲ್ಪ ಸೌಜನ್ಯದಿಂದಲೇ ಜಾತಕ ಒಪ್ಪಿಗೆಯಾಗಿಲ್ಲ ಅಂತ ನಿರಾಕರಿಸಿದ್ರು. ಇನ್ನು ಕೆಲವರು ಹುಡುಗೀನ ಹುಡುಗ ಒಪ್ಪಲಿಲ್ಲ ಅಂದರು. ಎಷ್ಟೋ ಹುಡುಗರು ನನಗೇ ಇಷ್ಟವಾಗದಿದ್ರೂ ಈ ಗಲಾಟೆ ತಪ್ಪಿದರೆ ಸಾಕು ಅಂತ ಅವರು ಒಪ್ಪಿಕೊಂಡರೆ ಮಾಡಿಕೊಂಡುಬಿಡೋಣ ಅಂದುಕೊಂಡಿದ್ದೆ. ನನಗೇ ಬೇಡ ಅನಿಸಿದ ಹುಡುಗರೂ ನನ್ನನ್ನ ಒಪ್ಪಿರಲಿಲ್ಲ. ತಾವು ಸ್ವತಃ ಹೇಗೇ ಇದ್ದರೂ ಹುಡುಗೀರು ಮಾತ್ರ ಚೆನ್ನಾಗಿರ್ಬೇಕು ಅಂತ ನಿರೀಕ್ಷಿಸುತ್ತಾರೆ. ಎಷ್ಟು ದಿನ, ಎಷ್ಟು ರಾತ್ರಿ ಹಾಗೆ ಅವರಿಂದ ನಿರಾಕರಿಸಲ್ಪಟ್ಟಾಗಲೆಲ್ಲಾ ಅಳುತ್ತಿದ್ದೆ ಗೊತ್ತಾ? ಅಮ್ಮನಿಂದ ಎಷ್ಟು ಸಲ ಮೂತಿ ತಿವಿಸಿಕೊಂಡಿದ್ದೆ, ಅದೂ ನಾನು ಮಾಡದ ತಪ್ಪಿಗೆ." ಅವಳು ಅಳಲಾರಂಭಿಸಿದಳು.

ನನಗೆ ಕೆಡುಕೆನಿಸಿತು. "ಅಳಬೇಡ, ಆದ್ರೆ ಈಗ ಬಂದಿರೋ ಹುಡ್ಗನ್ನ ಯಾಕೆ ಒಪ್ಪಿಕೊಳ್ಳಲಿಲ್ಲ? ಅವರೆಲ್ಲಾ ನಿನ್ನ ಒಪ್ಪಿದ್ದಾರಲ್ಲ?"

"ಒಪ್ಪಿದಾರೆ. ಆಂಟಿ. ಒಂದು ಪ್ರಶ್ನೆ ಕೇಳಲಾ? ಅಕಸ್ಮಾತ್ ಅವರಿಗೆ ಮೊದಲ ಮದುವೆಯಲ್ಲಿ ಮೋಸ ಆಗ್ಲಿಲ್ಲಾ ಅಂದ್ರೆ ನನ್ನಂಥವಳನ್ನ ಒಪ್ತಿದ್ರಾ ಅಂಟಿ? ಅವರಿಗೆ ಚೆನ್ನಾಗಿರೋ ಹುಡುಗೀರು ಸಿಕ್ತಾ ಇಲ್ಲ. ನಂಗೊತ್ತು. ಅವರೇನೂ ವಿಷಯ ಮುಚ್ಚಿಟ್ಟು ಮದುವೆ ಮಾಡ್ತಿಲ್ಲ. ಮಾಡಬೇಕೂಂತ ಅವರ ಮನಸ್ಸಿನಲ್ಲಿಲ್ಲ. ಒಳ್ಳೆಯ ಸ್ವಭಾವವೇ ಎಷ್ಟೋ ಜನರನ್ನ ನೋಡಿದಾರೆ. ಸ್ವತಃ ಎಲ್ಲಾ ಕತೆ ಹೇಳಿಯೇ ಇದಾರೆ. ಆದ್ರೂ ಹುಡುಗೀರೇ ಒಪ್ತಾ ಇಲ್ಲ. ಈಗ ಯಾರೂ ಸಿಕ್ಕಲಿಲ್ಲ ಅಂತ ಹುಡುಗಿ ಸುಮಾರಾಗಿದ್ರೆ ಸಾಕು, ಒಟ್ಟಿನಲ್ಲಿ ಮದುವೆಯಾದ್ರೆ ಸಾಕು ಅಂತ ಅವರು ಬಂದ್ರೆ ನಾನು ಒಪ್ಪಿಕೊಂಡುಬಿಡ್ಬೇಕಾ? ನನ್ನನ್ನ ಎಷ್ಟು ಜನ ತಿರಸ್ಕರಿಸಿದ್ರು? ಈಗ ಅವರಿಗೆ ಯಾರೂ ಸಿಗದೇ, ಎರಡನೇ ಸಾಲಿನಲ್ಲಿರುವ ನಾನಾದ್ರೂ ಪರವಾಗಿಲ್ಲ ಅಂತ ಯಾರೋ ಬಂದ್ರೆ, ನನಗೆ ನಾನೇನಾದ್ರೂ ದನದ ಜಾತ್ರೆಯಲ್ಲಿ ಮಾರಾಟಕ್ಕಿಟ್ಟಿರೋ ಪ್ರಾಣೀನಾ ಅನ್ನಿಸ್ತಿದೆ. ನನ್ ಮನಸ್ಸು ಮುಂದೇನೂ ಚುಚ್ಚಲ್ವಾ? ಯಾರೂ ಸಿಗಲಿಲ್ಲ, ಮೊದಲನೇ ಮದುವೇಲಿ ಮೋಸ ಆಯ್ತು, ಅದಕ್ಕೇ ನನ್ನನ್ನ ಮಾಡಿಕೊಂಡರು ಅನಿಸಲ್ವಾ? ಆ ಭಾವನೆ ಬಂದ್ರೆ ನಾನು ನೆಮ್ಮದಿಯಾಗಿರ್ತೀನಾ? ಅವರಿಗೆ ನೆಮ್ಮದಿಯಿರುತ್ತಾ? ಹುಡುಗಿ, ಹುಡುಗನಿಗೆ ವರಸ್ವಾಮ್ಯವೇ ಇಲ್ಲ ಅಂತ ನೋಡಿದೋರು ನಗಲ್ವಾ? ಅಥವಾ ಹುಡುಗೀ ಅದೃಷ್ಟ ನೋಡು, ಅವಳಿಗಿಂಥ ಚೆನ್ನಾಗಿರೋ ಹುಡುಗ ಸಿಕ್ಕಿದಾನೆ ಅನ್ನಲ್ವಾ? ಅದೇನಾದ್ರೂ ನನ್ನ ಕಿವಿಗೆ ಬಿದ್ದರೆ ನನಗೆ ನೋವಾಗಲ್ವಾ ?"

ಅವಳು ಕೇಳ್ತಾ ಇದ್ರೆ ನನಗೇ ಬೇಜಾರಾಗುತ್ತಿತ್ತು. ನೋವಾಗುತ್ತಿತ್ತು. ಈಗಲೂ ಈ ಕಾಲದಲ್ಲೂ ಮದುವೆ ವಿಷಯಕ್ಕೆ ಬಂದರೆ ಹೆಣ್ಣುಮಕ್ಕಳಿಗೂ ಸ್ವತಂತ್ರ ಅಭಿಪ್ರಾಯ ಇರುತ್ತೆ ಅಂತ ಎಷ್ಟು ಜನ ತಿಳಿದುಕೊಳ್ಳುತ್ತಾರೆ?

ಆಶಾ ಧೃಢವಾದ ಧ್ವನಿಯಲ್ಲಿ ಹೇಳುತ್ತಿದ್ದಳು. "ಆಂಟಿ, ಸುನಿಲ್ ಒಳ್ಳೇ ಹುಡುಗಾನೇ, ಅವರ ಮನೆಯವರೂ ಒಳ್ಳೆಯವರು. ಆದರೆ ಅವರಿಗೆ ಅನ್ಯಾಯವಾಗಿದೆ ಅಂತ ನಾನು ಅವರನ್ನ ಮದುವೆ ಮಾಡಿಕೊಳ್ಳಲ್ಲ ಆಂಟಿ. ಎಷ್ಟೋ ಹುಡುಗರು ನನ್ನ ಬೇಡ

ಅಂದಿದಾರೆ. ಒಂದೇ ಒಂದು ಸಲ, ಒಂದೇ ಸಲ ಆಂಟಿ ನಾನು ಬೇಡ ಅಂದೆ. ಪರವಾಗಿಲ್ಲ. ಮದುವೆಯಾಗದಿದ್ರೂ ಪರವಾಗಿಲ್ಲ. ನಾನು ಹೀಗೇ ಇರ್ತೀನಿ. ಆದರೆ ನನಗೆ ಮೀರಿದ ಸಂಬಂಧ ಬೇಡ ಆಂಟಿ, ನಮ್ ಅಮ್ಮಂಗೆ ನೀವು ಹೇಳಿ. ನನಗೂ ಒಂದು ಮನಸ್ಸಿದೆ ಅಂತ ಹೇಳಿ. ಪ್ಲೀಸ್ ಆಂಟಿ, ಹೇಳ್ತೀರಾ?"

ನನ್ನ ಬಾಯಿ ಕಟ್ಟಿಹೋಯಿತು. ಅವಳ ಕೈ ಹಿಡಿದು, ಕಣ್ಣಲ್ಲೇ ನನ್ನ ಮೆಚ್ಚುಗೆ ಸೂಚಿಸಿದೆ.

ಮುಂದಿನೆರಡು ತಿಂಗಳಲ್ಲೇ ಆಶಾಗೆ ಬೇರೆ ಕಡೆ ಸಂಬಂಧ ಸಿಕ್ಕಿ ಮದುವೆಯಾಯಿತು.

***

ಯತ್ನ ಮತ್ತು ವಿಫಲತೆ – ಲೇಖನಮಾಲೆ–6

ಅಲ್ಟ್ರಾ ಮಾಡರ್ನ್ ಮದುಮಗ

– ಮಾಧುರಿ ಕೃಷ್ಣ

ಆಗಿನ್ನೂ ಹೊಸದು. ತಮ್ಮನ ಮಗನಿಗೆ ಮದುವೆ ಮಾಡಬೇಕು ಎಂಬ ಯೋಚನೆ ಹುಟ್ಟಿದ್ದೇ ಒಂದು ವಿಚಿತ್ರ ಸನ್ನಿವೇಶದಲ್ಲಿ. ಆವತ್ತು ಒಂದು ಉತ್ತಮವಾದ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದೆ. ಸಮ್ಮೇಳನವು ಚೆನ್ನಾಗಿದ್ದುದು ಮಾತ್ರವಲ್ಲ, ನನ್ನಂಥಾ ಅಷ್ಟಿಷ್ಟು ಬರೆಯುವ ಅಭಿಲಾಷೆಯವರಿಗೆ ಉಪಯುಕ್ತವೂ ಆಗಿತ್ತು. ನಾಲ್ಕೂವರೆಗೆ ಕಾರ್ಯಕ್ರಮ ಮುಗಿಸಿ ಖುಷಿಯಲ್ಲೇ ಹೊರಗೆ ಬಂದೆ. ಆಗಲೇ ಎಲ್ಲ ತೊಂದರೆಗಳೂ ಕಾಣಿಸಿದ್ದು!

ಧನುರ್ಮಾಸದ ದಿನಗಳು. ಬಹಳ ಬೇಗ ಸಂಜೆಯಾಗುತ್ತಿದ್ದುದಲ್ಲದೆ ಮೈ ನಡುಗಿಸುವ ಚಳಿ ಬೇರೆ. ಜತೆಯಲ್ಲಿದ್ದವರೆಲ್ಲ ಒಬ್ಬೊಬ್ಬರಾಗಿ ಕರಗಿಹೋದರು. ಒಂಟಿಯಾಗಿ ಬಿಟ್ಟ ಆ ಗಳಿಗೆಯಲ್ಲಿ ನೆನಪಾಗಿದ್ದು ತಮ್ಮನ ಮಗ. ಕೂಡಲೇ ಮೊಬೈಲ್ ತೆರೆದು ಹೇಳಿದೆ, "ಹೀಗೆ ನಿರ್ಜನ ರಸ್ತೆಯಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ. ಬಂದು ಮನೆಗೆ ಡ್ರಾಪ್ ಕೊಡು". ಜತೆಗೆ 'ಪ್ಲೀಸ್' ಎನ್ನಲು ಮರೆತಿರಲಿಲ್ಲ. ಆದರೂ ಒಳಗಿಂದೊಳಗೇ ತಪ್ಪಿತಸ್ಥ ಭಾವವೊಂದು ಕುಟುಕುತ್ತಲೇ ಇತ್ತು. ಸರಿಯಾಗಿ 12 ನಿಮಿಷ. ರಾಯಲ್ ಎನ್ಫೀಲ್ಡ್ ಗುಡುಗುಡಾಯಿಸಿಕೊಂಡು ಬಂತು. ಸೋದರಳಿಯ ಕೆಲಸದ ಮಧ್ಯದಲ್ಲಿದ್ದನೇನೋ!

"ಹತ್ತಿಕೊಳ್ಳಿ" ಎಂದದ್ದಷ್ಟೇ! ಮಾತೊಂದೂ ಆಡಲಿಲ್ಲ. ಮನೆ ಬಂದುಬಿಟ್ಟಿತು. ನನ್ನ ಅಪರಾಧೀ ಭಾವವನ್ನು ಮುಚ್ಚಲೆಂಬಂತೆ, "ಬಾರೋ ಒಳಗೆ, ಕಾಫಿ ಕೊಡ್ತೇನೆ" ಎಂದು ಕರೆದೆ. ಬೈಕ್‌ಗೆ ಕಿಕ್ ಹೊಡೆಯುತ್ತ "ಈಗಾಗೋಲ್ಲ, ಭಾನುವಾರ ಬರ್ತೇನೆ" ಎನ್ನುತ್ತ ಹೋಗಿಯೇಬಿಟ್ಟ.

"ಸಾಕೇನು ತಿರುಗಾಟ" ಎಂದು ಗೊಣಗಿಕೊಳ್ಳುತಿದ್ದ ಯಜಮಾನರಿಗೆ ಕಿವಿಗೊಡದೆ ಒಳಗೆ ಹೋಗುತಿದ್ದ ನಾನು ತಮ್ಮನ ಮಗನ ಬಗ್ಗೆಯೇ ಯೋಚಿಸುತ್ತಿದ್ದೆ. ಯಾವಾಗಲೂ ನಗುನಗುತ್ತ ಜಾಲಿಯಾಗಿರುತ್ತಿದ್ದ ಹುಡುಗ ಇಂದು ಗಂಭೀರವಾಗಿದ್ದ. ಕಲಿಕೆಯ ಕಾಲದ ನಾಲ್ಕೂ ವರ್ಷ ನಮ್ಮಲ್ಲೇ ಇದ್ದ ಹುಡುಗನಿಗೆ ಕ್ಯಾಂಪಸ್‌ನಲ್ಲಿ ಸೆಲೆಕ್ಟ್ ಆಗಿ ಎರಡು ವರ್ಷಕ್ಕೆ ಬಂದಿತ್ತು. ಪ್ಯಾಕೇಜ್ ಕೂಡ ಭರ್ಜರಿಯಾಗೇ ಇತ್ತು. ಇವತ್ತಿನ ಮೌನ ನೋಡಿದರೆ ಇನ್ನು ಮದುವೆ ಯೋಚನೆ ಮಾಡಬಹುದೇನೋ! ಹೊಳೆದದ್ದೆ ತಡ, ತಮ್ಮನಿಗೆ ಫೋನ್ ಮಾಡಿಯೇಬಿಟ್ಟೆ. ಕೇಳಿಸಿಕೊಂಡ ತಮ್ಮ ಅರೆಕ್ಷಣ ಸುಮ್ಮನಿದ್ದು ನಂತರ ಕೇಳಿದ, "ಇದೇನು, ನಿಂದೇ ಐಡಿಯಾನೋ ಇಲ್ಲ, ಅವನು ಹೇಳಿಸಿದ್ದಾ?"

"ಇಲ್ಲ ಇಲ್ಲ, ಇದು ನಂದೇ ಐಡಿಯಾ. ನಾನೇ ಯೋಚಿಸಿದ್ದು!" ಜತೆಯಲ್ಲೇ ಇನ್ನೊಂದು ಪ್ರಶ್ನೆ. "ಯಾಕೆ ನಿನ್ನ ನೆರೆಕರೆಯಲ್ಲಿ ಯಾರಾದರೂ ಮದುವೆಗೆ ನೆರೆದ ಕನ್ಯೆ ಇದ್ದಾಳೆಯೇ?"

ಇದು ನನ್ನ ಬುಡಕ್ಕೇ ಬರುತ್ತಿದೆಯಲ್ಲಾ ಎಂದೆನಿಸಿದರೂ, "ಯಾಕಾಗಬಾರದು? ಈಗಿಂದ ಕನ್ಯೆ ಹುಡುಕಕ್ಕೆ ಶುರು ಮಾಡಿದರೆ ವರ್ಷ ಎರಡು ವರ್ಷ ಹೋಗಬಹುದು ಒಳ್ಳೆಯ ಕನ್ಯೆ ಸಿಗೋಕೆ" ಎಂದೆ ಛಲ ಹಿಡಿದ ಬೇತಾಳನಂತೆ.

"ಅದೂ ಹೌದನ್ನು!" ಹರಿದುಬಂತು ಅವನ ಚರವಾಣಿ. "ಸರಿ, ಶುರುಮಾಡೇಬಿಡು. ಶುಭಸ್ಯ ಶೀಘ್ರಂ" ಎಂದು ಸಮ್ಮತಿ ಕೊಟ್ಟುಬಿಟ್ಟ. ಅಲ್ಲಿಗೆ 'ಜೈ ಶ್ರೀ ರಾಂ' ನಮ್ಮೆಜಮಾನರೆದುರಿಗೆ ಹೆಬ್ಬೆಟ್ಟು ಎತ್ತಿಯೇಬಿಟ್ಟೆ.

ನಾನಂದುಕೊಂಡಂತೆ ಆದಿತ್ಯವಾರ ಮನೆಗೆ ಬಂದ ಸೋದರಳಿಯನೊಂದಿಗೆ ಅದೂ ಇದೂ ಮಾತನಾಡುತ್ತಾ, ಹಿಂದಕ್ಕೂ ಮುಂದಕ್ಕೂ ಜಗ್ಗುತ್ತಾ ಲಗ್ನದ ವಿಷಯ ಪ್ರಸ್ತಾಪಿಸಿದೆ. ನಾನು ಅಷ್ಟೊಂದು ನಿಮಿಷ ಎಳೆದೆಳೆದು ಕೇಳಿದ ವಿಷಯಕ್ಕೆ ಕೊಂಚವೂ ವಿಳಂಬಿಸದೆ ಫಟಾಫಟ್, "ಯೆಸ್ ಆಂಟೀ, ಗೋ ಅಹೆಡ್! ಥ್ಯಾಂಕ್ಯೂ .." ಎಂದು ನನಗೇ ಕಣ್ಣು ಹೊಡೆದು ಬಿಡೋದೇ ನನ್ನ ಸೋದರಳಿಯ!

ಎಲ್ಲಾ ಕಡೆಯಿಂದಲೂ ಅಚ್ಚರಿಯ ಥಳಿತ ಬೀಳುವುದು ನನಗೇ!

ಇನ್ನು ಕೂರಲುಂಟೇ? ಚೂರೂ ಉದಾಸೀನ ತೋರದೇ ಕಂಡಕಂಡವರಲ್ಲಿ ಯೋಗ್ಯ ಕನ್ಯೆಯರ ಮಾಹಿತಿ ಸಂಗ್ರಹಿಸ ತೊಡಗಿದೆ. ನನ್ನ ಸ್ವಂತ ಮಗನಿಗೂ ನಾನು ಇಷ್ಟೊಂದು ಆಸ್ಥೆ ವಹಿಸಿರಲಿಲ್ಲ.

ತಿಂಗಳೊಂದು ಕಳೆಯುವಷ್ಟರಲ್ಲಿ ಒಂದು ಮ್ಯಾರೇಜ್ ಬ್ಯೂರೋ ತೆರೆಯುವಷ್ಟು ಫೋಟೋ ಜಾತಕಗಳು ನನ್ನಲ್ಲಿ ಜಮಾವಣೆ ಯಾಗಿತ್ತು. ಮೊದಲ ಕನ್ಯಾಪರೀಕ್ಷೆ ನಿಗದಿಯಾಯಿತು. ಮನೆ ಬಿಡೋ ಮುಂಚೆ ಉತ್ಸಾಹೀ ವರ ಹೇಳಿದ, "ಅಪ್ಪ ಅಮ್ಮ ಆಂಟೀ, ನೀವ್ಯಾರೂ ಕನ್ಯೆಯನ್ನು ಅದು ಇದು ಎಂದು ಏನೂ ಕೇಳಕೂಡದು! ನಾನೇ ಅವಳನ್ನು ಮಾತನಾಡಿಸುತ್ತೇನೆ. ತಿಳೀತುತಾನೇ?

ತಮ್ಮ ನನ್ನ ಮುಖ ನೋಡಿಯಾನು ಎಂದು ನಾನು ಕಾರಿನಿಂದ ಹೊರಗೆ ನೋಡಿದೆ. ನಮ್ಮೆಜಮಾನರು ರೋಡ್ ನೋಡುತ್ತ ಡ್ರೈವ್ ಮಾಡುತ್ತಿದ್ದರು.

ಕನ್ಯೆಯ ಮನೆ ಬಂತು. ಮನೆ ಅಚ್ಚುಕಟ್ಟಾಗಿತ್ತು. ಮನೆಯವರೂ ಸರಳ ಸ್ನೇಹಿಗಳಂತೆ ಕಂಡುಬಂದರು. ಕನ್ಯೆ ಟ್ರೇಯಲ್ಲಿ ಕಾಫಿ ಲೋಟ ಜೋಡಿಸಿ ತಂದಳು. ಕಾಫಿ ಬಿಸಿಬಿಸಿಯಾಗಿ ರುಚಿಯಾಗಿತ್ತು.

ನಮ್ಮೆಲ್ಲರ ಮನಸ್ಸು ಪ್ರಸನ್ನವಾಗಿತ್ತು. ಅದೂ ಇದೂ ಎಂದು ಎಷ್ಟೊತ್ತು ಸಮಯ ಕಳೆಯುವುದು! ಸೋದರಳಿಯನ ಕಣ್ಣು ನೋಡಿ, ನಗುನಗುತ್ತ ಕನ್ಯೆಯನ್ನುದ್ದೇಶಿಸಿ ನಾನಂದೆ, "ನಮ್ಮ ವರನನ್ನು ನೋಡಿದೆಯಲ್ಲ. ನಿಮ್ಮೊಳಗೆ ಏನಾದ್ರೂ ಮಾತನಾಡ ಬೇಕೆಂದಿದ್ದರೆ..." ಎನ್ನುತ್ತ ಕನ್ಯೆಯ ಮಾತಾಪಿತೃರೆಡೆಗೆ ನೋಡಿದೆ. ಕನ್ಯೆಯ ಅಪ್ಪ 'ಹ್ಹಿ ಹ್ಹೀ' ಎನ್ನುತ್ತ "ಅದೂ ಒಳ್ಳೇದೇ, ತಮಗೂ ಏನಾದ್ರೂ ಕೇಳಬೇಕೆಂದಿದ್ರೇ ಧಾರಾಳವಾಗಿ..." ಎಂದು ಮತ್ತೊಮ್ಮೆ 'ಹ್ಹಿ ಹ್ಹೀ' ಎಂದರು.

ಈಗ ನಮ್ಮೆಜಮಾನರು "ಏನೋ, ನಿನಗೇನಾದರೂ ಮಾತನಾಡಲುಂಟೇ?" ಎಂದು ಸೋದರಳಿಯನನ್ನು ಮುಂತಳ್ಳಲು ನೋಡಿದರು.

ಅವನೋ ಈ ಮೊದಲ ಸವಿ ಸಮಯವನ್ನು ಬಿಡುತ್ತಾನೆಯೇ! ತನ್ನೆದುರು ಕುಳಿತ ಕನ್ಯೆಯನ್ನೇ ನೋಡುತ್ತ, "ತಮ್ಮ ಹೆಸರು ವಿದ್ಯಾರ್ಹತೆ ಎಲ್ಲ ಚೆನ್ನಾಗೇ ಇದೆ, ನನ್ನ ವಿಷಯವಾಗಿ ನನ್ನೊಂದು ಚಿಕ್ಕ ಇಷ್ಟಾನಿಷ್ಟವನ್ನು ನಿಮಗೆ ತಿಳಿಯಬಯಸುತ್ತೇನೆ. ಅದೇನೆಂದರೆ ನಾನು ಹಳೆಯ ಕಾಲದ ಸಂಸಾರದ ಗಾಡಿಯನ್ನು ಎಳೆಯುವವನಲ್ಲ! ತಾವು ಚಿನ್ನಾಭರಣಗಳನ್ನು ಹಾಕಿಕೊಂಡು ಬರದಿದ್ದರೂ ಪರವಾಗಿಲ್ಲ, ಬರೇ ಮಲ್ಲಿಗೆ ಮಾಲೆ ಹಿಡಿದು ಬಂದರೂ ಆದೀತು. ಆದರೆ ಪ್ರತೀ ವೀಕೆಂಡಿಗೂ ಲಾಂಗ್ ರೈಡ್‌ಗೆ ತಪ್ಪದೇ ಹೋಗಬೇಕು, ಆಗಬಹುದಲ್ಲ?'' ಎಂದು ಹೆಮ್ಮೆಯಿಂದ ಸುತ್ತ ನೋಡಿದ ನಮ್ಮ ಅಲ್ಟ್ರಾ ಮಾಡರ್ನ್ ಹುಡುಗ ! ಭಾವೀ ಕನ್ಯೆಯೋ ಅವನ ಮಾತನ್ನು ಕೇಳಿ ಖುಷ್ಖುಷ್ ಆಗಿ ಮುಖ ಇಷ್ಟಗಲ ಹಿಗ್ಗಿಸಿಕೊಂಡದ್ದು ನಮ್ಮ ಕಣ್ಣಿಗೆ ಕಾಣಿಸಿತು. ಆದರೆ ಇಲ್ಲಿ ಸೊಟ್ಟ ಮುಖ ಮಾಡಿದ್ದು ಕನ್ಯಾಪಿತೃಗಳೇ!

ಗೇಟಿನ ಬಳಿ ನಮ್ಮನ್ನು ಬೀಳ್ಕೊಡುತ್ತ, "ನೋಡಿ ಇವರೇ, ನಾವು ಮಕ್ಕಳನ್ನು ಬಹಳ ಪ್ರೀತಿಯಿಂದ, ಸಾಕಷ್ಟು ಜಾಗ್ರತೆಯಿಂದ ಬೆಳಸಿರುತ್ತೇವೆ. ಅವರಿಗೊಂದು ಚಿಕ್ಕ ಆಘಾತವಾದರೂ ಸಹಿಸಿಕೊಳ್ಳುವ ಶಕ್ತಿ ನಮಗಿಲ್ಲ! ಆಯ್ತು.. ನಮಸ್ಕಾರ " ಎಂದು ಎರಡೂ ಕೈ ಜೋಡಿಸಿ ಮೇಲೆತ್ತಿಬಿಟ್ಟರು.

ನಮ್ಮೆಜಮಾನರು ದೂಸರಾ ಮಾತಿಗೆ ಅವಕಾಶಕೊಡದೇ ಕಾರು ರಿವರ್ಸ್ ತೆಗೆದುಕೊಂಡುಬಿಟ್ಟರು!!

***

ಮಿಸ್ಟರ್ ಟಿಮ್

– ನಾಗರತ್ನ ಚಂದ್ರಶೇಖರ್

ಮಿಸ್ಟರ್ ಟಿಮ್ ಒಬ್ಬ ರೋಡ್ ರೋಮಿಯೋ. ನೋಡಲು ದಷ್ಟಪುಷ್ಟವಾಗಿ ಇದ್ದ ಇವನೊಬ್ಬ ಅನಾಥ ಇರಬಹುದು. ಏಕೆಂದರೆ ಇವನು ನಾವು ಹೊಸದಾಗಿ ಬಿಡಾರ ಬದಲಾಯಿಸಿದ ನಾಲ್ಕು ಮನೆಗಳಿರುವ ಅಪಾರ್ಟ್ಮೆಂಟಿನ ವಾಚ್ಮೆನ್ ಜೊತೆಗಿದ್ದ. ನಾಲ್ಕು ಮನೆಗಳು ಭರ್ತೀಯಾದ ಮೇಲೆ ವಾಚ್‌ಮೆನ್ ಬೇರೆ ಕಡೆಗೆ ಸ್ಥಳಾಂತರಗೊಂಡಿದ್ದ. ಆದರೆ ಅವನ ಜೊತೆಗಿದ್ದ ಟಿಮ್ ಮಾತ್ರ ಇಲ್ಲೇ ಉಳಿದ. ಒಬ್ಬ ನಿಷ್ಠಾವಂತ ಕಾವಲುಗಾರನಂತೆ ಸಂಬಳವನ್ನೇ ಕೇಳದೆ ಗ್ಯಾರೇಜಿನ ಒಳಗೋ ಹೊರಗೋ ಹಗಲಿರುಳು ಕಾಲ ಕಳೆಯುತೊಡಗಿದ್ದ. ಹೆಸರೇ ಇಲ್ಲದ ಇವನನ್ನು ನಾನು ಟಾಮಿ ಎಂದೆ ಕರೆಯತೊಡಗಿದ್ದೆ. ಪಕ್ಕದ ಮನೆಯವರು ಇವನಿಗೆ ಊಟ ಹಾಕಿ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದರು. ಆಗಾಗ ಆಕಡೆ, ಈಕಡೆ, ಎದುರು ಮನೆಯವರು ಏನಾದರೂ ಊಟ ತಿಂಡಿ ಕೊಡುತ್ತಿದ್ದರು. ಯಾರೋ ಇವನನ್ನು ಪ್ರೀತಿಯಿಂದ ಮೈದಡವದಿದ್ದರೂ ಎಲ್ಲರಿಗೂ ಇವನು ಬೇಕಾದವನಾಗಿದ್ದ.

ದಿನವೂ ಬೆಳಗ್ಗೆ ನಾವು ನಗೆಕೂಟದ ವ್ಯಾಯಾಮ, ವಾಕಿಂಗ್ ಮುಗಿಸಿ ಹಿಂದಿರುಗಿ ಮನೆಗೆ ಬರುವಾಗಲೆಲ್ಲ ಗೇಟಿನಲ್ಲಿ ನಮ್ಮನ್ನು ಎದುರು ನೋಡುತ್ತಾ ಕುಳಿತಿರುತ್ತಿದ್ದ. ಚೀಲದಿಂದ ನಾನು ಅವನಿಗೋಸ್ಕರ ಒಂದೆರಡು ಬಿಸ್ಕೆಟ್ ತೆಗೆದು ಕೊಡುವುದನ್ನು ಅಭ್ಯಾಸ ಮಾಡಿಕೊಂಡುಬಿಟ್ಟಿದ್ದೆ. ಹೀಗೆ ಅವನನ್ನು ಸಮೀಪದಿಂದ ನೋಡುತ್ತಾ ನೋಡುತ್ತಾ ಒಂದು ರೀತಿಯ ಪ್ರೀತಿ, ಮಮತೆ, ಬೆಳೆಯತೊಡಗಿತ್ತು.

ನಮ್ಮ ಟಾಮಿಯನ್ನು ಕೆಲವರು ಟಿಮ್ ಎಂದು ಕರೆಯುತ್ತಿದ್ದರು. ಇವನೊಬ್ಬ ರೌಡಿಯಾಗಿ ದಾರಿಹೋಕರಿಗೆ ಕುಪ್ರಸಿದ್ಧನಾಗಿದ್ದ. ನಮ್ಮ ರಸ್ತೆಯಲ್ಲಿ ಯಾರೇ ವೇಗವಾಗಿ ದ್ವಿಚಕ್ರ ವಾಹನದಲ್ಲಿ ಬಂದರೂ ಅವರ ಮೇಲೆ ಎಗರೆಗರಿ ಬೀಳುತ್ತಿದ್ದ. ಒಂದಿಬ್ಬರಿಗೆ ಕಚ್ಚಿಯೂ ಇದ್ದ. ಅವರಿಂದ ಬೈಗುಳಗಳ ಸುರಿಮಳೆ ಆಗುವಾಗ ನಾವುಗಳು ಯಾರೊಬ್ಬರೂ ಮನೆಯಿಂದ ಹೊರಗೆ ಬರುತ್ತಿರಲಿಲ್ಲ. ಏಕೆಂದರೆ ಇವನ ಕುತ್ತಿಗೆಯಲ್ಲಿ ಬೆಲ್ಟ್ ಇಲ್ಲದಿದ್ದುದರಿಂದ, ಅವನ ಮಾಲೀಕರಾಗಿ ಯಾರೂ ಗುರುತಿಸಿಕೊಳ್ಳಲು ಆ ವೇಳೆ ಇಷ್ಟಪಡುತ್ತಿರಲಿಲ್ಲ. ಆದರೂ ಅವನು ಎಲ್ಲರಿಗೂ ಬೇಕಾದವನಾಗಿದ್ದ. ಹೀಗಿರುವಾಗ ನಾವು ಆರು ತಿಂಗಳು ಮಕ್ಕಳ ಮನೆಗೆ ಅಮೆರಿಕಾಗೆ ಪ್ರಯಾಣ ಹೊರಟೆವು. ಈಗ ಮನೆಗೆ ಬೀಗ ಹಾಕಿದರೂ ಭಯವಿರಲಿಲ್ಲ. ಭೈರವನಂತೆ ನಮ್ಮ ಕಾವಲುಗಾರನಿದ್ದಾನಲ್ಲ! ಗೇಟಿನ ಹತ್ತಿರಕ್ಕೆ ಯಾವ ಅಪರಿಚಿತರನ್ನೂ ಆತ ಬಿಟ್ಟುಕೊಳ್ಳುತ್ತಿರಲಿಲ್ಲ.



ಅಮೆರಿಕದಲ್ಲಿ ನಮ್ಮಿಬ್ಬರ ಮಕ್ಕಳ ಮನೆಯಲ್ಲಿದ್ದ ಎರಡು ಸಾಕು ನಾಯಿಗಳ ಹೆಸರು ಕೋಕೋ ಮತ್ತು ಸ್ಪಾರ್ಕಿ ಎಂದು. ನಾವು ಅಲ್ಲಿಗೆ ಹೋದ ಒಂದೆರಡು ದಿನಗಳಲ್ಲೇ ಅವು ನಮ್ಮೊಡನೆ ಚೆನ್ನಾಗಿ ಹೊಂದಿಕೊಂಡು ಬಿಡುತ್ತಿದ್ದವು. ಬೆಳಗು, ಸಂಜೆ ಸ್ಪಾರ್ಕಿಗೆ ವಾಕಿಂಗ್ ಮಾಡಿಸುವ ಅಜ್ಜಿ, ತಾತ ನಾವೇ. ಈ ನಾಯಿಗಳ ಊಟ, ಉಪಚಾರ, ವೈದ್ಯರ ಚಿಕಿತ್ಸೆ, ಪಾರ್ಲರ್ನಲ್ಲಿ ಟ್ರಿಮ್ಮಿಂಗು, ಹೀಗೆ ಅವುಗಳಿಗೆ ಸಿಗುತ್ತಿದ್ದ ಆದ್ಯತೆ, ಮಾನ್ಯತೆಗಳನ್ನು ಕಂಡು ಹೋದ ಜನ್ಮದಲ್ಲಿ ಅವುಗಳ ಪುಣ್ಯದ ಫಲವೇ ಇರಬೇಕು ಎನಿಸಿತ್ತು. ವಿಪರ್ಯಾಸವೆಂದರೆ ಈ ಮುದ್ದು ನಾಯಿಗಳು ಅರಮನೆಯಂತಹ ಸೆರೆಮನೆಯಲ್ಲಿ ಒಂಟಿಯಾಗಿ ಸಂಗಾತಿಗಳಿಲ್ಲದೆ ಕಾಲ ಕಳೆಯುವುದು ದುರದೃಷ್ಟ ಎನ್ನಲೆ?.

ಅದೇಕೋ ಈ ನಾಯಿಗಳು ಅಮೆರಿಕದಲ್ಲೇ ಹುಟ್ಟಿ ಬೆಳೆದಿದ್ದರೂ, ನಾವುಗಳು ಅಲ್ಲಿಗೆ ಹೋದಾಗ ಭಾರತೀಯ ಅಡುಗೆ ಮಾಡುವಾಗ ಅದರ ಪರಿಮಳಕ್ಕೆ ಅವು ಮನ

ಸೋಲುತ್ತಿದ್ದವು. ನಾವು ಅನ್ನ ತಿನ್ನುವಾಗಲೆಲ್ಲ ಅವು ಕೂಡ ತಮಗೂ ಬೇಕೆನ್ನುವಂತೆ ನಮ್ಮ ಕಾಲಬುಡದಲ್ಲಿ ಕುಳಿತುಬಿಡುತ್ತಿದ್ದವು. ನಾವು ಅಲ್ಲಿಂದ ವಾಪಸ್ ಬೆಂಗಳೂರಿಗೆ ಬರುವಾಗ ಮೊಮ್ಮಕ್ಕಳು ಮಕ್ಕಳ ಜೊತೆ ಅವುಗಳಿಗೂ ಒಂದು ವಿದಾಯ ಹೇಳುವ ನೋವು ಆವರಿಸಿಬಿಡುತ್ತಿತ್ತು.

ನಾವು ವಾಪಸ್ಸು ಬಂದ ಮೇಲೆ ಟಾಮಿಯ ಸುಳಿವೇ ಇಲ್ಲ. ಮೊದಲಿನ ಅವನ ಗರ್ಜನೆ, ದ್ವಿಚಕ್ರ ವಾಹನ ಸವಾರರ ಮೇಲಿನ ಮಿಂಚಿನ ಓಟ ಯಾವುದೂ ಇಲ್ಲದೆ ಶಾಂತವಾಗಿದ್ದ ಪರಿಸರ. ಇದಕ್ಕೆ ಕಾರಣ ತಿಳಿದಾಗ ಟಾಮಿಯ ಬಗ್ಗೆ ತುಂಬಾ ಕನಿಕರ ಉಂಟಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಪಕ್ಕದ ಮನೆಯವರು ಅವನ ಆರೈಕೆ, ಊಟದ ಬಗ್ಗೆ ಹೆಚ್ಚು ಕಾಳಜಿ ವಹಿಸುತ್ತಿದ್ದರು. ಈಗ ಅವರ ಮನೆಯಲ್ಲಿ ತೆಪ್ಪಗೆ ಮಲಗಿದ್ದ ಟಾಮಿಯನ್ನು ಯಾರೋ ಹಿಡಿದುಕೊಂಡು ಹೋಗಿ ಚೆನ್ನಾಗಿ ಬಡಿದು ಅರೆಜೀವ ಮಾಡಿದ್ದರಂತೆ. ಅದನ್ನು ಹುಡುಕಾಡಿ ಕರೆತಂದು ವೈದ್ಯಕೀಯ ಚಿಕಿತ್ಸೆ ಮಾಡಿಸಿದ್ದರು ಅವರು. ನಿಧಾನಕ್ಕೆ ಟಾಮಿ ಮೊದಲಿನಂತಾಗಿದ್ದ. ಹೆಚ್ಚಿನ ಸಮಯ ಈಗ ನಮ್ಮ ಗೇಟಿನ ಒಳಗೊ, ಹೊರಗೂ ಸದ್ದಿಲ್ಲದೆ ಮಲಗಿರುತ್ತಿದ್ದ. ಆದರೆ ನಾಯಿ ಬಾಲ ಡೊಂಕು ಎನ್ನುವಂತೆ ಹಳೆ ಚಾಳಿ ಮಾತ್ರ ಅವನಿಂದ ಹೋಗಿರಲಿಲ್ಲ. ಸ್ಪೀಡ್ ಬ್ರೇಕಿಂಗ್ ಇನ್ಸ್‌ಪೆಕ್ಟರ್‌ನ ಕೆಲಸ ಮಾತ್ರ ದಿನ ಅಚ್ಚುಕಟ್ಟಾಗಿ ಮಾಡುತ್ತಿದ್ದ. ಇದರಿಂದಾಗಿ ಯಾರೂ ನಮ್ಮ ಕಾಂಪೌಂಡಿಗೆ ಸುಲಭವಾಗಿ ಪ್ರವೇಶ ಮಾಡಲು ಹೆದರುತ್ತಿದ್ದರು.

ಬೀದಿ ನಾಯಿಗಳಿಗೆ ಸ್ನಾನ, ಬೆಚ್ಚನೆಯ ಮನೆಯೊಳಗೆ ಹೊದ್ದು ಮಲಗುವ ಕನಸು ಬೀಳದಿರಬಹುದು. ಆದರೆ ನಮ್ಮ ದೇಶದ ಯಾವುದೇ ಬೀದಿನಾಯಿ ಹೊಟ್ಟೆಗಿಲ್ಲದೆ ಸತ್ತು ಹೋದ ನಿದರ್ಶನಗಳು ಇಲ್ಲವೆಂದೇ ಹೇಳಬೇಕು. ಥೂ ನಾಯಿ! ನಾಯಿ ಬುದ್ಧಿ



ಎಂದು ಯಾರನ್ನಾದರೂ ಬೈಯಬೇಕೆನಿಸಿದರೆ ಒಮ್ಮೆ ಯೋಚಿಸಿ ನೋಡಿ! ನಾಯಿಗೂ ಒಂದು ಕಾಲ ಬಂದಿದೆ. ಅದೃಷ್ಟವಿದ್ದ ಸಾಕುನಾಯಿಗಳ ಕೊರಳಿಗೆ ಚಿನ್ನದ ಸರವನ್ನು ಹಾಕಿ ಮುದ್ದಾಡುತ್ತಾರೆ ಜನ. ಎಷ್ಟೋ ಸಾರಿ ವಿಮಾನದಲ್ಲಿ ತಮ್ಮ ಸಾಕು ನಾಯಿಗಳಿಗೂ ಟಿಕೆಟ್ ಖರೀದಿಸಿ ಬುಟ್ಟಿಗಳಲ್ಲಿಟ್ಟು ಪಾಶ್ಚತ್ಯ ದೇಶಗಳಲ್ಲಿ ತಮ್ಮೊಡನೆ ಕರೆದೊಯ್ಯುವುದನ್ನು ನೋಡಿರುವೆ.

ನಮ್ಮ ಟಾಮಿ ಕೂಡ ತುಂಬಾ ಬುದ್ಧಿವಂತ ಬೆಳಿಗ್ಗೆ ನಾವು ಬಿಸ್ಕೆಟ್ ಕೊಡುವುದು ತಪ್ಪಿಸಿದರೆ, ನಮ್ಮ ಒಂದನೇ ಮಹಡಿಯ ಮೇಲಕ್ಕೆ ಹತ್ತಿ ಬಂದು, ವರಾಂಡದ ಗ್ರಿಲ್ ಹೊರಗೆ ಕೂತುಬಿಡುತ್ತಾನೆ. ಹೀಗೆ ಮೊನ್ನೆ ಎಳ್ಳ ಅಮಾವಾಸ್ಯೆಯ ರಾತ್ರಿ ಟಾಮಿ ನಮ್ಮ ಮನೆಯ ಮುಂದೆ ಕುಳಿತದ್ದು ನಮ್ಮ ಗಮನಕ್ಕೆ ಬಂತು. ಹೀಗೆ ರಾತ್ರಿ ಅವನು ಎಂದೂ ಬಂದಿದ್ದೆ ಇಲ್ಲ. ಅವತ್ತು ನಾವು ಅವನಿಗೆ ತುಂಬಾ ಹಸಿವಾಗಿರಬಹುದೆಂದು ಬಿಸ್ಕೆಟ್ ಬದಲು ಬ್ರೆಡ್ ಕೊಟ್ಟೆವು. ರಾತ್ರಿ ಮಲಗುವ ಮುಂಚೆ ಯಾವುದೋ ಚಾನೆಲ್‌ನಲ್ಲಿ ರಾಶಿ ಫಲ ನೋಡುವಾಗ ಆ ಅಮಾವಾಸ್ಯೆಯ ರಾತ್ರಿ ನಾಯಿಗೆ ರೊಟ್ಟಿ ಕೊಟ್ಟರೆ ಕಷ್ಟಗಳು ಪರಿಹಾರವಾಗುತ್ತವೆ ಎಂದು ಹೇಳಿದ್ದು ಕೇಳಿ ಆಶ್ಚರ್ಯವಾಯಿತು. ರಾತ್ರಿಯಲ್ಲಿ ನಾಯಿ ಬಂದಿದ್ದು, ನಾವು ಬ್ರೆಡ್ ಕೊಟ್ಟಿದ್ದು ಎಲ್ಲಾ ಕಾಕಾತಾಳಿಯವೇನೋ ಎನಿಸಿತು.

ನಮ್ಮ ಟಾಮಿ ಅರ್ಥಾತ್ ಮಿಸ್ಟರ್ ಟಾಮ್‌ನನ್ನು ನಿಮಗೆ ನೋಡಬೇಕೆನಿಸಿದರೆ ನಮ್ಮ ಮನೆಗೆ ಬನ್ನಿ, ನಾವಿಲ್ಲದಾಗ ಬಂದರೂ ಟಾಮಿಯನ್ನು ನೀವು ಗೇಟಿನ ಹತ್ತಿರವೇ ಭೇಟಿ ಮಾಡಬಹುದು.

***



ಗುರುಪೂರ್ಣಿಮೆ ಆಚರಣೆ

– ರೇಣುಕಾ ದೇಸಾಯಿ

ನಮ್ಮ ಎಲ್ಲಾ ಹಬ್ಬದ ಆಚರಣೆಗಳ ಹಿಂದೆ ವೈಜ್ಞಾನಿಕ, ಸಾಮಾಜಿಕ, ಪೌರಾಣಿಕ ಹಾಗೂ ಐತಿಹಾಸಿಕ ದೃಷ್ಟಿಕೋನಗಳಿವೆ. ಹಾಗೆಯೇ ಇದೇ ತಿಂಗಳ 21ರಂದು (ಜುಲೈ 2024) ಬರುವ ಗುರುಪೂರ್ಣಿಮೆ ಆಚರಣೆಯ ಹಿಂದೆ ಇರುವ ಪೌರಾಣಿಕ ಹಿನ್ನೆಲೆ ಮತ್ತು ಇದರ ಪ್ರಭಾವ ಸಮಾಜದಲ್ಲಿ ಹೇಗೆ ಆಗುತ್ತದೆ ಎನ್ನುವ ಒಂದು ವಿವರಣಾತ್ಮಕ ನೋಟ.

ಆಷಾಢ ಶುದ್ಧ ಪೂರ್ಣಿಮೆಯ ದಿನವೇ ಗುರುಪೂರ್ಣಿಮೆ. ಈ ದಿನಕ್ಕೆ ವ್ಯಾಸಪೂರ್ಣಿಮೆ ಎಂದೂ ಕರೆಯುತ್ತಾರೆ. ಮಹರ್ಷಿ ವ್ಯಾಸರು ಮಹಾಭಾರತ, ಉಪನಿಷತ್ ರಚನಾಕರ್ತರು. ಇವರನ್ನು ಈ ರೀತಿಯಲ್ಲೂ ವರ್ಣಿಸುತ್ತಾರೆ– ನಾಲ್ಕು ಮುಖಗಳಿಲ್ಲದ ಬ್ರಹ್ಮ, ಎರಡೇ ತೋಳುಗಳಿರುವಂತಹ ಮತ್ತೊಬ್ಬ ವಿಷ್ಣು, ಹಣೆಯಲ್ಲಿ ಕಣ್ಣಿಲ್ಲದಂತ ಶಿವ –ಅವರೇ ಭಗವಾನ್ ಬಾದರಾಯಣರು ಅಥವಾ ವ್ಯಾಸರು. ಮಹರ್ಷಿ ವ್ಯಾಸರು ಮಹಾಭಾರತ ಹಾಗೂ ಉಪನಿಷತ್ ರಚನಾಕರ್ತರು. ವೇದದ ರಾಶಿಯನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿ ಬೋಧಿಸಿದವರು. ವ್ಯಾಸ ಎಂದರೆ ವಿಂಗಡಣೆ, ವೇದವನ್ನು ವಿಂಗಡಿಸಿದರು. ಈ ಪರಂಪರೆಯನ್ನು ಮುಂದುವರಿಸಿದ್ದರಿಂದ ಅವರು ವೇದವ್ಯಾಸ ಎಂಬ ಹೆಸರನ್ನು ಪಡೆದರು.

ವೇದವ್ಯಾಸರು ಮಹರ್ಷಿ ಪರಾಶರರ ಮಗ. ಮಹರ್ಷಿ ಪರಾಶರರು ಅಖಂಡ ಭಾರತದಲ್ಲಿ ಸಂಚರಿಸಿ ವಿವಿಧ ಮಹರ್ಷಿಗಳಿಂದ ರಚಿತವಾದ ಎಲ್ಲಾ ಮಂತ್ರಗಳನ್ನು ಸಂಗ್ರಹಿಸಿದರು. ಅವುಗಳನ್ನು ವಿಭಾಗಿಸಿ ಸಂಗ್ರಹಿಸಿಡುವ ಜವಾಬ್ದಾರಿಯನ್ನು ತಮ್ಮ ಮಗ ವ್ಯಾಸರಿಗೆ ವಹಿಸಿದರು. ವ್ಯಾಸ ಮಹರ್ಷಿಗಳು ತಮ್ಮ ನಾಲ್ಕು ಜನ ಶಿಷ್ಯರಿಗೆ ಸೂಕ್ತ ಮಾರ್ಗದರ್ಶನ ನೀಡಿ ಅವರಿಗೆ ಈ ಹೊಣೆಯನ್ನು ವಹಿಸಿದರು. ಆ ನಾಲ್ವರು ಶಿಷ್ಯರು ಆಷಾಢ ಹುಣ್ಣಿಮೆಯ ದಿನದಂದು ಅವರ ಗುರುಗಳಾದ ವ್ಯಾಸರನ್ನು ಪೂಜಿಸಿ, ನಮಸ್ಕರಿಸಿ ಈ ಮಹಾನ್ ಕಾರ್ಯವನ್ನು ಪ್ರಾರಂಭಿಸಿದರು. ಆದ್ದರಿಂದಲೇ ಈ ದಿನವನ್ನು ವ್ಯಾಸಪೂರ್ಣಿಮೆ ಎಂದೂ ಆಚರಿಸಲಾಗುತ್ತದೆ. ಈ ಶುಭದಿನದಂದು ಪರಮಜ್ಞಾನವನ್ನು ನೀಡಿದ ಗುರುಗಳಿಗೆ ವಿಶೇಷ ಪೂಜೆ ಸಲ್ಲಿಸುವುದು ವಾಡಿಕೆಯಾಗಿ ಬಂದಿದೆ. ವ್ಯಾಸಪೂರ್ಣಿಮೆ ಅಥವಾ ಗುರುಪೂರ್ಣಿಮೆಯಂದು ತಮ್ಮ ಮೇಲೆ ಪ್ರಭಾವ ಬೀರಿದ ಗುರುಗಳನ್ನು ಅತ್ಯಂತ ಭಕ್ತಿ, ಶ್ರದ್ಧೆ, ಕೃತಜ್ಞತೆಗಳಿಂದ ವಿಧವಿಧವಾಗಿ ಕವನ, ಲೇಖನ, ಚಿತ್ರಗಳ ಮೂಲಕ ಸ್ಮರಿಸಿ, ನಮಿಸಿ, ಧನ್ಯವಾದಗಳನ್ನು ಅರ್ಪಿಸುತ್ತಾರೆ. ಇದು ನಮ್ಮ ಭವ್ಯ ಪರಂಪರೆ.

ವೇದಗಳನ್ನು ಸಾಮಾನ್ಯರು ಓದಿ ತಿಳಿಯಲು ಸಾಧ್ಯವಾಗುವದಿಲ್ಲ ಎಂದು ಅರಿತ ವೇದವ್ಯಾಸರು ವೇದದ ಸಾರಾಂಶವನ್ನು ಸರಳವಾಗಿ 18 ಪುರಾಣಗಳಲ್ಲಿ ಹಾಗೂ ಉಪನಿಷತ್ತಿನ ಸಾರವನ್ನು ತರ್ಕಬದ್ಧವಾಗಿ ಬ್ರಹ್ಮಸೂತ್ರ ರೂಪದಲ್ಲಿ ರಚಿಸಿದರು. ಅದನ್ನು ವೇದಾಂತ ಸೂತ್ರಗಳು ಎಂದು ಕರೆಯುತ್ತಾರೆ. ಇವರು 1,00,000 ಶ್ಲೋಕಗಳನ್ನು ಹೊಂದಿರುವ ಶ್ರೇಷ್ಠ ಗ್ರಂಥವಾದ ಮಹಾಭಾರತವನ್ನು ರಚಿಸಿದರು. ಇಂದಿಗೂ ಇಂತಹ ಮತ್ತೊಂದು ದೊಡ್ಡ ಗ್ರಂಥ ವಿಶ್ವದಲ್ಲಿ ರಚಿತವಾಗಿಲ್ಲ. ಅಚ್ಚರಿಯೆನಿಸಿದರೂ ಒಬ್ಬ ವ್ಯಕ್ತಿಯಾಗಿ ಇಂತಹ ಅನೇಕ ಮಹಾನ್ ಕಾರ್ಯಗಳನ್ನು ಮಾಡಿದವರು ವೇದವ್ಯಾಸರು.

ವ್ಯಾಸರ ಪೂರ್ವ ಹೆಸರು ಕೃಷ್ಣ ದ್ವೈಪಾಯನರು, ಇವರ ತಂದೆ ಪರಾಶರ ಮಹರ್ಷಿಗಳು. ಪರಾಶರ ಮಹರ್ಷಿಗಳ ತಂದೆ ಶಕ್ತಿ ಮಹರ್ಷಿಗಳು. ಇವರು ಮಹಾನ್ ತಪೋನಿಧಿ. ಶಕ್ತಿ ಮಹರ್ಷಿಗಳ ತಂದೆ ವಶಿಷ್ಠ ಮಹರ್ಷಿಗಳು. ಇದೊಂದು ಶ್ರೇಷ್ಠ

ಮಹರ್ಷಿಗಳ ನಾಲ್ಕು ತಲೆಮಾರು. ಗುರುಪೂರ್ಣಿಮೆಯಂದು ಮಹರ್ಷಿ ವೇದವ್ಯಾಸರಿಗೆ ಪೂಜೆ ಸಲ್ಲಿಸಿದರೆ ಈ ಮಹಾನ್ ಗುರುಪರಂಪರೆಗೆ ಪೂಜೆ ಸಲ್ಲಿಸಿದಂತೆ ಆಗುತ್ತದೆ.

ನಮೋಸ್ತುತೇ ವ್ಯಾಸ ವಿಶಾಲ ಬುದ್ಧೇ,
ಫುಲ್ಲಾರವಿಂದಾಯ ತಪತ್ರ ನೇತ್ರ
ಯೇನತ್ವಯಾ ಭಾರತ ತೈಲಪೂರ್ಣ,
ಪ್ರಜ್ವಾಲಿತೋ ಜ್ಞಾನಮಯಾಃ ಪ್ರದೀಪಃ – ಎಂದು ವ್ಯಾಸರಿಗೆ ನಮ್ಮ ನಮನ ಸಲ್ಲಿಸೋಣ.

'ಗು' ಎಂದರೆ ಅಜ್ಞಾನ, ಕತ್ತಲು, 'ರು' ಎಂದರೆ ತೊಲಗಿಸು, ನಿವಾರಿಸು. ಹಾಗಿದ್ದರೆ ಗುರು ಎಂದರೆ ಯಾರು? ಪ್ರೇರಣಾದಾಯಕರಾದವರು. ಸೂಚಕರಾಗಿರುವವರು, ಸತ್ಯವನ್ನು ಅರುಹಿದವರು, ಮಾರ್ಗದರ್ಶಕರಾಗಿರುವವರು, ಶಿಕ್ಷಣವನ್ನು ನೀಡುವವರು. ಬೋಧನೆ ಮಾಡುವವರು– ಈ ಆರು ಜನರನ್ನು ಗುರುಗಳು ಎಂದು ಸ್ಮರಿಸಲಾಗುತ್ತದೆ. ಗುರು ಎಂಬ ಪದವು ಸಾಧಕನ ಮನಸ್ಸಿನಲ್ಲಿ ತಂದೆಯಲ್ಲಿನ ರಕ್ಷಣೆ, ತಾಯಿಯಲ್ಲಿನ ಪ್ರೀತಿ, ಚೈತನ್ಯ ಸ್ವರೂಪಿಯಾದ ಭಗವಂತನನ್ನು ನೆನಪಿಗೆ ತಂದುಕೊಡುತ್ತದೆ.

ಬಂಧುಗಳಾದವರು ಮಿಂದು ಉಂಡು ಹೋಹರು/
ಬಂಧನವ ಕಳೆಯಲರಿಯರು/
ಗುರುವಿಂದ ಬಂಧನವಳಿಗು ಸರ್ವಜ್ಞ//

ಎಂದು ಗುರುವಿನ ಮಹಿಮೆಯನ್ನು, ಗುರು ಯಾತಕ್ಕೆ ಬೇಕು ಎನ್ನುವದನ್ನು ಸರ್ವಜ್ಞರು ಬಹು ಅರ್ಥಗರ್ಭಿತವಾಗಿ ತಮ್ಮ ತ್ರಿಪದಿಯಲ್ಲಿ ಹೇಳಿರುವರು. ಗುರುವಿನ ಕೆಲಸ ಕ್ಲಿಷ್ಟಕರವಾದುದು. ಯಾಕೆಂದರೆ ಗುರುವು ಒಬ್ಬ ವ್ಯಕ್ತಿಯನ್ನು ಜಾಗರೂಕನನ್ನಾಗಿ ಮಾಡಲು ಅವನನ್ನು ನಿದ್ರಾವಸ್ಥೆಯಿಂದ ಎಬ್ಬಿಸಬೇಕಾಗುತ್ತದೆ. ಆದರೆ ನಮಗೆ ನಿದ್ರೆ ಅತ್ಯಂತ ಪ್ರಿಯಕರವಾಗಿದೆ. ನಿದ್ರೆಯಲ್ಲಿ ಸುಂದರ ರಮಣೀಯವಾದ ಕನಸು ಕಾಣುತ್ತಿರುತ್ತೇವೆ, ಅದೇನಾದರೂ ಭಂಗವಾದರೆ, ಭಂಗಪಡಿಸಿದವರೆಲ್ಲಾ ನಮಗೆ ಶತ್ರುಗಳಂತೆ ಕಾಣುತ್ತಾರೆ. ಹೀಗಾಗಿ ಗುರುವಿನ ಕೆಲಸ ಕ್ಲಿಷ್ಟಕರ. ಗುರುವಿನ ಆಶೀರ್ವಾದದ ಸಾಕ್ಷತ್ಕಾರ ಉಂಟಾದರೆ ಮನುಷ್ಯನ ಅಜ್ಞಾನ ಹೋಗಿ ಸುಜ್ಞಾನಿ ಆಗುತ್ತಾನೆ. ಹಾಗೇನೇ ಏನನ್ನೇ ಪಡೆದಿದ್ದರೂ, ಸೃಷ್ಠಿಯಲ್ಲಿರುವ ಸಕಲವನ್ನೂ ಪಡೆದಿದ್ದರೂ ಗುರುವಿನ ಚರಣಕ್ಕೆ ತಲೆಬಾಗದವನಾಗಿದ್ದರೆ, ಗುರುವಿನ ಕೃಪೆಗೆ ಪಾತ್ರನಾಗದಿದ್ದರೆ ಅವುಗಳು ಯಾವವೂ ಅವನನ್ನು ಉನ್ನತಿಗೆ ಕರೆದುಕೊಂಡು ಹೋಗಲಾರವು, ಅವನು ಪಡೆದ ವಿದ್ಯೆ ವ್ಯರ್ಥ ಎಂದು ಜಗದ್ಗುರು ಆದಿಶಂಕರಾಚಾರ್ಯರು ತಮ್ಮ ಗುರು ಅಷ್ಟಕದಲ್ಲಿ ಸರಳವಾಗಿ, ಸುಂದರವಾಗಿ, ಸುಲಭದಲ್ಲಿ ಅರ್ಥವಾಗುವಂತೆ ಹೇಳಿದ್ದಾರೆ. ಹೀಗೆ ಗುರುವಿನ ಅನುಗ್ರಹ ಪಡೆದ ಗುರು ಶಿಷ್ಯರ ಸಾವಿರಾರು ಕಥೆಗಳು ನಮ್ಮ ಪುರಾಣ ಪುಣ್ಯಕಥೆಗಳಲ್ಲಿ ಕಾಣಸಿಗುತ್ತವೆ ಮತ್ತು ಅವು ನಿಜವಾದ ಕಥೆಗಳೇ.

ರಾಕ್ಷಸರ ಹಾವಳಿಯಿಂದ ತನ್ನ ಯಜ್ಞವನ್ನು ರಕ್ಷಿಸಲು ರಾಮಲಕ್ಷ್ಮಣರನ್ನು ಕಳಿಸಿಕೊಡಬೇಕೆಂದು ವಿಶ್ವಾಮಿತ್ರ ಮಹರ್ಷಿಗಳು ದಶರಥನನ್ನು ಕೇಳಿದರು. ಹೂ ಅನ್ನಲು ಆಗದೆ, ಉಹೂ ಅನ್ನಲು ಆಗದೆ, ಧೈರ್ಯವಿಲ್ಲದ ದಶರಥ, ರಾಜಗುರು ವಸಿಷ್ಠರನ್ನು ಕೇಳಿ ಅವರು ಆಜ್ಞಾಪಿಸಿದಂತೆ ಮಾಡುವುದಾಗಿ ವಿಶ್ವಾಮಿತ್ರನಿಗೆ ಹೇಳಿದರು. ವಸಿಷ್ಠರು ಹೇಳಿಕೇಳಿ ವಿಶ್ವಾಮಿತ್ರರ ಪ್ರತಿಸ್ಪರ್ಧಿ. ರಾಜಕುಮಾರರನ್ನು ತನ್ನ ಪ್ರತಿಸ್ಪರ್ಧಿಯ ಕೈಯಲ್ಲಿ ಒಪ್ಪಿಸಲಾರರು ಎನ್ನುವ ಧೈರ್ಯ ದಶರಥನಿಗೆ. ಆದರೆ ವಸಿಷ್ಠರು ಕ್ಷಣ ಮಾತ್ರವೂ ತಡಮಾಡದೆ ರಾಜನಿಗೆ ಹೇಳಿದರು– "ನಿಶ್ಚಿಂತೆಯಾಗಿ ರಾಮಲಕ್ಷ್ಮಣರನ್ನು ಕಳುಹಿಸು. ಅದರಿಂದ ಅವರಿಗೆ ಸರ್ವ ರೀತಿಯಿಂದಲೂ ಕಲ್ಯಾಣವೇ ಆಗುತ್ತದೆ". ರಾಜಗುರುವಿನ ಮಾತಿಗೆ ಪ್ರತಿ ಇಲ್ಲ, ಗುರು ವಾಕ್ಯವನ್ನು ಚಕ್ರವರ್ತಿಯೂ ಪಾಲಿಸಬೇಕು. ದಶರಥ ತನ್ನ ಆ ಎಳೆಯ ರಾಜಕುಮಾರರನ್ನು ಆ ಭಯಂಕರ ಪ್ರಸಂಗಕ್ಕೆ ಎದೆಕೊಡಲು ಕಳುಹಿಸಿಕೊಟ್ಟರು.

ಅದೇ ರೀತಿ ಗುರು–ಶಿಷ್ಯರ ಭಾಂದವ್ಯದ ಇನ್ನೊಂದು ಘಟನೆಯನ್ನು ನಾವು ಅವಲೋಕಿಸೋಣ. ಸಾಂದೀಪನಿ ಆಶ್ರಮದಲ್ಲಿ ಶ್ರೀ ಕೃಷ್ಣನ ಶಿಷ್ಯತ್ವದ ಕಥೆಯಂತೂ ಅದೆಷ್ಟು ರಮ್ಯ ಮನೋಹರ! ಉಳಿದೆಲ್ಲ ವಟುಗಳಂತೆ ಕೃಷ್ಣನು ಕಾಡಿಗೆ ಹೋಗಿ ಸಮಿತ್ತುಗಳನ್ನು ಆರಿಸಿ ತರುವನು, ಆಕಳುಗಳನ್ನು ಕಾಡಿಗೆ ಅಟ್ಟಿಕೊಂಡು ಹೋಗಿ ಮೇಯಿಸಿಕೊಂಡು ಬರುವನು. ಗುರುವನ್ನು, ಗುರುಪತ್ನಿಯನ್ನು

ತನ್ನ ಸ್ವಂತ ತಂದೆತಾಯಿಗಳಂತೆ ಸೇವೆಗೈವನು. ತನ್ನ ಪುಂಡಾಟಗಳಿಗೆ ಅವರು ಕೊಡುವ ಶಿಕ್ಷೆಯನ್ನು ವಿನಯದಿಂದ ಸ್ವೀಕರಿಸುವನು. ಹಾಗೆ ನೋಡಿದರೆ ಅವನಾಗಲೇ ಭಯಂಕರ ರಾಕ್ಷಸರನ್ನು ಸಂಹರಿಸಿ ವಿಷ್ಣುವಿನ ಅವತಾರ ಎಂದು ಪ್ರಸಿದ್ಧಿ ಪಡೆದಿದ್ದ ಹುಡುಗ. ಆದರೆ ಅಂಥವನೂ ಈ ರೀತಿ ಆಶ್ರಮದಲ್ಲಿ ಗುರುಭಕ್ತಿಯ ಪಾಠ ಕಲಿತು ಗುರುಹಿರಿಯರೆದುರಲ್ಲಿ ವಿನಯದಿಂದ ಶ್ರದ್ಧೆಯಿಂದ ನಡೆಯುವ ಸಂಸ್ಕಾರ ಪಡೆದ. ಅಲ್ಲದೆ ಈ ಸಂಸ್ಕಾರ ಮನುಕುಲದ ಒಳಿತಿಗೆ ಎನ್ನುವ ಸಂದೇಶವನ್ನು ಜಗತ್ತಿಗೆ ನೀಡಿದ. ನಂತರ ಗೀತೆಯನ್ನು ಬೋಧನೆ ಮಾಡಿ ಜಗದ್ಗುರು ಎನಿಸಿಕೊಂಡ.

ಇವೆಲ್ಲ ದೃಷ್ಟಾಂತಗಳಿಂದ ನಮಗೆ ಗುರುಗಳ ಮಹಿಮೆ, ಶಿಷ್ಯರ ಹಿರಿಮೆ ಪರಿಚಿತವಾಗುತ್ತದೆ. ಸಾಮಾಜಿಕ ಜೀವನದ ಉನ್ನತ ಪಾಠ ಕಲಿಸುತ್ತದೆ. ನಮ್ಮಲ್ಲಿ ಒಂದು ದೊಡ್ಡ ಗುರು–ಶಿಷ್ಯ ಪರಂಪರೆ ಇದೆ. ಏನಕೇನ ಕಾರಣದಿಂದ ಜನಜನಿತವಾದ ಗುರು ಶಿಷ್ಯರನ್ನು ನೋಡುವದಾದರೆ, ದೌಮ್ಯ ಮಹರ್ಷಿ–ಉಪಮನ್ಯು, ರಾಮಕೃಷ್ಣರು–ಸ್ವಾಮಿ ವಿವೇಕಾನಂದರು, ದ್ರೋಣಾಚಾರ್ಯ–ಏಕಲವ್ಯ, ಪರಶುರಾಮ–ಕರ್ಣ, ದೌಮ್ಯ ಮಹರ್ಷಿಗಳು–ಅರುಣಿಪಾಂಚಾಲ, ವಿದ್ಯಾರಣ್ಯರು–ಹಕ್ಕಬುಕ್ಕರು ಹೀಗೆ ಸಾಲು ಸಾಲು ಗುರುಶಿಷ್ಯರನ್ನು ಹೆಸರಿಸಬಹುದು.

'ವರ್ಣಮಾತ್ರಂ ಕಲಿಸಿದಾತಂ ಗುರು' ಎನ್ನುವಂತೆ ನಾವು ಯಾರುಯಾರಿಂದ ಏನೇನನ್ನು ಕಲಿಯುತ್ತೇವೆಯೋ ಅವರೆಲ್ಲರೂ ನಮಗೆ ಗುರು ಸಮಾನರು. ಹುಟ್ಟಿನಿಂದ ಬದುಕು ಇರುವ ತನಕ ಕಲಿಕೆಯ ಪಯಣ. ಆದರೆ ನಮ್ಮ ಮೊದಲ ಗುರು ತಾಯಿ. “ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರುವು, ಜನನಿಯಿಂದ ಪಾಠ ಕಲಿತ ಜನರು ಧನ್ಯರು” ಎನ್ನುವ ಪದ್ಯವನ್ನು ಅರಿಯದ ಕನ್ನಡ ಮನಗಳೇಇಲ್ಲ.

ಈ ಗುರುಪೂರ್ಣಿಮಾ ಆಚರಣೆಯ ದಿನ ಎಲ್ಲಾ ಗುರುಪರಂಪರೆಗೆ ವಂದಿಸಿ, ಜಗದ್ಗುರು ಶಂಕರರನ್ನು ನೆನೆಯುತ್ತಾ ಅಪರಂಪರವಾದ ಗುರು–ಶಿಷ್ಯ ಸಂಬಂಧದ ಮಹಿಮೆ ಅರಿಯೋಣ. ಜಗದ್ಗುರುವಿಗೆ ನಮಿಸೋಣ.

ಶ್ರುತಿ ಸ್ಮೃತಿ ಪುರಾಣಾನಾಂ
ಆಲಯಂ ಕರುಣಾಲಯಂ
ನಮಾಮಿ ಭಗವತ್ಪಾದಂ
ಶಂಕರಂ ಲೋಕ ಶಂಕರಂ

***

ಪುಸ್ತಕ ಪರಿಚಯ

ಪ್ರೊ॥ ಕ. ರಾ. ಮೋಹನ್ ಅವರ

"ಹೆಂಡತಿಯ ವಯಸ್ಸು"

– ಜಿ. ವಿ. ಅರುಣ

ಇಂದು ನಾನು ನಿಮಗೆ ಒಬ್ಬ ವಿಶಿಷ್ಟ ವ್ಯಕ್ತಿ ಮತ್ತು ಆತ ಬರದಿರುವ, ಈಚೆಗೆ ಪ್ರಕಟವಾದ ಒಂದು ಪುಸ್ತಕದ ಪರಿಚಯವನ್ನು ಮಾಡಿಕೊಡುತ್ತಿದ್ದೇನೆ.

ನನ್ನ ಆಪ್ತಮಿತ್ರರಾದ ಪ್ರೊ।। ಕ. ರಾ. ಮೋಹನ್ ಅವರು ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾಪಕರಾಗಿದ್ದವರು. ಅವರ ಎಂಜಿನಿಯರಿಂಗ್ ಗ್ರಾಫಿಕ್ಸ್ ಪುಸ್ತಕವು ಎಂಜಿನಿಯರಿಂಗ್ ಡ್ರಾಯಿಂಗ್ ಕಲಿಯುವವರಿಗೆ ಭಗವದ್ಗೀತೆಯಂಥ ಪುಸ್ತಕ. ಮನೆ ಕಟ್ಟಲು ಬೇಕಾಗುವ ನಕ್ಷೆಯಿಂದ ಹಿಡಿದು ರಾಕೆಟ್ ನಿರ್ಮಾಣಕ್ಕೆ ಬೇಕಾಗುವ ಲಕ್ಷಾಂತರ ಬಿಡಿಭಾಗಗಳ ತಯಾರಿಕೆಗೆ ಬೇಕಾಗುವ ನಕ್ಷೆಗಳನ್ನು ಎಳೆಯುವ ಮತ್ತು ನಕ್ಷೆಗಳನ್ನು ಓದಿ ಅರ್ಥಮಾಡಿಕೊಳ್ಳಲು ಬೇಕಾಗುವ ಸಂಪೂರ್ಣ ಜ್ಞಾನಕ್ಕೆ ಓಂನಾಮ ಹಾಕುವುದೇ ಪ್ರೊ।। ಕ.ರಾ.ಮೋಹನ್ ಅವರ ಈ ಪಠ್ಯ ಪುಸ್ತಕದಿಂದ.

ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ ಅಲ್ಲೇ ಅಧ್ಯಾಪಕರಾದ ಅದೃಷ್ಟಶಾಲಿ ಆವರು. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಸ್ನಾತಕೋತ್ತರ ಪದವಿಯನ್ನು ಅವರು ಪಡೆದಿದ್ದಾರೆ. ಆ ಕಾಲೇಜಿನಲ್ಲಿ ಬಹಳ ಒಳ್ಳೆಯ ಹೆಸರು ಪಡೆದು ನಿವೃತ್ತಿಯ ಅನಂತರವೂ ಇತರ ಹಲವು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧನೆ ಮಾಡಿದ, ಬಹು ಬೇಡಿಕೆಯಿದ್ದ ಅಧ್ಯಾಪಕರು ಅವರು.

ಇದು ಅವರ ವೃತ್ತಿಯಾದರೆ ಪ್ರವೃತ್ತಿಯಲ್ಲಿ ಮೊದಲು ಅವರು 'ಕನ್ನಡ ಪ್ರೇಮಿ'. "ಪ್ರಿಯತಮೆಯ ಶೋಧನೆಯಲ್ಲಿ" ಎಂಬ ಹಾಸ್ಯ ಬರಹಗಳ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು 1973ರಲ್ಲಿ, ಅಂದರೆ ಐವತ್ತು ವರ್ಷಗಳ ಹಿಂದೆ, ಅವರು ಪಡೆದರು. ಇದುವರೆಗೂ ಎಂಜಿನಿಯರಿಂಗ್ ಸಾಹಿತ್ಯದ ಅಡಿಯಲ್ಲಿ ಥರ್ಮೋಡೈನಾಮಿಕ್ಸ್ ಬಗ್ಗೆ 'ತಾಂತ್ರಿಕ ಉಷ್ಣ ಚಲನ ಶಾಸ್ತ್ರ'ವು ಒಳಗೊಂಡಂತೆ ಕನ್ನಡದಲ್ಲಿ ಎಂಟು ಪುಸ್ತಕಗಳನ್ನು, ಐದು ಅನುವಾದಿತ ಪುಸ್ತಕಗಳನ್ನು, ಮೂರು ಹಾಸ್ಯ ಸಾಹಿತ್ಯದ ಪುಸ್ತಕಗಳನ್ನು, ಹತ್ತು ಮಕ್ಕಳ ಸಾಹಿತ್ಯದ ಪುಸ್ತಕಗಳನ್ನು, ಎರಡು ನಾಟಕಗಳನ್ನು ಬರೆದಿದ್ದಾರೆ.

ಇವುಗಳಿಗೆ ಕಿರೀಟವಿಟ್ಟಂತೆ ತಮ್ಮ ವಿಜ್ಞಾನ ತಂತ್ರಜ್ಞಾನಗಳ ಗಾಢ ಅಧ್ಯಯನದ ಹಿನ್ನೆಲೆಯಲ್ಲಿ ನಮ್ಮ ವೇದಗಳನ್ನು ಅಧ್ಯಯನ ಮಾಡಿ, 'ಸೃಷ್ಟಿಯ ಕಥೆ' ಎಂಬ ನಾಲ್ಕು ಬೃಹತ್ ಸಂಪುಟಗಳ ಗ್ರಂಥವನ್ನು ಕನ್ನಡದಲ್ಲಿ ರಚಿಸಿದ್ದಾರೆ. "ಜಗತ್ತಿನ ಅನಾವರಣ", "ಚಿಂತನ ಮಂಥನ", "ವೇದ ಪರಿಚಯ" ಮತ್ತು "ಸೃಷ್ಟಿಯ ಮಂತ್ರಗಳು" ಎಂಬ ಈ ನಾಲ್ಕು ಸಂಪುಟಗಳ ಒಟ್ಟು ಗಾತ್ರ ಸುಮಾರು ಎರಡೂವರೆ ಸಾವಿರ ಪುಟಗಳಿಗೂ ಹೆಚ್ಚು.

ಕನ್ನಡದಲ್ಲಿ ಪುಸ್ತಕವನ್ನು ಬರೆದರೆ ಅವರನ್ನು "ಕನ್ನಡ ಪ್ರೇಮಿ" ಎನ್ನಬಹುದೇ? ಎಂಬ ಪ್ರಶ್ನೆಗೆ ನಾನು ಉತ್ತರ ಕೊಡಬೇಕು. 19 ವರ್ಷ ವಯಸ್ಸಿನ ಶ್ರೀ ಮೋಹನ್ ಅವರು ಸಮಾನಮನಸ್ಕರಾಗಿದ್ದ ಹತ್ತು ಹನ್ನೆರಡು ಸ್ನೇಹಿತರನ್ನು ಒಟ್ಟುಗೂಡಿಸಿಕೊಂಡು ಪ್ರೊ।। ಜಿ. ವೆಂಕಟಸುಬ್ಬಯ್ಯ ಅವರ ಅಧ್ಯಕ್ಷತೆಯಲ್ಲಿ "ಕನ್ನಡಿಗರ ಕೂಟ" ಎಂಬ ಸಂಸ್ಥೆಯನ್ನು ಅರವತ್ತು ವರ್ಷಗಳ ಹಿಂದೆ ಕಟ್ಟಿದರು.

ಅಲ್ಲಿ ಮೊದಲು ಒಂದು ವಾಚನಾಲಯವನ್ನು ಅನಂತರ ಕನ್ನಡ ಪುಸ್ತಕಗಳ ಗ್ರಂಥಭಂಡಾರವನ್ನು ತೆಗೆದರು. ಆಗ ಕನ್ನಡದಲ್ಲಿ ಪ್ರಕಟವಾಗುತ್ತಿದ್ದ ಜನಪ್ರಿಯ ಲೇಖಕರ ಎಲ್ಲ ಕಾದಂಬರಿಗಳು, ಸಣ್ಣ ಕಥೆಗಳು ಇತರ ಪುಸ್ತಕಗಳ ಹಲವು ಪ್ರತಿಗಳನ್ನು

ಕೊಂಡು ಗ್ರಂಥಾಲಯದಲ್ಲಿ ಇಡುತ್ತಿದ್ದರು. ಪುಸ್ತಕವನ್ನು ಪಡೆಯಲು ಬಸವನಗುಡಿಯ ಸುತ್ತಮುತ್ತಲ ಅನೇಕ ಗೃಹಿಣಿಯರು ಬರುತ್ತಿದ್ದರು. ಹಲವರು ಓದಿದ ಒಂದು ಕಾದಂಬರಿಯು 'ಚೆನ್ನಾಗಿದೆ' ಎಂಬುದು ಇತರರಿಗೂ ಗೊತ್ತಾದರೆ, ಅವರುಗಳು ತಂಡದಲ್ಲಿ ಬಂದು ಪುಸ್ತಕದ ಪ್ರತಿಯನ್ನು ಕಾದಿರಿಸಿ ಮತ್ತೆ ಬರುತ್ತಿದ್ದರು.

ವಾರಕ್ಕೊಮ್ಮೆ ಗ್ರಂಥಭಂಡಾರದಲ್ಲಿ ಸಂಜೆ ಸಣ್ಣ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ತಿಂಗಳಿಗೊಮ್ಮೆ ನರಸಿಂಹರಾಜ ಕಾಲೋನಿಯ ರಾಮಮಂದಿರದಲ್ಲಿ ಒಂದು ದೊಡ್ಡ ಕಾರ್ಯಕ್ರಮವನ್ನು ಕನ್ನಡಿಗರ ಕೂಟವು ಹಮ್ಮಿಕೊಳ್ಳುತ್ತಿತ್ತು. ತಿಂಗಳ ಕಾರ್ಯಕ್ರಮಕ್ಕೆ ಅನೇಕ ಪ್ರಸಿದ್ಧ ಲೇಖಕರು ಬರುತ್ತಿದ್ದರು.

ಖ್ಯಾತ ಕಾದಂಬರಿಗಾರ್ತಿ ಎಂ.ಕೆ.ಇಂದಿರಾ ಅವರ 'ಸದಾನಂದ' ಕಾದಂಬರಿಯೂ ಪ್ರಕಟವಾದಾಗ ಅದರ 20 ಪ್ರತಿಗಳನ್ನು ಒಮ್ಮೆಲೇ ಮೊದಲು ಕನ್ನಡಿಗರ ಕೂಟದ ಗ್ರಂಥಭಂಡಾರದಲ್ಲಿ ತರಬೇಕಾದ ಪರಿಸ್ಥಿತಿ ಬಂತು. ಕೆಲವೇ ಸಮಯದಲ್ಲಿ ಅದು 40 ಪ್ರತಿಗಳಾದರೂ ಕಾದಂಬರಿಗೆ ಬೇಡಿಕೆ ಕಡಿಮೆಯಾಗಲಿಲ್ಲ. ಆ ಕಾದಂಬರಿಯನ್ನು ಓದಿದ ಅನೇಕ ಮಹಿಳೆಯರು ಎಂ. ಕೆ. ಇಂದಿರಾ ಅವರನ್ನು ನೋಡಲು ಬಯಸಿದರು.

ಪ್ರೊ॥ ಜಿ.ವಿ. ಅವರು ಎಂ.ಕೆ.ಇಂದಿರಾ ಅವರೊಡನೆ ಮಾತನಾಡಿದರು. ಅವರ 'ಸದಾನಂದ' ಕಾದಂಬರಿಯ ಮೇಲೆ ಓದುಗರೊಡನೆ ಒಂದು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಕನ್ನಡಿಗರ ಕೂಟದ ಆ ಕಾರ್ಯಕ್ರಮಕ್ಕೆ ಸಭಾಭವನವೂ ತುಂಬಿ ತುಳುಕುತ್ತಿತ್ತು. ಸಭಾಂಗಣದ ಹೊರಗೂ ಸ್ಪೀಕರ್‌ಗಳನ್ನು ಹಾಕಿಸಿ ಹೊರಗೆ ನಿಂತ ಆಸಕ್ತರಿಗೆ ಕೇಳಲು ಅವಕಾಶ ಮಾಡಿಕೊಡಲಾಯಿತು. ಅಂದಿನ ಪ್ರಶ್ನೋತ್ತರ ಕಾರ್ಯಕ್ರಮವು ಅತ್ಯಂತ ಉನ್ನತ ಮಟ್ಟದ್ದಾಗಿತ್ತು.


ಒಬ್ಬ ಕನ್ನಡ ಕಾದಂಬರಿಗಾರರ ಒಂದು ಕೃತಿಯು ಹೊರಬಂದ ತರುಣದಲ್ಲೇ ಆ ಕೃತಿಯನ್ನು ಕುರಿತು ನಡೆದ ಜನಸಾಮಾನ್ಯರ ಜೊತೆಗಿನ ಸಂವಾದ ಕಾರ್ಯಕ್ರಮವು ಅದೇ ಮೊದಲು; ಬಹುಶಃ ಅದೇ ಕೊನೆ. ಅಂದು ನಡೆದ ಸಂವಾದ ಕಾರ್ಯಕ್ರಮದ ಆರಿಸಿದ ಪ್ರಶ್ನೋತ್ತರಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆ ಕನ್ನಡ ನುಡಿಯಲ್ಲಿ ಪ್ರಕಟಿಸಲಾಯಿತು.

ಪ್ರತಿ ವರ್ಷ ನವೆಂಬರ್ ತಿಂಗಳಿನ ಶನಿವಾರ, ಭಾನುವಾರಗಳಂದು ತಳ್ಳುಗಾಡಿಗಳಲ್ಲಿ ಕನ್ನಡ ಪುಸ್ತಕಗಳನ್ನು ಇಟ್ಟುಕೊಂಡು ಬಸವನಗುಡಿಯ ಬೀದಿ ಬೀದಿಗಳಲ್ಲಿ ಅವುಗಳನ್ನು ಮಾರಾಟ ಮಾಡುತ್ತಿದ್ದರು. ಲೇಖಕರಿಂದ ತಂದ ಪುಸ್ತಕಗಳನ್ನು ಮಾರಿ ಬಂದ ಹಣವನ್ನು ಅವರಿಗೇ ತಲುಪಿಸಿದ್ದರು. ಹೀಗೆ ಲೇಖಕ ಮತ್ತು ಓದುಗರ ಮಧ್ಯೆ ಸೇತುವೆಯಾಗಿ ಕನ್ನಡಿಗರ ಕೂಟವು ಬಹಳ ಒಳ್ಳೆಯ ಕೆಲಸವನ್ನು ಮಾಡಿತ್ತು.

ಇಂದು ನಮ್ಮ "ಸಮನ್ವಯ ಸಮಿತಿ – ಕನ್ನಡವೇ ಸತ್ಯ" ವೇದಿಕೆಯು ಮಾಡುತ್ತಿರುವ ಕಾರ್ಯಗಳನ್ನು ಕಂಡಾಗ ಹಿಂದೆ ಕನ್ನಡಿಗರ ಕೂಟದಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳು ನೆನಪಿಗೆ ಬರುತ್ತವೆ. ಹಾಗೆಯೇ ಅಂದಿನ ಆ ವೇದಿಕೆಯ ಸಂಚಾಲಕರ ಒಗ್ಗಟ್ಟು ಮತ್ತು ಬದ್ಧತೆಗಳು ನೆನಪಾಗುತ್ತವೆ.

ಪ್ರೊ॥ ಜಿ.ವಿ ಅವರ ಮಾರ್ಗದರ್ಶನದಲ್ಲಿ ಈ ಎಲ್ಲಾ ಕಾರ್ಯಕ್ರಮಗಳನ್ನು ನಡೆಸಲು ಮುಂಚೂಣಿಯಲ್ಲಿ ಇದ್ದವರು ಪ್ರೊ।। ಕ.ರಾ. ಮೋಹನ್ ಹಾಗೂ ಅವರ ಕನ್ನಡಿಗರ ಕೂಟದ ತಂಡ. ಶ್ರೀ ಮೋಹನ್ ಅವರು "ಕನ್ನಡ ಪ್ರೇಮಿ" ಎನ್ನಲು ಇಷ್ಟು ಸಾಕಲ್ಲವೇ! ಆ ಸಮಯದಲ್ಲಿ ನಾನು ಕೂಡ ಆ ಕಾರ್ಯಕ್ರಮಗಳ ಭಾಗವಾಗಿದ್ದೆ ಎನ್ನುವುದು ನನಗೆ ಹೆಮ್ಮೆಯ ವಿಷಯ.

ಪ್ರೊ।। ಕ. ರಾ. ಮೋಹನ್ ಅವರು ಇತ್ತೀಚೆಗೆ ಅಂದರೆ ಹದಿನೈದು ದಿನಗಳ ಹಿಂದೆ ಪ್ರಕಟಿಸಿದ "ಹೆಂಡತಿಯ ವಯಸ್ಸು" ಎಂಬ ಹಾಸ್ಯ ಬರಹಗಳ ಬೃಹತ್ ಸಂಕಲನವನ್ನು ನನಗೆ ಕಳುಹಿಸಿದರು. ಅದನ್ನು ನೋಡಿ, ಇದು ಅವರ ಈವರೆಗಿನ ಸಮಗ್ರ



ಹಾಸ್ಯ ಬರಹಗಳ ಸಂಪುಟ ಇರಬೇಕು ಎಂದುಕೊಂಡೆ. ಆದರೆ ಇದು ಸಂಪೂರ್ಣವಾಗಿ ಹೊಸ ಹಾಸ್ಯ ಲೇಖನಗಳ ಸಂಕಲನ. ಇಲ್ಲಿರುವ 50 ಲೇಖನಗಳು ಇದುವರೆಗೆ ಎಲ್ಲೂ ಪ್ರಕಟವಾಗಿಲ್ಲ. ಪುಸ್ತಕದ ಗಾತ್ರ ⅛ ಡೆಮೀ ಆಕಾರದ, 528 ಪುಟಗಳು. ಇಲ್ಲಿರುವ ಲೇಖನಗಳು ನಾಲ್ಕು ಪುಟಗಳಿಂದ ಹಿಡಿದು 22 ಪುಟಗಳ ವ್ಯಾಪ್ತಿಯಲ್ಲಿವೆ. ಜೊತೆಗೆ 66 ಪುಟಗಳ "ಊಟ ಮಾಡುವುದು" ಎಂಬ ಲೇಖನವನ್ನೂ ಉಣಬಡಿಸಿದ್ದಾರೆ.

ಈ ಹಾಸ್ಯ ಸಂಕಲನದಲ್ಲಿರುವ ಲೇಖನಗಳ ವ್ಯಾಪ್ತಿಯ ಬಗ್ಗೆ ಶ್ರೀ ಮೋಹನ್ ಅವರೇ ತಮ್ಮ ಮೊದಲ ಮಾತಿನಲ್ಲಿ ಬಹಳ ಚೆನ್ನಾಗಿ, ಆದರೆ ಸ್ಪಷ್ಟವಾಗಿ ತಿಳಿಸಿದ್ದಾರೆ. 'ಹಾಸ್ಯರಸಾಯನ ಅಂದರೆ ರಕ್ತದ ಸಕ್ಕರೆ ಇನ್ನೂ ಹೆಚ್ಚಾಗುವುದರಿಂದ, ಅದನ್ನು ಹಾಸ್ಯ ಕೋಸಂಬರಿಯೆನ್ನೋಣ' ಎನ್ನುವ ಅವರ ಗೆಳೆಯರ ಮಾತನ್ನು ಅವರು ಸ್ವೀಕರಿಸಿದ್ದಾರೆ. "ಈ ಸಂಕಲನದಲ್ಲಿ ನಗೆಹನಿಯಷ್ಟು ಪುಟ್ಟ ಬರಹ, ಸಾಮಾನ್ಯ ಗಾತ್ರದ ಹಾಸ್ಯ ಬರಹ, ಕೋಸಂಬರಿ ಗಾತ್ರದ ಹಾಸ್ಯ ಬರಹ ಎಲ್ಲವೂ ಸೇರಿವೆ"

ತಮ್ಮ ಮೇಲೆ ತಾವು ಮಾಡಿಕೊಳ್ಳುವ ಹಾಸ್ಯವು ಅತ್ಯುತ್ತಮ ಹಾಸ್ಯ ಎನ್ನುತ್ತಾರೆ, ಕ.ರಾ. ಮೋಹನ್. ಅವರು ತಮ್ಮ ಅನೇಕ ಲೇಖನಗಳಲ್ಲಿ ಹಾಸ್ಯಕ್ಕೆ ತಮ್ಮನ್ನೇ ಈಡಾಗಿಸಿಕೊಂಡಿದ್ದಾರೆ. ಅದರ ಇನ್ನೊಂದು ತುದಿಯಲ್ಲಿ ಇರುವವರು ಅವರ ಹೆಂಡತಿ!

'ವೀಳಯದೆಲೆ' ಎಂಬ ಲೇಖನದಲ್ಲಿ ಇದು ಬಹಳ ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ವಿಚಾರವು ಅಲ್ಲಿ ಇತರ ಪ್ರಸಂಗಗಳೊಂದಿಗೆ ಬಹಳ ಚೆನ್ನಾಗಿ ಬೆರೆತಿದೆ. ಅಲ್ಲಿ ಬರುವ ಒಂದು ಪ್ರಸಂಗವನ್ನು ನೋಡಿ: "ನನ್ನ ಹೆಂಡತಿಗೂ ನಾನು ಅವಳ ಜೊತೆಗೆ ಹೋಗುವುದು ತುಂಬಾ ಇಷ್ಟ. ಬೇರೆ ಇನ್ನಾರು ಅವಳನ್ನು ಅಷ್ಟು ಅಚ್ಚುಕಟ್ಟಾಗಿ ಕಾರಿನಲ್ಲಿ ಕರೆದುಕೊಂಡು ಹೋಗುತ್ತಾರೆ? ಬಾಯಿತುಂಬಾ ನನ್ನನ್ನು ಕೆಲವೊಮ್ಮೆ 'ಕೃಷ್ಣ' ಎಂದು ಕರೆಯುತ್ತಾಳೆ. ಆದರೆ ನಿಜವಾಗಿ ನಾನು ಅವಳಿಗೆ ಸಾರಥಿ ಮಾತ್ರ". ಈ ವಿಚಾರವನ್ನು ಓದಿದ ಕ್ಷಣ ನಮಗೆ ಕೃಷ್ಣನಿಗೂ ಪಾರ್ಥಸಾರಥಿಗೂ ಇರುವ ವ್ಯತ್ಯಾಸ ತಟ್ಟನೆ ನೆನಪಾಗಿ ನಗೆ ಮಿಂಚುತ್ತದೆ.

ಮನೆಗೆ ಬಂದ ಯಾರಿಗೊ ವೀಳಯದೆಲೆಯನ್ನು ತರಲು ಯಾವಯಾವ ಸಮಯದಲ್ಲೋ ಅಂಗಡಿಗೆ ಅಲೆಯುವುದನ್ನು ತಪ್ಪಿಸಿಕೊಳ್ಳಲು ಲೇಖಕರು ಒಂದು ವೀಳಯದೆಲೆಯ ಬಳ್ಳಿಯನ್ನು ಜತನದಿಂದ ಮನೆಯ ಛಾವಣಿಯ ಮೇಲೆ ಬೆಳೆಸುತ್ತಾರೆ. ಬಂದವರಿಗೆ ಅದರಿಂದ ಎಲೆಯನ್ನು ಕಿತ್ತುಕೊಡುವಾಗ ನಡೆಯುವ ಪ್ರಸಂಗದಲ್ಲಿ ಗಂಡ ಹೆಂಡತಿಯರ ನಡುವಿನ ಮಾತುಕತೆ ಹಾಗೂ ಹೆಂಡತಿಯ ಹೇಳಿಕೆಗೆ ಇವರ ಸ್ವಗತಗಳು ಒಳ್ಳೆಯ ಹಾಸ್ಯವನ್ನು ಹರಿಸುತ್ತವೆ.

ಇದೇ ರೀತಿ 'ವಯಸ್ಸಾದ ಮೇಲೆ ಕಾಲ ಕಳೆಯುವುದು ಹೇಗೆ?'; 'ಅನ್ನ ಮಾಡುವುದು ಬ್ರಹ್ಮವಿದ್ಯೆಯೇ?, ಮುಂತಾದ ಲೇಖನಗಳಲ್ಲಿ ಹಾಸ್ಯವು ಹಾಸುಹೊಕ್ಕಾಗಿದೆ.

ಈ ಲೇಖಕರಿಗೂ ನಮ್ಮಲ್ಲಿ ಅನೇಕರಿಗೆ ಇರುವಂತೆ ಮರೆವು ಇದೆ. ಆದ್ದರಿಂದ ಅವರ 'ವೆಡ್ಡಿಂಗ್ ಆನಿವರ್ಸರಿ' ಹೇಗಾಯಿತು ಅಲ್ಲಲ್ಲ, ಆ ದಿನ ಏನಾಯಿತು ಎಂಬುದನ್ನು ಆ ಲೇಖವನವನ್ನು ಓದಿ ಸವಿಯಬೇಕು.

ಇಂಗ್ಲಿಷಿನ ಆಡಮ್ ಮತ್ತು ಈವ್ ಹೆಸರುಗಳು ಹೇಗೆ ಬಂದಿರಬಹುದು ಎಂದು ಅವರ ಲಹರಿಯು ಅದೇ ಹೆಸರಿನ ಪ್ರಬಂಧದಲ್ಲಿ ಸಾಗುತ್ತದೆ. ಅಲ್ಲದೆ ಆ ಹೆಸರುಗಳಿಂದ ಆದ್ಮಿ ಮತ್ತು ಔರತ್ ಹೇಗೆ ಉದ್ಭವವಾದುವು ಎನ್ನುವುದನ್ನು ನಿಪುಣತೆಯಿಂದ ಅಲ್ಲಿ ನೆಯ್ದಿದ್ದಾರೆ.

'ಹೆಂಡತಿಯ ವಯಸ್ಸು"

(ಹಾಸ್ಯ ಬರಹಗಳ ಸಂಕಲನ)

ಲೇಖಕರು: ಕ. ರಾ. ಮೋಹನ್

ಪ್ರಕಾಶಕರು: ಶ್ರೀಮತಿ ಟಿ.ವಿ.ಸರಸ್ವತಿ, ಬೆಂಗಳೂರು

ಮೊಬೈಲ್ ಸಂಖ್ಯೆ 94805 15134

ಪುಟಗಳು: 528; ಬೆಲೆ: ₹ 700

ಅನೇಕ ಕಡೆಗಳಲ್ಲಿ ಅವರು ನಾವು ಸಾಮಾನ್ಯವಾಗಿ ಉಪಯೋಗಿಸುವ ನುಡಿಗಟ್ಟುಗಳಿಗೆ ಸ್ವಲ್ಪ ಬದಲಾವಣೆ ಮಾಡಿ ಅದು ಮತ್ತಷ್ಟು ಹೆಚ್ಚಿನ ಅರ್ಥವನ್ನು ಸ್ಫುರಿಸುವಂತೆ ಮಾಡುತ್ತಾರೆ. ಉದಾಹರಣೆಗೆ ಈ ವಾಕ್ಯವನ್ನು ನೋಡಿ: "ಇದಾಗಿ ಒಂದು ವರ್ಷ ಕಳೆದಿದೆ. ಕಾವೇರಿಯಿಂದ ಬೇಕಾದಷ್ಟು ನೀರು ತಮಿಳುನಾಡಿಗೆ ಹರಿದಿದೆ". ನದಿಯಲ್ಲಿ ನೀರು ಹರಿಯುವುದಕ್ಕೂ ಆ ನೀರು ಕರ್ನಾಟಕದಿಂದ ತಮಿಳುನಾಡಿಗೆ ಹರಿಯುವುದಕ್ಕೂ ಇರುವ ಅಗಾಧ ವ್ಯತ್ಯಾಸವನ್ನು ಒಂದು ವಾಕ್ಯದಲ್ಲಿ ಕಟ್ಟಿಕೊಡುತ್ತಾರೆ.

ಇವು ಹಾಸ್ಯ ಕೋಸಂಬರಿಗಳ ವಿಚಾರವಾದರೆ, ಪುಸ್ತಕದಲ್ಲಿರುವ ಕೆಲವು ನಗೆಹನಿಗಳತ್ತ ಗಮನಹರಿಸೋಣ. ಈಗ ಶ್ರಾದ್ಧ ಮತ್ತು ವೈಕುಂಠ ಸಮಾರಾಧನೆ ಕಾರ್ಯಗಳು ಸಂಸ್ಕಾರಧಾಮಗಳಲ್ಲಿ ನಡೆಸುವುದು ಸಾಮಾನ್ಯವಾಗುತ್ತಿದೆ. ಅಂಥ ಒಂದು ಕಾರ್ಯಕ್ರಮದಲ್ಲಿ ಗೆಳೆಯರಿಬ್ಬರು ಭೇಟಿಯಾದಾಗ ನಡೆದ ಸಂಭಾಷಣೆ :

"ನಿಮ್ಮ ವೈಕುಂಠ ಸಮಾರಾಧನೆ ಕೆಳಗೋ, ಮೇಲೋ?"

"ನಮ್ಮದು ಮೇಲೆ! ನಿಮ್ಮದು?"

"ನಮ್ಮದೂ ಮೇಲೇ"

"ಹೋ, ಹಾಗಾದರೆ ಇಬ್ಬರ ವೈಕುಂಠ ಸಮಾರಾಧನೆಗಳು ಮೇಲೇ; ಬನ್ನಿ ಮೇಲೆ ಹೋಗೋಣ!"

ಈ ಸಂಭಾಷಣೆಯನ್ನು ನಡೆಸಿದವರಿಗೆ ಹೊಳೆಯದ ವಿಚಾರ ಕೇಳುವವರಿಗೆ ಹೊಳೆದಿರುತ್ತದೆ!

ಇನ್ನೊಂದು ನಗೆಹನಿ. ಇವರಿಗೆ ಹುಟ್ಟಿದ್ದ ಹೆಣ್ಣು ಮಗುವಿಗೆ ಏನು ಹೆಸರಿಡುವುದು ಎಂದು ಹಿರಿಯರೊಬ್ಬರನ್ನು ಕೇಳಿದರು. ಅವರು "ಅದಕ್ಕೆ ಯಾಕೆ ಯೋಚನೆ ಮಾಡ್ತೀರಿ? ನನ್ನ ಹೆಸರು ಸುರೇಶ, ನನ್ನ ಹೆಂಡತಿಯ ಹೆಸರು ಮಾಲತಿ. ಮಗುವಿಗೆ 'ಸು ಮಾ' ಎಂದು ಹೆಸರಿಟ್ಟೆವು" ಎಂದರು. ಇವರು "ಅಂಕಲ್, ನಾವು ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ನನ್ನ ಹೆಸರು ಮೋಹನ್, ನನ್ನವಳು ಸರಸ್ವತಿ."

ಶ್ರೀ ಕ. ರಾ. ಮೋಹನ್ ಅವರ ಈ ಹಾಸ್ಯಬರಹಗಳ ಸಂಕಲನದಲ್ಲಿ ಇರುವ ಲೇಖನಗಳ ಪರಿವಿಡಿಯನ್ನು ಒಮ್ಮೆ ಗಮನಿಸಿ. ಅವರಿಗೆ ಬರೆಯಲು ಪ್ರೇರಣೆ ಕೊಟ್ಟ ವಿಷಯಗಳು ನಮಗೂ ಆಪ್ತವಾಗಿರುವುದು ಕಂಡುಬರುತ್ತದೆ. ದೆವ್ವದ ಕತೆಗಳು; ದೇವರ ಕೊನೆಯ ತೀರ್ಪು; ದೇವರ ಲೀಲೆಗಳಲ್ಲ ಚೇಷ್ಟೆಗಳು; ದೇವರಿದ್ದಾನೆಯೇ?; ನಾವು ನಿಜವಾಗಿ ದೇವರುಗಳೇ?; ದೇವರು ಗಂಡೋ ಅಥವಾ ಹೆಣ್ಣೋ?; ಗಲಾಟೆ ಮಾಡದೆ ಕೆಲಸವಾಗುವುದಿಲ್ಲ; ಬಟ್ಟೆ ಒಗೆಯುವುದು ಒಂದು ಕಷ್ಟವೇ?; ಊಟ ಮಾಡುವುದು; ಮೊಸರಿನ ಪುನರ್ಜನ್ಮ; ಧೂಮಪಾನ ವ್ರತ; ಪ್ರಶ್ನಿಸಿದರೆ ಉತ್ತರಿಸಬೇಕೋ ಬೇಡವೋ?; ರಸ್ತೆ ಯಾರ ಕೆನ್ನೆಗಳಂತೆ ಇರಬೇಕು?; ಕೆಟ್ಟ ಮಾತಾಡಿ ಹಾಯಾಗಿರಿ...

ಇದು ಕ. ರಾ. ಮೋಹನ್ ಅವರ ಪ್ರಶಸ್ತಿ ಪಡೆದ "ಪ್ರಿಯತಮೆಯ ಶೋಧನೆಯಲ್ಲಿ" ಪುಸ್ತಕದ ಮುಂದಿನ ಭಾಗ ಎನ್ನಲು ಅಡ್ಡಿಯಿಲ್ಲ. ಇದು ಅವರು ಮದುವೆಯಾಗಿ ತಮ್ಮ ಪ್ರಿಯತಮೆಯಿಂದ ಪಳಗಿದ ಅನಂತರ ಬರೆದ ಕೃತಿ. ಹಾಗಾಗಿ ಇದು ಅವರ ಮಹತ್ವದ ಹಾಸ್ಯ ಸಂಕಲನ ಎಂದು ನಿಸ್ಸಂಶಯವಾಗಿ ಹೇಳಬಹುದು.

ನಮಗೆ ದಿನನಿತ್ಯ ಬರುವ ಯೋಚನೆಗಳಿಗೆ ಯಾವ ರೀತಿ ತಿರುವುಗಳನ್ನು ಕೊಟ್ಟು ನಾವು ಆರಾಮವಾಗಿ ಇರುಬಹುದು ಎಂಬುದು ಒಂದು ಕಲೆ. ಅದನ್ನು ಹೇಗೆ ಕಲಿಯಬಹುದು ಎಂಬ ಮಾಹಿತಿ ಈ ಹಾಸ್ಯ ಲೇಖನಗಳ ಕೃತಿಯಲ್ಲಿ ನಮಗೆ ಹೇರಳವಾಗಿ ಸಿಗುತ್ತದೆ.

***

ಗದ್ಯ-ಪದ್ಯ

ಮತ್ತೆ ಕರೆ ಬಂದಿದೆ

– ಮಾಲತಿ ಶ್ರೀನಿವಾಸನ್

ಮತ್ತೆ ಕರೆ ಬಂದಿದೆ ಈ ತಿಂಗಳ ಸಾಹಿತ್ಯ
ದಾಸೋಹದ ಸಂಭ್ರಮಕೆ,
ಕತೆ ಕವನ ಲೇಖನ ಮುಕ್ತಕಗಳ
ರಸದೌತಣದ ಸವಿಗೆ.

ಹೊಸ ರಚನೆ ಹೊಸ ಹುರುಪ ಹೊತ್ತು
ಸೇರಬೇಕಿದೆ ಸಾಹಿತಿಗಳೆಲ್ಲರು,
ಸೀತಾರಾಮರ ಅಧ್ಯಕ್ಷತೆಯ ಸಂಜೆಯ
ಸಂಭ್ರಮಕೆ. ವೇದಿಕೆಯ ಸಾಹಿತ್ಯ ಸೇವೆಗೆ.

ಮನದ ತುಡಿತ
"ಏನ ಬರೆಯಲಿ ಈ ತಿಂಗಳ ದಾಸೋಹಕೆ,
ಕಥೆ ಓದಲೇ? ಕವನ ಗೀತೆ ಹಾಡಲೇ?
ಏಕಪಾತ್ರಾಭಿನಯ ಮಾಡಲೇ?
ಇಲ್ಲ ಬರೀ ಕೇಳುಗಳಾಗಿ
ಸುಮ್ಮನೆ ಆನಂದದಲ್ಲಿ ಕೂಡಲೇ?".

"ಬರೆಸು ತಾಯೇ ಸರಸೋತಮ್ಮ"
ಮನದ ಬೇಡಿಕೆ, ಯೋಚಿಸಿದಷ್ಟು ಮಸ್ತಿಷ್ಕದಲಿ
ಭಾವನೆಗಳ ಸೋರಿಕೆ.

ಏಳು ದಶಕಗಳ ಮೇಲಷ್ಟು ವರ್ಷಗಳ
ಸುಧೀರ್ಘ ಬಾಳಹಾದಿಯ ಅನುಭವದ
ಗಡಿಗೆ, ನೆನಪಿನಲ್ಲಷ್ಟು ಮರೆತದ್ದೆಷ್ಟೋ
ಕಥೆ ಕವನ ಲೇಖನಗಳಲ್ಲಿ ಎಲ್ಲರೊಡನೆ
ಹಂಚಿಕೊಂಡ ಸಂಭ್ರಮ.

ಹಲವರ ಮಾತಿನಂತೆ "ವಯಸ್ಸು ಬರಿ ಸಂಖ್ಯೆ ಅಲ್ಲ",
ಮನದ ಮಾತು ಹಲವಾರು ಬಾರಿ ತನು ಕೇಳದಲ್ಲ".
ಆಶ್ಚರ್ಯವೆಂದರೆ ಎಲ್ಲರ ಪ್ರೀತಿ ಪ್ರೋತ್ಸಾಹದಲ್ಲಿ
ಈ "ಓಲ್ಡ್ ಮಾಡೆಲ್ ಗಾಡಿ" ಮತ್ತಷ್ಟು ಹುರುಪಲ್ಲಿ
ಪ್ರತಿ ತಿಂಗಳ ದಾಸೋಹದಲ್ಲಿ ಓಡುತ್ತಿದೆಯಲ್ಲ.

***

ಋಣ

– ಮಾಲತಿ ಶ್ರೀನಿವಾಸನ್

ಋಣವೆಂದರೇನಯ್ಯ ಕೊಟ್ಟು ಕೊಂಡದ್ದರ
ಪರಸ್ಪರ ವಿನಿಮಯದ ಬರಿ ಲೆಕ್ಕಾಚಾರದ
ವ್ಯವಹಾರವೇ?.
ಇಂದಿನದೋ ಹಿಂದಿನದೋ, ಪ್ರಾರಬ್ಧ, ಸಂಚಿತ, ಆಗಾಮಿ
ಎಂದು ಹೆಸರಿಸುವ ಈ ವ್ಯಾಪಾರ
ಬರಿ ಗೊಂದಲದ ವಿಚಾರವೇ.

ನವ ಮಾಸ ಗರ್ಭದಲಿ ಧರಿಸಿ ಲಾಲಿಸಿ
ಪಾಲಿಸಿ ಹೆತ್ತ ನಂತರ ಕೊನೆ ಉಸಿರ ತನಕ
ತುತ್ತಿಟ್ಟು ಕಾಪಾಡುವ ತಾಯ ಋಣ,
ಮತಿ ತಿದ್ದಿ ಸನ್ಮಾರ್ಗದಲ್ಲಿ ನಡೆಸಿದ ಸದ್ಗುರುವಿನ ಒಲವು
ಮಾರ್ಗದರ್ಶನದ ಋಣ.

ಬಾಳ ಹಾದಿಯಲಿ ಜೊತೆಗೂಡಿ,
ಏಳುಬೀಳುಗಳಲ್ಲಿ ಸಾಂತ್ವನ ನೀಡಿ
ಸಂತೈಸಿದ ಸಂಗಾತಿಯ ಸಂಬಂಧ,
ಇಂದಿನದೋ, ಜನುಮ ಜನುಮದ್ದೋ
ಬಂಧನದ ಈ ಋಣವ ಅರಿತವರಾರು?

ಬಾಲ್ಯದಲಿ ಮುದ ನೀಡಿ ಮುಸ್ಸಂಜೆಯಲಿ
ಊರುಗೋಲಾದ/ ಆಸರೆಯಾಗಬೇಕಾದ
ಮಕ್ಕಳೊಡನಾಟ, ಬಂಧುಬಾಂದವರೊಡನೆ
ವಹಿವಾಟ ಋಣವೇ?.
ಕೊಟ್ಟು ಕೆಟ್ಟೆನೆನ್ನದೆ ದಾನಿಯಾದುದು,
ನೀಡಿದ್ದ ಪ್ರಸಾದ ಬುದ್ಧಿಯಲಿ ಸ್ವೀಕರಿಸಿದ್ದು ಋಣವೇ?

ಜನುಮ ಒಂದೋ ಹಲವೋ
ಅರಿತವರಾರು?
ಬಾಳ ಸಂಭ್ರಮಿಸದೆ, ಹಾದಿಯಲಿ
ಋಣದ ಭಾವದ ಹೊರೆ ಏಕೆ ಮನಕೆ?
ಸಂಬಂಧಗಳಲಿ ಪ್ರೀತಿ ವಿಶ್ವಾಸಗಳ ಸೆಲೆಯಲ್ಲಿ
ಕೊಟ್ಟುಕೊಳ್ಳುವ ವ್ಯಾಪಾರದ ಭಾವವೇಕೆ?.

***

ಸಿನಿವಾಲಿ

– ಶೃತಿ ಕಟ್ಟಿ

ಭಾರತೀಯ ಸಂಸ್ಕೃತಿಯಲ್ಲಿ ಪ್ರತಿಯೊಂದಕ್ಕೂ ಒಂದೊಂದು ಅಭಿಮಾನಿ ದೇವತೆಗಳಿದ್ದಾರೆ. ಉದಾಹರಣೆಗೆ ವಿದ್ಯೆಗೆ ಸರಸ್ವತಿ, ದುಡ್ಡಿಗೆ ಲಕ್ಷ್ಮಿ, ಆರೋಗ್ಯಕ್ಕೆ ಧನ್ವಂತರಿ ಹೀಗೆ ಹಲವಾರು. ಮೊದಲಿನಿಂದಲೂ ಮಾನವನ ಶಕ್ತಿಗಿಂತ ಮೀರಿ ಇರುವ ಸಂದರ್ಭ ಬಂದರೆ ಆ ಶಕ್ತಿಯನ್ನು ಅವನು ದೇವರ ರೂಪದಲ್ಲಿ ಆರಾಧಿಸುತ್ತಾನೆ. ಪ್ರಕೃತಿಯ ಸ್ತ್ರೀಲಿಂಗ ಪರಿಕಲ್ಪನೆಯು ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ಬಹಳ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ಪೃಥಿವಿ, ಧಾರಾತಿಮಾತೆ, ಜಗದ್ಧಾತ್ರಿ ಎಂದು ಕರೆಯಲ್ಪಡುವ ಭೂಮಿ ದೇವತೆಯ ಚಿತ್ರಣವು ಪ್ರಾಚೀನ ಮತ್ತು ಸರ್ವವ್ಯಾಪಿಯಾಗಿದೆ. ನೈಸರ್ಗಿಕ ಪರಿಸರದ ಬಹುತೇಕ ಎಲ್ಲಾ ಭೌಗೋಳಿಕ ಲಕ್ಷಣಗಳನ್ನು ದೇವತೆಗಳಾಗಿ ನಿರೂಪಿಸಲಾಗಿದೆ. ಪರ್ವತಗಳು, ಗುಹೆಗಳು, ಬಂಡೆಗಳು, ಕಾಡುಗಳು, ಮರಗಳು, ಸಸ್ಯಗಳು, ಗುಣಪಡಿಸುವ ಗಿಡಮೂಲಿಕೆಗಳು, ನದಿಗಳು, ತೊರೆಗಳು, ಸರೋವರಗಳು ಪ್ರಕೃತಿಯಲ್ಲಿ ಅಂತರ್ಗತ ವಾಗಿರುವ ಸ್ತ್ರೀಲಿಂಗ ಶಕ್ತಿಯ ಪ್ರಬಲ ಚಿಹ್ನೆಗಳು. ಹಾಗೆಯೇ ಫಲವತ್ತತೆ ಮತ್ತು ಪ್ರಸವ ಕೂಡ.

ಇತ್ತೀಚೆಗೆ ನಾನೊಂದು 'ಕಲ್ಕಿ' ಅನ್ನುವ ಸಿನಿಮಾ ನೋಡಿದೆ. ಅದರಲ್ಲಿ ಸ್ತ್ರೀಯ ಗರ್ಭ ಫಲವತ್ತತೆಗೆ ಕೊಡುವ ಪ್ರಾಶಸ್ತ್ಯ ನೋಡಿ ನಮ್ಮ ಪೂರ್ವಜರು ಇದಕ್ಕೂ ಏನಾದರೂ ಅಭಿಮಾನಿ ದೇವತೆಯನ್ನು ಇಟ್ಟುಕೊಂಡಿರಬಹುದೆ ಎಂದು ಹುಡುಕಿದಾಗ ಸಿಕ್ಕ ಆ ಅಭಿಮಾನಿ ದೇವತೆಯೇ 'ಸಿನಿವಾಲಿ'. ಸಿನಿವಾಲಿ ಎಂಬ ಪದವು ಎರಡು ವಿಭಿನ್ನ ಘಟಕಗಳೊಂದಿಗೆ ರೂಪುಗೊಂಡಿದೆ, ಅಂದರೆ ಸಿನಾ ಮತ್ತು ವಾಲಾ. ಸಿನಾ ಎಂದರೆ ಜೀವಿಗಳನ್ನು ಬಲಗೊಳಿಸುವ ಆಹಾರ ಮತ್ತು ವಾಲ ಎಂದರೆ ಒಂದು ನಿರ್ದಿಷ್ಟ ಅವಧಿ. ಈ ಪದವು ವ್ರ ಧಾತುವಿನಿಂದ ಬಂದಿದೆ, ಅಂದರೆ ಆವರಿಸುವುದು. ಹೀಗಾಗಿ, ಈ ಪದವು 'ನಿರ್ದಿಷ್ಟ ಅವಧಿಯಲ್ಲಿ ಆಹಾರದಿಂದ ಸಮೃದ್ಧವಾಗಿದೆ' ಎಂಬ ಅರ್ಥವನ್ನು ತೋರುತ್ತದೆ.

ಸಿನಿವಾಲಿ ವೈದಿಕ ದೇವತೆಯಾಗಿದ್ದು ಋಗ್ವೇದದಲ್ಲಿ ಉಲ್ಲೇಖಿಸಲಾಗಿದೆ. ಸಿನಿವಾಲಿ ಮಹಾಭಾರತದಲ್ಲಿ ಅಂಗೀರಸನ ಮಗಳು. ವೈದಿಕ ಪಂಥಾಹ್ವಾನದಲ್ಲಿ ಅಂತಹ ನಾಲ್ಕು ದೇವತೆಗಳಿವೆ. ಅಂದರೆ ಚಂದ್ರನೊಂದಿಗೆ ಸಂಪರ್ಕ ಹೊಂದಿರುವ ಸಿನಿವಾಲಿ, ಕುಹೂ, ಅನುಮತಿ ಮತ್ತು ರಾಕಾ. ಈ ನಾಲ್ಕು ಅಭಿಮಾನಿ ದೇವತೆಗಳು ಚಂದ್ರನ ನಾಲ್ಕು ದಿನಗಳನ್ನು ಪ್ರತಿನಿಧಿಸುತ್ತವೆ. ವೈದಿಕ ದರ್ಶನಿಕರ ದೃಷ್ಟಿಯಲ್ಲಿ ಸಿನಿವಾಲಿಯು ಅಮಾವಾಸ್ಯೆಯ ಹಿಂದಿನ ದಿನವನ್ನು ಅಧಿಷ್ಠಾನ ಮಾಡುವ ದೇವತೆಯಾಗಿದ್ದು, 'ಕುಹೂ' ಅಮಾವಾಸ್ಯೆಯ ಅಧಿದೇವತೆ ಎಂದೂ, 'ಅನುಮತಿ' ಹುಣ್ಣಿಮೆಯ ಹಿಂದಿನ ದಿನದ ಅಧಿದೇವತೆಯಾಗಿದ್ದು, 'ರಾಕ' ಹುಣ್ಣಿಮೆಯ ದಿನದ ಪ್ರಧಾನ ದೇವತೆಯಾಗಿದೆ.

ಸಿನಿವಾಲಿಯನ್ನು ದೇವತೆಗಳ ಸಹೋದರಿ ಎಂದು ಕರೆಯಲಾಗುತ್ತದೆ. ಆಕೆಯನ್ನು ವಿಷ್ಣುವಿನ ಪತ್ನಿ ಎಂದೂ ಕರೆಯುತ್ತಾರೆ, ಸಾಯಣಾಚಾರ್ಯರು ಇಂದ್ರ ಎಂದು ವ್ಯಾಖ್ಯಾನಿಸಿದ್ದಾರೆ. ಸ್ತೋತ್ರ ಮಾಡುವವರಿಗೆ ಸಂಪತ್ತನ್ನು ದಯಪಾಲಿಸಲು ತನ್ನ ಪತಿಯಾದ ಇಂದ್ರನನ್ನು ಕಳುಹಿಸಲು ಆಕೆಯನ್ನು ಶ್ಲಾಘಿಸಲಾಗಿದೆ. ಗೋವುಗಳ ಕಲ್ಯಾಣಕ್ಕಾಗಿ ಮತ್ತು ಧಾನ್ಯಗಳ ಸಮೃದ್ಧಿಗಾಗಿ, ಅವಳನ್ನು ಸರಸ್ವತಿ ಮತ್ತು ಉದುಂಬರ ಮಾಣಿಯೊಂದಿಗೆ ಸ್ತುತಿಸಲಾಗುತ್ತದೆ. ದನದೊಂದಿಗಿನ ಅವಳ ಸಂಪರ್ಕವನ್ನು ಮತ್ತೊಮ್ಮೆ ಗಮನಿಸಿದಾಗ ಗೂಳಿಯ ಕರುಳು ಸಿನಿವಾಲಿಗೆ ಸೇರಿದೆ ಎಂದು ಹೇಳಲಾಗುತ್ತದೆ.

ಇನ್ನೊಂದು ಆಖ್ಯಾಯಿಕೆಯಂತೆ ದಕ್ಷ ಪ್ರಜಾಪತಿಯ ಪತ್ನಿ ಪ್ರಸೂತಾದೇವಿಯ ಸಹಾಯಕಿಯೇ ಸಿನಿವಾಲಿ ಎಂದೂ ಪ್ರಕೃತಿಯಲ್ಲಿನ ಮೊತ್ತಮೊದಲ ಪ್ರಸವಕ್ಕೆ ದಾಯಿಯಾದವಳೆಂದು ವರ್ಣಿಸಲಾಗುತ್ತದೆ.

ಈ ಒಂದು ಸ್ತೋತ್ರದಲ್ಲಿ ಸಿನಿವಾಲಿಯನ್ನು ವರ್ಣಿಸಲಾಗಿದೆ.

ಸಹಸ್ರಶಬ್ದೋ ಬಹುವಾಚಿ । ಬಹುಕೇಶಸ್ತುಕಾ ಪೃಥುಜಘನಾ ವಾ ಸಹಸ್ರಸಂಖ್ಯಾಕೈಃ ಸ್ತೋತೃಭಿಃ ಸಂಸ್ತುತಾ ವಾ ।'.

ಇಲ್ಲಿ ಸಿನಿವಾಲಿಯು ಸಾವಿರ ಶಬ್ದಗಳಿಂದ ಹೆಣೆಯಲ್ಪಟ್ಟವಳು, ಘನ ಕೇಶದವಳು. ಆಕೆಯನ್ನು ಪೃಥುಜಘಾನಾ ಅಥವಾ ವಿಶಾಲ ಸೊಂಟದವಳು ಎಂದೂ ಕರೆಯಲಾಗುತ್ತದೆ. ವಿಶೇಷ ರೀತಿಯ ಶಿರಸ್ತ್ರಾಣವನ್ನು ಹೊಂದಿರುವ ಅವಳು ಸಹಸ್ರಸ್ತುಕಾ ಪದದ ಹೆಚ್ಚಿನ ವ್ಯಾಖ್ಯಾನವೆಂದರೆ ಅವಳು ಅನೇಕರಿಂದ ಪ್ರಶಂಸಿಸಲ್ಪಟ್ಟಿದ್ದಾಳೆ. ಈ ವ್ಯಾಖ್ಯಾನ ಸ್ತುಕಾ ಪದದ ವ್ಯುತ್ಪನ್ನವನ್ನು ಆಧರಿಸಿದೆ. 'ಸ್ತ್ಯಯತೇಃ ಸ್ತುಕಶಬ್ದಃ ।' ಸ್ತುಕ್ತ ಎಂಬ ಪದವು ಹುಟ್ಟಿಕೊಂಡಿದೆ. ಸ್ತ್ಯೈ ಎಂಬ ಕ್ರಿಯಾಪದದಿಂದ ಅಕ್ಷರಶಃ 'ಹೊಗಳುವುದು' ಎಂದರ್ಥ. ಆದ್ದರಿಂದ, ಸಿನಿವಾಲಿಯನ್ನು ದೇವತೆಗಳು ಹೊಗಳಿದ್ದಾರೆ.

ಭಾರತೀಯ ಧರ್ಮಗಳಷ್ಟೇ ಅಲ್ಲ, ಬೇರೆ ಬೇರೆ ದೇಶಗಳ ಸಂಪ್ರದಾಯಗಳಲ್ಲೂ ಇದೇ ರೀತಿಯ ದೇವತೆಗಳಿದ್ದದ್ದು ಕಾಣುತ್ತೇವೆ. ವಿವಿಧ ದೇಶಗಳಲ್ಲಿ ಸಿನಿವಾಲಿಯನ್ನು ವಿವಿಧ ರೀತಿಯಲ್ಲಿ ಕರೆಯಲಾಗುತ್ತದೆ .

ಆಫ್ರಿಕಾ – ಆಲಾ
ಈಜಿಪ್ಟ್ – ಅಮೂನ್
ಮಯನ – ಆಕನ
ಇರಾನ್ – ಅನಾಹಿತ
ಜಪಾನ್ – ಕಿಚ್ಚಿಜೊತೇನ
ಗ್ರೀಕ್ – ಅಪಹೇಯ
ಆಸ್ಟ್ರೇಲಿಯಾ – ಅನಜೆಯ

ಭಾರತೀಯ ಸಂಸ್ಕೃತಿಯೇ ಹಾಗೆ, ಯಾವ ವಿಷಯವನ್ನೂ ಬಿಡದೆ ಎಲ್ಲವನ್ನೂ ಆಳವಾಗಿ ಅಧ್ಯಯನ ಮಾಡಿ ಪ್ರತಿಯೊಂದರಲ್ಲೂ ಒಂದು ಉಪಾಯವನ್ನು ನೀಡಿದೆ. ಪ್ರಸವ ವೇದನೆಯ ಸಮಯದಲ್ಲಿ ಸ್ಮರಣಾರ್ಹಳಾದ ಸಿನಿವಾಲಿಯ ಅಲ್ಪ ಪರಿಚಯ ಮಾಡಿಕೊಳ್ಳುತ್ತ, ಪ್ರತಿ ಹೆಣ್ಣಿನ ಜೀವನದಲ್ಲಿ ಅವಳು ತನ್ನ ಕೃಪೆಯನ್ನು ತೋರಲಿ ಎಂದು ಆಶಿಸುತ್ತಾ ಈ ಪುಟ್ಟ ಲೇಖನವನ್ನು ಮುಗಿಸುತ್ತೇನೆ.

***

ಶಾಲೆಗೆ ಕಳಿಸಪ್ಪಾ

– ಕೆ.ಆರ್.ವೆಂಕಟೇಶ್
(ಮನು) (ಮನೋಹಂಸ)

(ಕೂಲಿ ಮಾಡುವ ಬಡ ಕುಟುಂಬವೊಂದರಲ್ಲಿ ಶಾಲೆಗೆ ಹೋಗಲು ಹಂಬಲಿಸುತ್ತಿರುವ ಪುಟ್ಟಮಗ ಹಾಗೂ ಶಾಲೆಗೆ ಕಳಿಸೋಲ್ಲ ಕೂಲಿಗೆ ಬಾ ಎನ್ನುವ ಅಪ್ಪ- ಇವರಿಬ್ಬರ ನಡುವಿನ ಸಂಭಾಷಣೆಯಲ್ಲಿ ಇರುವ ಸಂಘರ್ಷವೊಂದು ಕಡೆಯಲ್ಲಿ ಸುಖಾಂತ್ಯ ಕಾಣುವುದೇ ಈ ಕವನದ ತಿರುಳು. ಇದನ್ನು ಒಂದು ಪ್ರಸಿದ್ಧ ಹಾಡಿನ ರಾಗಕ್ಕೆ ಅಳವಡಿಸಿ ಹಾಡಿ ಪ್ರಸ್ತುತಿಪಡಿಸಲಾಗಿದೆ.)

ಮಗ :
ಜೀತವ ಮಾಡಲ್ಲ ನಾನು ಜೀತವ ಮಾಡಲ್ಲ
ಶಾಲೆಗೆ ಹೋಗಿ ವಿದ್ಯೆಯ ಕಲಿಯುವೆ
ನಾ ಜೀತವ ಮಾಡಲ್ಲ

ಅನಕ್ಷರಸ್ಥ ಜನರ ಬಾಳು
ಜೀವನದುದ್ದಕೂ ಬರೀ ಗೋಳು
ವಿದ್ಯೆಯ ಕಲಿತರೆ ಹಸನು ಬಾಳು
ನನ್ನೀ ಮಾತನು ನೀ ಕೇಳು

ಕೋಪವ ಬಿಟ್ಟು
ಹಟ ಮಾಡದೆ ನೀ
ಶಾಲೆಗೆ ಕಳಿಸಪ್ಪಾ..

ಅಪ್ಪ :
ಊಹೂಂ ಸಾಧ್ಯ ಇಲ್ಲ ..

ಮಗ :
ಬೇಡ ಅನಬೇಡ ಅಪ್ಪಾ
ನನ್ನ ಮಾತನು ಕೇಳಪ್ಪಾ
ವಿದ್ಯೆಯ ಕಲಿತರೆ
ಒಳ್ಳೆಯ ಕೆಲಸ
ನನಗೆ ಸಿಗುವುದಪ್ಪಾ

ಬೇಡ ಅನಬೇಡ ಅಪ್ಪಾ
ನನ್ನ ಮಾತನು ಕೇಳಪ್ಪಾ

ಅಪ್ಪ :
ಓದಲು ಹೋದರೆ ನೀನು
ನನ್ನ ಜೇಬು ಆಗುವುದು ಖಾಲಿ
ಹಣ ಸಿಗುವುದು ಜೀವನ ಸಾಗುವುದು
ನಾವು ಮಾಡಿದರೆ ಕೂಲಿ

ಶಾಲೆಯ ಚಿಂತೆಯ ಬಿಟ್ಟು ನೀನು
ನನ್ನ ಜೊತೆ ಕೆಲಸಕೆ ಬಾ

ಶಾಲೆಗೆ ಕಳಿಸೋಲ್ಲ ನಿನ್ನ ಶಾಲೆಯ ಕಳಿಸೋಲ್ಲ
ಓದುವ ಚಿಂತೆ ಬಡವರಿಗೇಕೆ
ಹಟ ಮಾಡದೆ ನೀ ಬಾ

ಮಗ :
ಬಡವರಾಗಿ ಹುಟ್ಟುವುದು
ಈ ಜಗದಲಿ ನಮಗೆ ಹಣೆಬರಹ
ಶ್ರೀಮಂತರಾಗಲು ಶ್ರಮ ಪಡಬೇಕು
ನಾವು ಎಲ್ಲಾ ತರ ತರಹ

ಜೀವನವೆಲ್ಲಾ ಈ ಗುಡಿಸಲಲಿ
ನಾವು ಇರಬೇಕೇ??

ಹೇಳಪ್ಪಾ ಹೇಳು..

ಅಪ್ಪ:
ಅರಿವಾಯಿತು ಮಗನೇ
ನನಗೆ ಅರಿವಾಯಿತು ಮಗನೇ

ಶಾಲೆಗೆ ಹೋಗಿ ವಿದ್ಯೆಯ ಕಲಿತು
ಸಂಪಾದಿಸು ಮಗನೇ..

ನಾಳೆಯಿಂದಲೇ ನೀನು
ಶಾಲೆಗೆ ಹೋಗು ಮಗನೇ
ಶಾಲೆಗೆ ಹೋಗು ಮಗನೇ

***

ಮಕ್ಕಳು ತುಂಟರಲ್ಲ, ಪ್ರಯೋಗಶೀಲರು

– ಶೀಲಾ ಅರಕಲಗೂಡು

ಸುಮಾರು ಮೂರು ವರ್ಷದ ಕಿಶೋರ ಬಹಳ ತುಂಟ ಎಂದೇ ಹೆಸರಾಗಿದ್ದ. ನಿಂತಲ್ಲಿ ನಿಲ್ಲಲಾರ, ಕುಳಿತಲ್ಲಿ ಸುಮ್ಮನಿರಲಾರ. ಅಸಾಧ್ಯ ಚೇಷ್ಟೆಯ ಹುಡುಗನೆಂದೇ ಎಲ್ಲರಿಗೂ ಅನ್ನಿಸುತ್ತಿತ್ತು. ಬಹುತೇಕ ಎಲ್ಲ ಮಕ್ಕಳ ಬಗ್ಗೆ ತಂದೆ–ತಾಯಿಯರು, ಹಿರಿಯರು ಹೇಳುವುದು ಹೀಗೆಯೇ ಅಲ್ಲವೇ?

ನಿಜಕ್ಕೂ ಮಕ್ಕಳು ತುಂಟರೇ?

ಮಕ್ಕಳಿಗೆ ಕಣ್ಮುಂದೆ ಕಾಣುವ ಲೋಕವೆಲ್ಲಾ ಅತ್ಯದ್ಭುತವೇ. ಎಲ್ಲವೂ ಹೊಸತಾಗಿ, ಕುತೂಹಲಕಾರಿಯಾಗಿ ಕಾಣುವುದು ಸಹಜ. ಹಾಗಾಗಿ ಕಂಡದ್ದೆಲ್ಲವನ್ನು ಹಿಡಿಯುವ, ಮುಟ್ಟುವ, ತಿಳಿಯುವ ತವಕ ಅವರಿಗೆ. ವಸ್ತುಗಳ ಬಗ್ಗೆ ಪೂರ್ವ ಜ್ಞಾನವಿರದ ಮಕ್ಕಳು ಅಪಾಯದ ಅರಿವೂ ಇಲ್ಲದೆ ಮುನ್ನುಗ್ಗುವುದು ತುಂಟತನವಲ್ಲ, ಪ್ರಯೋಗಶೀಲತೆಯಲ್ಲವೇ? ಹಿರಿಯರಾದವರು ಮಕ್ಕಳನ್ನು ಸಾಧ್ಯವಿರುವೆಡೆಯೆಲ್ಲಾ ಪ್ರೋತ್ಸಾಹಿಸಬೇಕು. ಅಪಾಯವಿದ್ದಲ್ಲಿ ತಿಳಿಹೇಳಿ ರಕ್ಷಿಸಬೇಕು.

ಕಿಶೋರನ ಮುಂದೆ ಒಂದಷ್ಟು ಕವಡೆಗಳನ್ನು ಹಾಕಿ ಅವನಮ್ಮ ಆಡಿಸುತ್ತಿದ್ದಳು. ಮಗುವಿಗೆ ಕವಡೆ ಆಕರ್ಷಕವಾಗಿ ಕಂಡು ಬಂದು ಆಕಡೆ ಈಕಡೆ ತಿರುಗಿಸಿ ನೋಡುತ್ತಿದ್ದ. ಅಷ್ಟರಲ್ಲಿ ಅವನಮ್ಮ ಅವನಿಗಾಗಿ ಒಂದು ಲೋಟ ಹಾಲು ತಯಾರಿಸಿ ಅವನ ಮುಂದಿಟ್ಟಳು. ಅದೇನೆನ್ನಿಸಿತೋ ಮಗುವಿಗೆ, ಕೈಯಲ್ಲಿದ್ದ ಕವಡೆಯನ್ನು ಹಾಲಿಗೆ ಹಾಕಿ, "ಅಮ್ಮ, ನಾನು ಕವಡೆಗೆ ಸ್ನಾನ ಮಾಡಿಸಿ ಕ್ಲೀನ್ ಮಾಡ್ತೀನಿ" ಎಂದ. ಹಾಲಿನ ಲೋಟದೊಳಗೆ ಕೈಹಾಕಿ ಕವಡೆಯನ್ನು ಹೊರತೆಗೆದು ತೋರಿಸಿದಾಗ, ಕವಡೆ ಹೊಳೆಯದಿದ್ದರೂ ಅವನ ಕಣ್ಣುಗಳು ಏನೋ ಸಾಧಿಸಿದಂತೆ ಹೊಳೆಯುತ್ತಿದ್ದವು. ಅಮ್ಮ ತನ್ನ ಕಾರ್ಯವನ್ನು ಮೆಚ್ಚುವಳೆಂದು ತಿಳಿದಿರಬೇಕು. ಆದರೆ, ಅವನಮ್ಮನಿಗೆ ಸಿಟ್ಟು ಉಕ್ಕಿ ಬಂದು ಮಗುವಿಗೊಂದು ಏಟು ಕೊಟ್ಟು, "ನಿನಗೆ ಕುಡಿಯೋಕೆ ಅಂತ ಕೊಟ್ಟ ಹಾಲನ್ನೆಲ್ಲ ಹಾಳು ಮಾಡಿದೆಯಲ್ಲೋ" ಎಂದು ಬೈದಳು. ಮಗುವಿಗೆ ಪೆಟ್ಟು ಬಿದ್ದದ್ದು ತಿಳಿಯಿತೇ ಹೊರತು ತನ್ನ ತಪ್ಪೇನು ಎಂದೇ ತಿಳಿಯಲಿಲ್ಲ. ಆರ್ಕಿಮಿಡೀಸನು ನೀರಿನ ತೊಟ್ಟಿಯಲ್ಲಿ ಬಿದ್ದದ್ದು, ಹೊಸ ಆವಿಷ್ಕಾರ ಮಾಡಿ ವಿಜ್ಞಾನಕ್ಕೆ ಕೊಡುಗೆ ನೀಡಿದ್ದನ್ನು ಮೆಚ್ಚುವ ನಾವು, ಪುಟ್ಟ ಮಗು ಮಾಡುವ ಕುತೂಹಲದ ಚಟುವಟಿಕೆಯನ್ನು ಮುರುಟಿಹಾಕುತ್ತೇವೆ. ಹೇಗಿದ್ದರೂ ಹಾಲು ಈಗ ಕುಡಿಯಲು ಯೋಗ್ಯವಲ್ಲವಾದುದರಿಂದ 'ಚೆನ್ನಾಗಿ ತೊಳೆದಿರುವೆ ಪುಟ್ಟ, ಆದರೆ, ನೀರಿನಲ್ಲಿ ತೊಳೆಯಬೇಕು' ಎಂದು ತಿಳಿಹೇಳಿದ್ದರೆ ಮಗುವಿಗೆ ಅರ್ಥವಾಗುತ್ತಿತ್ತು.

ಚಟುವಟಿಕೆಯಲ್ಲಿ ಹೊಂಗನಸು

ಅಂದು ಕಿಶೋರನ ಅಪ್ಪನ ಹುಟ್ಟುಹಬ್ಬ. ಬಂಧುಗಳ ಜೊತೆ ಹೋಟೆಲ್‌ನಲ್ಲಿ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ಅವರು ಎಲ್ಲರಿಗಿಂತ ಮೊದಲು ಹೋಟೆಲಿಗೆ ಹೋಗಿದ್ದರು. ಮೊದಲೇ ಹೇಳಿದ್ದರಿಂದ ನಾಲ್ಕಾರು ಟೇಬಲ್‌ಗಳ ಮೇಲೆ ತಟ್ಟೆ, ಲೋಟ, ಚಮಚೆ ಇತ್ಯಾದಿಗಳನ್ನು ಅಣಿಮಾಡಿದ್ದರು.

ಕಿಶೋರನ ಮುಂದೆ ಹೊಸದೊಂದು ಲೋಕ ತೆರೆದಂತಾಗಿತ್ತು. ಅವನಮ್ಮ ಅವನನ್ನು ಒಂದು ಟೇಬಲ್ ಹಿಂದೆ ಕುರ್ಚಿಯ ಮೇಲೆ ಕೂರಿಸಿ, ಬರುವವರನ್ನು ಸ್ವಾಗತಿಸುವ ಸಡಗರದಲ್ಲಿದ್ದಳು. ಇತ್ತ ಕಿಶೋರನಿಗೆ ಟೇಬಲ್ ಮೇಲೆ ಹಲವಾರು ಸಾಮಾನುಗಳನ್ನು ನೋಡಿ, ಈ ಹಿಂದೆ ನೋಡಿರಬಹುದಾದ ಅಂಗಡಿಯೊಂದು ನೆನಪಿಗೆ ಬಂದಿರಬೇಕು. "I'm a shop keeper. ನಾನು ಎಲ್ಲ ಸಾಮಾನು ಜೋಡಿಸ್ತೀನಿ" ಎಂದು ಹೇಳುತ್ತಾ ಮೇಜಿನ ಮೇಲೆ ಎಲ್ಲರಿಗಾಗಿ ಇಟ್ಟಿದ್ದ ತಟ್ಟೆಗಳನ್ನು ಒಟ್ಟು ಮಾಡಿದ. ಅಷ್ಟರಲ್ಲಿ ಅಲ್ಲಿಗೆ ಬಂದ ಬಂಧುವನ್ನು ಗಿರಾಕಿಯಂತೆ ಭಾವಿಸಿ, "ನಿನಗೆ ಯಾವ ತಟ್ಟೆ ಬೇಕು?" ಎಂದು ಕೇಳತೊಡಗಿದ. ಕಲ್ಪನಾ ಲೋಕದಲ್ಲಿ ಅವನು ನಿಜಕ್ಕೂ ಒಬ್ಬ ವ್ಯಾಪಾರಿಯೇ ಆಗಿಹೋಗಿದ್ದ.

ಮಕ್ಕಳು ತಮ್ಮದೇ ಆದ ಲೋಕದಲ್ಲಿದ್ದು ಕೈಗೆ ಸಿಕ್ಕ ವಸ್ತುಗಳೊಂದಿಗೆ ವ್ಯವಹರಿಸುತ್ತಿರುತ್ತಾರೆ. ಹಾಗಾಗಿ ಅವರ ಮನಸ್ಸು ಮುದುಡದಂತೆ ಬೇರೆಡೆ ಅವರ ಮನಸ್ಸು ಹೊರಳುವಂತೆ ಮಾಡಿ ನಿಧಾನವಾಗಿ ಅರಿವು ಮೂಡಿಸಬೇಕು. ಬೀದಿಯ ಕಲ್ಲುಗಳು, ಕಸಕಡ್ಡಿಗಳು, ಹರಿದುಬಿದ್ದ ಪೇಪರ್ ಚೂರು ಎಲ್ಲವೂ ಅವರಿಗೆ ಕುತೂಹಲ ಹುಟ್ಟಿಸುವ ವಸ್ತುಗಳೇ. ನಾವು ದೊಡ್ಡವರು ಎನಿಸಿಕೊಂಡವರು ವಸ್ತುಗಳನ್ನು ನೋಡುವ ಬಗೆಯೇ ಬೇರೆ, ಮಕ್ಕಳು ನೋಡುವ ಬಗೆಯೇ ಬೇರೆ. ಅವರ ಆಲೋಚನೆಗಳನ್ನರಿತು ಮಾರ್ಗದರ್ಶನ ಮಾಡಲು ತುಂಬಾ ತಾಳ್ಮೆ, ಪ್ರೀತಿ ಇರಬೇಕು. ಹಾಗೆ ತಾಳ್ಮೆ, ಪ್ರೀತಿಯಿಂದ ಬೆಳೆಸಿದ ಮಕ್ಕಳು ಸಾಮಾನ್ಯವಾಗಿ ಸಮಾಧಾನವಾಗಿ ಬೆಳೆಯುತ್ತಾರೆ. ಯಾವುದಕ್ಕೂ ಅವಕಾಶ ಕೊಡದಿದ್ದಾಗ ಬೆಳೆದಂತೆ ಹಟಮಾರಿಗಳಾಗುವ ಸಾಧ್ಯತೆ ಹೆಚ್ಚು.

ಕಥೆಯೆಂಬ ಸುಂದರ ಲೋಕ

ಕಿಶೋರನಿಗೆ ಕಥೆ ಕೇಳುವುದೆಂದರೆ ತುಂಬಾ ಇಷ್ಟ. ಸಾಮಾನ್ಯವಾಗಿ ಮಕ್ಕಳು ಕಥೆ ಕೇಳಲು ಬಯಸುತ್ತಾರೆ. ಅದು ಅವರ ಆಲೋಚನಾ ಶಕ್ತಿಯನ್ನು ಬೆಳೆಸುತ್ತದೆ. ಪ್ರಪಂಚದ ಅರಿವನ್ನು ಹೆಚ್ಚಿಸುತ್ತದೆ. ಕಥೆಗಳ ಮೂಲಕ ಮೌಲ್ಯಗಳ ಬೀಜಗಳನ್ನು ಬಿತ್ತುವುದು ಸುಲಭ.

ತುಂಬಾ ತುಂಟನೆನಿಸಿಕೊಂಡಿದ್ದ ಕಿಶೋರ, ಅವನಜ್ಜಿ ಸಚಿತ್ರ ರಾಮಾಯಣದ ಪುಸ್ತಕ ಕೈಯಲ್ಲಿ ಹಿಡಿದಕೂಡಲೆ ಓಡಿಬಂದು ಅಜ್ಜಿಯ ತೊಡೆಯನ್ನೇರಿ ಚಿತ್ರಗಳನ್ನು ನೋಡುತ್ತಾ ಕಥೆ ಕೇಳಲು ತಯಾರಾಗುತ್ತಿದ್ದ. ಅದೆಷ್ಟು ಬಾರಿ ಕೇಳಿದರೂ ತೃಪ್ತಿಯಾಗದು. ಕಥೆ ಕೇಳುತ್ತಾ ಕೇಳುತ್ತಾ ಬೇಡವೆಂದು ಆಚೆ ತಳ್ಳಿದ್ದ ತಿಂಡಿಯನ್ನು ಸಂಪೂರ್ಣವಾಗಿ ತಿಂದು ಮುಗಿಸಿರುತ್ತಿದ್ದ. ಯಾವ ಮಗುವನ್ನು ತುಂಟನೆನ್ನುತ್ತಿದ್ದರೋ ಅದೇ ಮಗು ಘಂಟೆ ಕಾಲ ತೊಡೆ ಮೇಲೆ ಕುಳಿತು ತಲ್ಲೀನತೆಯಿಂದ ಕಥೆ ಆಲಿಸುವುದನ್ನು ಗಮನಿಸಿದಾಗ, ಅವನೇನಾ ಇವನು? ಎಂದು ಆಶ್ಚರ್ಯವಾಗುವುದು. ತಂದೆಯ ಬೆಲ್ಟ್ ಸೊಂಟಕ್ಕೆ ಕಟ್ಟಿಕೊಂಡು, ಹಿಂಭಾಗದಲ್ಲಿ ಬಾಲದಂತೆ ಬಿಟ್ಟುಕೊಂಡು ಹನುಮಂತನಂತೆ ಭಾವಿಸಿ ಆಡುವುದನ್ನು ನೋಡಲು ಬಲು ಸೊಗಸು.

ಮಕ್ಕಳು ಆಡುತ್ತಾಡುತ್ತಾ ಕಲಿಯುತ್ತಾರೆ, ಜೀವನಾನುಭವ ಪಡೆಯುತ್ತಾರೆ. ಈ ಕಲಿಕೆ, ಅನುಭವಗಳೇ ಅವರ ಮುಂದಿನ ಜೀವನ ರೂಪಿಸುವ ರೂವಾರಿಗಳು. ಮಕ್ಕಳ ಒಳ್ಳೆಯ ಕಲಿಕೆಗೆ, ಸುಂದರ ಅನುಭವಗಳಿಗೆ ನಾವು ಕಾರಣರಾಗೋಣ, ಅವಕಾಶ ಕಲ್ಪಿಸೋಣ.

***

ರೇಜರ್ ಕ್ಲಾಮ್

– ರಾಧಿಕಾ ವಿ. ಗುಜ್ಜರ್


ಚಿತ್ರ: ಗೂಗಲ್ ಕೃಪೆ

ಕಡಲ ತೀರದ ಮರಳಿನಲ್ಲಿ ನಡೆಯುವಾಗ, ಅಂಗಾಲಿಗೆ ಏನಾದರೂ ಚೂಪಾದ ವಸ್ತುವೊಂದು ಕಚಕ್ಕನೆ ಕೊಯ್ದಂತೆ ಗೀರಿದರೆ ಅದು ರೇಜರ್ ಕ್ಲಾಮ್. ರೇಜರ್ ಕ್ಲಾಮ್ ಇದು ಚಿಪ್ಪು ಮೀನುಗಳ ಒಂದು ಜಾತಿಗೆ ಸೇರಿದ ಜೀವಿಯಾಗಿದೆ. ನಾಪಿತರ ದುಕಾನಿನ ರೇಜರ್ ಹ್ಯಾಂಡಲನ್ನು ಹೋಲುವ ಇವು, ಕಡಲಿನ ಉಪ್ಪು ನೀರಿನ BIVALVE – ಎರಡು ಚಿಪ್ಪುಗಳನ್ನು ಹೊಂದಿರುವ ಮತ್ತು ಆ ಚಿಪ್ಪುಗಳ ಕವಚದ ನಡುವಿನ ಮೃದ್ವಂಗಿ ಜೀವಿ. ಚಿಪ್ಪುಗಳ ಬದಿಗಳು ರೇಜರಿನಂತೆ ಒಂದು ಬದಿಗೆ ಹರಿತವಾಗಿರುತ್ತವೆ ಮತ್ತು ಮತ್ತೊಂದು ಬದಿಗೆ ಅಂಟಿಕೊಂಡಿರುತ್ತವೆ. ಸಾಮಾನ್ಯವಾಗಿ ಚಿಪ್ಪು ನೋಡಿರುವ ನಮಗೆಲ್ಲರಿಗೂ ಇದು ತಿಳಿದಿದೆ.

ಉಬ್ಬರ–ಇಳಿತ ಸಂಭವಿಸುವ ಸಮುದ್ರ ತಡಿಯ ವಲಯಗಳಲ್ಲಿ, ಅಂದರೆ ಭೂಮಿಗೆ ಹತ್ತಿರದ ಸಮುದ್ರ ಪ್ರದೇಶದಲ್ಲಿ, ಕೊಲ್ಲಿಗಳಲ್ಲಿ, ಸಮುದ್ರ ಹಾಗೂ ನದಿಯು ಸಂಗಮಿಸುವ ನದೀಮುಖಗಳಲ್ಲಿ ಇವು ಕಂಡುಬರುತ್ತವೆ. ಪೆಸಿಫಿಕ್ ಪ್ರದೇಶದ ರೇಜರ್ ಕ್ಲಾಮುಗಳು ಉತ್ತರ ಅಮೆರಿಕಾದ ಪಶ್ಚಿಮ ಪೆಸಿಫಿಕ್ ತೀರಗಳಲ್ಲಿ, ಅಂದರೆ ಪೂರ್ವ ಅಲಷಿಯನ್ ದ್ವೀಪಗಳು, ಅಲಾಸ್ಕ, ಹಾಗೆಯೇ ಮುಂದೆ ಪಿಸ್ಮೋ ಬೀಚ್, ಕ್ಯಾಲಿಫೋರ್ನಿಯವರೆಗೂ ಕಂಡುಬರುತ್ತವೆ. ಅಟ್ಲಾಂಟಿಕ್ ಪ್ರದೇಶದಲ್ಲಿ ಇವು ಕೆನಡಾದಿಂದ ದಕ್ಷಿಣ ಕರೋಲಿನ ವರೆಗೂ ಕಂಡುಬರುತ್ತವೆ. ಇವು ಈಗ ಯುರೋಪ್ ದೇಶಕ್ಕೂ ಪರಿಚಿತವಾದ ತಳಿಯಾಗಿವೆ. ಭಾರತದಲ್ಲಿ ಕೊಂಕಣ್, ಕೇರಳ, ಬಂಗಾಳ ಹಾಗೂ ಕರ್ನಾಟಕ ಮತ್ತು ತಮಿಳುನಾಡು ತೀರ ಪ್ರದೇಶಗಳಲ್ಲಿ ಕಂಡುಬರುತ್ತವೆ. ಕರ್ನಾಟಕದಲ್ಲಿ ಉದ್ಯಾವರ, ಮುಲ್ಕಿ, ಗುರುಪುರ ಇಲ್ಲಿ ಕಂಡುಬರುತ್ತವೆ. ಇವು ಕಡಲಿನ 30ರಿಂದ 120 ಅಡಿಗಳ ಆಳದವರೆಗೂ ವಾಸಿಸುತ್ತವೆ.

ರೇಜರ್ ಕ್ಲಾಮುಗಳ ಮೈವಾಸನೆ, ಬ್ರಿಟಿಷ್ ಬೀಚ್‌ಗಳ ಗಂಧ ಹೊತ್ತಿದೆ. ಸಹಜ ಸ್ಥಿತಿಯಲ್ಲಿ ಸುಮಾರು ಏಳು ಇಂಚುಗಳು ಬೆಳೆಯುವ, ವಾಷಿಂಗ್ಟನ್ನಿನಲ್ಲಿ ಸಿಗುವ ಕ್ಲಾಮುಗಳು ಐದು ವರ್ಷಗಳು ಬದುಕುತ್ತವೆ ಮತ್ತು ಇದಕ್ಕೆ ವ್ಯತಿರಿಕ್ತವಾಗಿ ಅಲಾಸ್ಕದಲ್ಲಿ ಸಿಗುವ ರೇಜರ್ ಕ್ಲಾಮುಗಳು ಹನ್ನೊಂದು ಇಂಚುಗಳು ಉದ್ದ ಬೆಳೆಯುತ್ತವೆ ಮತ್ತು ಹದಿನೈದು ವರ್ಷಗಳ ಕಾಲ ಬದುಕುತ್ತವೆ. ಅಲ್ಲಿಯ ತಂಪು ವಾತಾವರಣ, ತಣ್ಣನೆಯ ನೀರು ಅವುಗಳ ಬೆಳವಣಿಗೆಯನ್ನು ನಿಧಾನಗೊಳಿಸುವುದೇ ಇದಕ್ಕೆ ಮುಖ್ಯ ಕಾರಣವಾಗಿದೆ. ದೇಹವು ಮಿದುಮಾಂಸದ್ದಾಗಿದ್ದು ಹಿಗ್ಗಿಸುವ ಗುಣ ಹೊಂದಿದೆ. ಈ ಮಿದುಮಾಂಸದ ದೇಹಕ್ಕೆ ಕವಚದಂತೆ, ಚಿಪ್ಪು ಒಂದು ಬದಿಗೆ ದೇಹಕ್ಕೆ ಅಂಟಿಕೊಂಡಿದ್ದರೆ, ಇನ್ನೊಂದು ಬದಿಗೆ ಬಾಯಿ ತೆರೆಯುವ ಮುಚ್ಚಳದಂತೆ ಪ್ರಕೃತಿಯಲ್ಲಿ ಸೃಷ್ಟಿಸಲ್ಪಟ್ಟಿದೆ. ದೇಹಕ್ಕೆ ಬಾಯಿ, ಹೃದಯ, ಮೂತ್ರಕೋಶ, ಕಿವಿರು ಅಥವಾ ಜಲಪುಪ್ಪಸ ಹಾಗೂ ಗುದದ್ವಾರವಿರುತ್ತದೆ. ಇದಕ್ಕೆ ತಲೆ, ಕಣ್ಣು ಯಾವುದೂ ಇಲ್ಲ. ಮೃದು ಇಳಿಗೊಳವೆಯಂತಹ ಎರಡು ಉದ್ದ ಕೊಂಬುಗಳು ಜಲಪುಪ್ಪಸ ಅಥವಾ ಕಿವಿರು ಭಾಗಕ್ಕೆ ಅಂಟಿಕೊಂಡಿರುತ್ತವೆ. ಇದರ ಹೊಟ್ಟೆಪಾಡು ಸಮುದ್ರದ ಸಣ್ಣಪುಟ್ಟ ಸಸ್ಯಗಳು, ಸಣ್ಣ ಸಣ್ಣ ಉರುಳು ಜೀವಿಗಳು ಹಾಗೂ


ಚಿತ್ರ: ಗೂಗಲ್ ಕೃಪೆ

ಹುಳಹುಪ್ಪಟೆಯಂತಹ ಸೂಕ್ಷ್ಮಜೀವಿಗಳ ಮೇಲೆ ಸಾಗುತ್ತದೆ. ದೇಹ ರಚನೆಯಲ್ಲಿ ಗಂಡು ಮತ್ತು ಹೆಣ್ಣಿನ ಎರಡೂ ಗುಣಗಳನ್ನು ಒಂದೇ ದೇಹದಲ್ಲಿ ಹೊಂದಿರುವ ಪ್ರತ್ಯೇಕ ಜಾತಿಯ ಜೀವಿ ಇದಾಗಿರುತ್ತದೆ. ಹಸಿ ಮರಳು ಹಾಗೂ ಸಮುದ್ರದ ನೀರಿನಲ್ಲಿ ಅಂಡಾಣು ಮತ್ತು ವೀರ್ಯಾಣುಗಳನ್ನು ವಿಸರ್ಜಿಸುತ್ತದೆ. ಈ ಉಭಯಲಿಂಗಿ ಜೀವಿಯ ವಿಸರ್ಜಿತ ಅಂಡಾಣು ಹಾಗೂ ವೀರ್ಯಾಣುಗಳ ಫಲೀಕರಣವು ನೀರಿನ ಅಲೆಗಳ ಹೆಚ್ಚು ಉಬ್ಬರವಿರದ ಸಮಯದಲ್ಲಿ ಅಕಸ್ಮಾತ್ ತಾನಾಗೇ ಜರುಗುತ್ತದೆ. ಇದು ಸಹ ಒಂದು ಪ್ರಕೃತಿಯ ವೈಶಿಷ್ಟ್ಯವೇ ಆಗಿದೆ.

ಇದರ ಚಿಪ್ಪುಗಳು ಬೇರೆ ಎಲ್ಲ ಸಮುದ್ರ ಜೀವಿಗಳ ಚಿಪ್ಪಿನಂತೆಯೇ ಉಪಯೋಗಿಸಲ್ಪಡುತ್ತವೆ. ಚಿಪ್ಪಿನೊಳಗಿನ ಇದರ ಮೃದುಮಾಂಸವು ಕಡಿಮೆ ಕ್ಯಾಲರಿ ಮತ್ತು ಹೆಚ್ಚಿನ ಪ್ರೋಟೀನ್ ಹೊಂದಿದ್ದು, ಆಹಾರವಾಗಿ ಬಳಸಲು ಬಹಳ ಉಪಯುಕ್ತ ವಾಗಿದೆ. ಇನ್ನು ಇದರ ಭಕ್ಷ್ಯಗಳ ತಯಾರಿಕೆಯ ಪಟ್ಟಿಯು ಮತ್ತೊಂದು ಲೇಖನವನ್ನೇ ಮಾಡುವಷ್ಟು ಉದ್ದವಿದೆ. ಸದ್ಯಕ್ಕೆ ಅವುಗಳ ಸಾಹಿತ್ಯಕ್ಕೆ ಮಸಾಲೆ ಸಾಮಾನು ಜೋಡಿಸಲು ಹೊರಟೆ. ಮತ್ತೆ ಅರೆಯುತ್ತೇನೆ, ಅಲ್ಲ ಅಲ್ಲ ಬರೆಯುತ್ತೇನೆ ಸ್ವಾಮಿ, ಬರೆಯುತ್ತೇನೆ ಅನ್ನೋಕೆ ಹೋಗಿ ಅದು....

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 227 ನಡೆದ ದಿನಾಂಕ: 14 ಜುಲೈ 2024
ಸಂಚಿಕೆಯ ಬಿಡುಗಡೆ ದಿನಾಂಕ: 10 ಆಗಸ್ಟ್ 2024 – ಶನಿವಾರ

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)

ಮರಳುಗಾಡಿನ ಪುಟ್ಟ ಹಳ್ಳಿ ಪೋಖ್ರಾನ್

– ಜಿ.ವಿ.ನಿರ್ಮಲ

ಪೋಖ್ರಾನ್ ಹೆಸರು ಕೇಳಿದೊಡನೆ ಭಾರತೀಯರ ನೆನಪು ಐವತ್ತು ವರ್ಷಗಳಷ್ಟು ಹಿಂದೆ ಸಾಗುತ್ತದೆ. ಭಾರತದ ಇತಿಹಾಸ ಬಲ್ಲವರಿಗೆ ನೆನಪುಗಳ ಸರಮಾಲೆಯೇ ಎದುರಾಗುವುದರಲ್ಲಿ ಸಂದೇಹವಿಲ್ಲ. ಭಾರತದ ಉತ್ತರ ಪಶ್ಚಿಮದಲ್ಲಿರುವ ರಾಜಾಸ್ಥಾನದ ಮರಳುಗಾಡಿನಲ್ಲಿ ಹುದುಗಿರುವ ಈ ಪುಟ್ಟ ಹಳ್ಳಿ 1974ರಲ್ಲಿ ದಿಢೀರನೆ ಪ್ರಾಮುಖ್ಯತೆ ಪಡೆಯಿತು. ಈ ಹಳ್ಳಿ 1974ರ ಮೇ ತಿಂಗಳ 18ನೇ ದಿನಾಂಕದವರೆಗೆ ಹೆಚ್ಚಿನವರಿಗೆ ಕಾಣದಂತೆ ಗುಪ್ತವಾಗಿ ಅಡಗಿಕೊಂಡೇ ಇತ್ತು. ಅಂದು ಅಲ್ಲಿ ಭಾರತ ಸರ್ಕಾರ ತನ್ನ ವಿನೂತನ ಪ್ರಯೋಗವನ್ನು ಎಷ್ಟು ಎಚ್ಚರಿಕೆಯಿಂದ ಕೈಗೊಂಡಿತ್ತೆಂದರೆ ಆ ಯೋಜನೆಯಲ್ಲಿ ಕೆಲಸ ಮಾಡುತ್ತಿದ್ದ ಹಲವರಿಗೂ ತಾವು ಮಾಡುತ್ತಿದ್ದ ಕೆಲಸಗಳ ಬಗ್ಗೆ ಸ್ಪಷ್ಟ ಅರಿವಿರಲಿಲ್ಲ.

ಯಾವುದೀ ಸ್ಥಳ? ಏನು ಈ ಪೋಖ್ರಾನ್‌ನ ಮಹತ್ವ? ಇದ್ದಕ್ಕಿದಂತೆ ಕೇವಲ ಭಾರತೀಯರದ್ದಲ್ಲದೆ ವಿದೇಶೀಯರ ಗಮನವನ್ನೂ ಸೆಳೆಯುವಂತಹ ಘಟನೆ ಅಂದು ಜರುಗಿದ್ದಾದರೂ ಏನು ಎಂದು ಕುತೂಹಲ ಮೂಡಿತೇ? ಹೌದು; ಅಂದು ಅಲ್ಲಿನ ಭೂಮಿಯ ಅಂತರಾಳದಲ್ಲಿ ಭಾರತದ ಮೊತ್ತಮೊದಲ ಪರಮಾಣು ಸ್ಫೋಟಕ ತಂತ್ರಜ್ಞತೆಯ ಪರೀಕ್ಷೆಯೊಂದನ್ನು ನಡೆಸಲಾಯಿತು. ಅದರಲ್ಲಿ ಯಶಸ್ವಿಯಾಗಿದ್ದು ಭಾರತದ ಇತಿಹಾಸದ ಮತ್ತೊಂದು ಮೈಲಿಗಲ್ಲು. ಅಂದೇ ಭಾರತದ ಮೊತ್ತಮೊದಲ ಅಣುಬಾಂಬು ಜನ್ಮತಳೆಯಿತು. ಸುಮಾರು 12ರಿಂದ 13 ಕಿಲೋಟನ್ ಪ್ರಮಾಣದ ಪರಮಾಣು ಸಾಧನವನ್ನು ಸೇನಾ ಶಿಬಿರ ಶ್ರೇಣಿಯ ಪರಿಧಿಯಲ್ಲಿ ಸ್ಫೋಟಿಸಲಾಯಿತು. ಶಾಂತಿದೂತ ಬುದ್ಧನ ವಿಶೇಷತೆಯನ್ನು ಜಗತ್ತಿಗೆ ಸಾರುವ ಬುದ್ಧ ಪೂರ್ಣಿಮೆಯ ದಿನವೇ ಪರಮಾಣು ಸಾಧನವನ್ನು ಸ್ಫೋಟಿಸಿದ್ದರಿಂದ ಯೋಜನೆಯಲ್ಲಿ ಭಾಗಿಯಾಗಿದ್ದ ಜನರಿಗೆ 'ಸ್ಮೈಲಿಂಗ್ ಬುದ್ಧ' ಎನ್ನುವ ಸಂಕೇತನಾಮದಿಂದಲೇ ಪರಿಚಿತವಾಗಿತ್ತು. ಈ ಪ್ರಯೋಗ ಯಶಸ್ವಿಯಾಗಿದ್ದು ಭಾರತೀಯರಿಗೆ, ವಿಶೇಷವಾಗಿ ಪ್ರಯೋಗದಲ್ಲಿ ಭಾಗಿಯಾಗಿದ್ದ ಹಲವಾರು ವಿಜ್ಞಾನಿಗಳಿಗೆ ರೋಮಾಂಚನವಾಯಿತು. ಹೀಗಿದ್ದರೂ ಯಾವುದೇ ಕಾರಣಕ್ಕೂ ಪರಮಾಣು ಶಕ್ತಿಯನ್ನು ವಿಧ್ವಂಸಕ ಕಾರ್ಯಕ್ಕೆ ಬಳಸಬಾರದೆನ್ನುವುದು ಭಾರತದ ಪ್ರಮುಖ ಉದ್ದೇಶವೂ ಆಗಿತ್ತು. ಭೂಮಿಯ ಅಂತರಾಳದಲ್ಲಿ ಪರಮಾಣು ಸಾಧನ ಸ್ಫೋಟವಾಗುತ್ತಿದ್ದಂತೆ ಆ ಯೋಜನೆಯ ಸಾರಥ್ಯ ವಹಿಸಿದ್ದ ಪರಮಾಣು ಶಕ್ತಿ ಆಯೋಗದ ಅಧ್ಯಕ್ಷ ಡಾ. ಎಚ್.ಎನ್.ಸೇತ್ನ ಮತ್ತು ಭಾಭಾ ಅಣುಶಕ್ತಿ ಸಂಶೋಧನಾ ಕೇಂದ್ರದ ಡಾ. ರಾಜಾ ರಾಮಣ್ಣ ಸ್ನಾನ–ಪಾನಕ್ಕೂ ಕಾಯದೆ ದೆಹಲಿಗೆ ವಿಮಾನದಲ್ಲಿ ದೌಡಾಯಿಸಿ, ಭಾರತದ ಪ್ರಧಾನಿಯಾಗಿದ್ದ ಶ್ರೀಮತಿ.ಇಂದಿರಾ ಗಾಂಧಿಯವರಿಗೆ ಈ ಯಶಸ್ಸಿನ ಸುದ್ದಿ ಮುಟ್ಟಿಸಿದರಂತೆ.

ಈ ಪ್ರಯೋಗಕ್ಕೆ ಬುನಾದಿ ಹಾಕಿದವರು ಡಾ.ಹೋಮಿ ಜೆ. ಭಾಭಾ ಮತ್ತು ವಿಕ್ರಮ್ ಸಾರಾಭಾಯಿಯವರು. ಭಾರತದ ಪ್ರಗತಿಯ ಬಗ್ಗೆ ಹಲವಾರು ಕನಸುಗಳನ್ನು ಕಾಣುತ್ತಿದ್ದ ಡಾ.ಹೋಮಿ ಜೆ. ಭಾಭಾರವರು 1966ರ ಜನವರಿ 24ರಂದು ವಿಮಾನ ಅಪಘಾತದಲ್ಲಿ ಮರಣಿಸಿದ್ದು ದುರ್ದೈವ. ಪರಮಾಣು ಶಕ್ತಿಯ ಮಹತ್ವದ ಮೊದಲ ಪ್ರಯೋಗದ ಮುನ್ನವೇ ವಿಕ್ರಮ್ ಸಾರಾಭಾಯಿಯವರೂ ಕೇರಳದ ತಿರುವನಂತಪುರದಲ್ಲಿ ತಮ್ಮ 52ನೆಯ ವಯಸ್ಸಿನಲ್ಲಿ ಡಿಸೆಂಬರ್ 1971ರಲ್ಲಿ ಏಕಾಏಕಿ ಹೃದಯ ಸ್ತಂಭನದಿಂದ ದೈವಾಧೀನರಾದರು. ಆ ಸಂದಿಗ್ಧ ಸಂದರ್ಭದಲ್ಲಿ ಪರಮಾಣುಶಕ್ತಿ ಪ್ರಯೋಗವನ್ನು ಮುನ್ನಡೆಸುವ ಜವಾಬ್ದಾರಿ ಡಾ. ರಾಜಾ ರಾಮಣ್ಣರವರ ಪಾಲಿಗೆ ಬಂತು. ಮಹತ್ವದ ಪ್ರಯೋಗದ ಮುಖ್ಯ ರೂವಾರಿಯಾಗಿ ಮುಂದಾಳತ್ವ ವಹಿಸಿದ್ದ ವಿಜ್ಞಾನಿ ಡಾ. ರಾಜಾ ರಾಮಣ್ಣ ಕರ್ನಾಟಕದವರು ಎನ್ನುವುದು ಕನ್ನಡಿಗರಿಗೆ ಮತ್ತೊಂದು ಹೆಮ್ಮೆಯ ವಿಷಯ.

ಈ ಯೋಜನೆಗೆ ವಿದೇಶಿಯರು 'ಹ್ಯಾಪಿ ಕೃಷ್ಣ' ಎಂದು ಹೆಸರಿಸಿದ್ದರೂ ಭಾರತದ ಸಫಲತೆ ಹಲವು ವಿದೇಶಿಯರಿಗೆ ಸಂತೋಷದಾಯಕವಾಗಿರಲಿಲ್ಲ. ಭಾರತದ ಯಶಸ್ಸು ಕೆಲವರ ಕಣ್ಣು ಕೆಂಪಾಗಿಸಿದ್ದೂ, ಹಲವು ವಿದೇಶೀಯರ ಹುಬ್ಬೇರಿಸಿದ್ದೂ ನಿಜ. ಅತಿ ಮುಖ್ಯವಾಗಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಶಾಶ್ವತ ಸದಸ್ಯತ್ವ ಹೊಂದಿರುವ ಪಿ–5 ದೇಶಗಳಿಗೆ – ಸಂಯುಕ್ತ ಸಂಸ್ಥಾನಗಳು, ಯುನೈಟೆಡ್ ಕಿಂಗ್ಡಮ್, ಫ್ರಾನ್ಸ್, ಚೈನಾ ಮತ್ತು ರಷ್ಯಾ– ಭಾರತದ ಯಶಸ್ಸು ಕಿಂಚಿತ್ತೂ ಹಿತವೆನಿಸಲಿಲ್ಲ. ಈ

ಐದು ದೇಶಗಳನ್ನು ಹೊರತುಪಡಿಸಿ ಪರಮಾಣುಶಕ್ತಿ ಸ್ಫೋಟವನ್ನು ಯಶಸ್ವಿಯಾಗಿ ನೆರವೇರಿಸಿದ್ದರಲ್ಲಿ ಭಾರತವೇ ಮೊತ್ತಮೊದಲ ದೇಶವೆನ್ನುವ ಸಂಗತಿಯನ್ನೂ ಮರೆಯಬಾರದು.

ಹೀಗೆ ಒಂದು ದೇಶದ ಪ್ರಗತಿಯನ್ನು ಕಂಡು ಮತ್ತೆ ಕೆಲವು ದೇಶಗಳು ಅಸಮಧಾನಗೊಳ್ಳುವ ವರ್ತನೆ ಹೊಸತೇನೂ ಅಲ್ಲ. ಇದರ ಹಿನ್ನೆಲೆಯನ್ನೂ ಗಮನಿಸಿದಾಗ ಮತ್ತೊಂದು ವಿಷಯ ಸ್ಪಷ್ಟವಾಗುತ್ತದೆ. ಪ್ರಪಂಚದ ಎರಡನೇ ಮಹಾಯುದ್ಧ ಮುಗಿಯಿತೆನ್ನುವ ತರುಣದಲ್ಲಿಯೇ ಸಂಯುಕ್ತ ಸಂಸ್ಥಾನ ಮತ್ತು ರಷ್ಯಾ ದೇಶಗಳು ತಾವೇ ಶಕ್ತಿಯುತ ರಾಷ್ಟ್ರವೆಂದು ಸಾಬೀತುಗೊಳಿಸುವ ಹುನ್ನಾರದಲ್ಲಿ ತೊಡಗಿದ್ದವು. ಆ ಹುನ್ನಾರದಲ್ಲಿ ಬಲಿಯಾದದ್ದು ಜಪಾನ್ ದೇಶದ ಹಿರೋಶಿಮಾ ಮತ್ತು ನಾಗಸಾಕಿ ನಗರಗಳು ಎನ್ನುವ ವಿಷಯ ಇತಿಹಾಸದ ಪುಟಗಳಲ್ಲಿ ಅಚ್ಚಳಿಯದೇ ಉಳಿದಿವೆ. ಈ ಎರಡು ನಗರಗಳು 1945ರ ಆಗಸ್ಟ್‌ನಲ್ಲಿ ಸಂಯುಕ್ತ ಸಂಸ್ಥಾನಗಳ ಅಣುಬಾಂಬಿನ ಧಾಳಿಗೆ ಗುರಿಯಾದವು. ಅಪಾರ ಪ್ರಾಣ ಹಾನಿಯಾಯಿತು. ಕೇವಲ ಸೇನಾ ಸಿಬ್ಬಂದಿಯಲ್ಲದೆ ಜನಸಾಮಾನ್ಯರು, ಮಕ್ಕಳು, ನಿಸ್ಸಹಾಯಕರು ಜೀವ ತೆತ್ತರು. ಆ ದಾಳಿಯ ಆಘಾತದಿಂದ ಚೇತರಿಸಿಕೊಳ್ಳಲು ಅನೇಕ ವರ್ಷಗಳೇ ಬೇಕಾದವು. ಮುಂದೆ 1949ರಲ್ಲಿ ರಷ್ಯಾ ದೇಶವು ಅಣ್ವಸ್ತ್ರ ಪರೀಕ್ಷೆ ಮಾಡಿ ಅಣುಬಾಂಬುಗಳನ್ನು ತಯಾರಿಸಲು ತಾನೂ ಸಿದ್ಧವೆಂದು ಪ್ರಪಂಚಕ್ಕೆ ಸಾರಿತು.

ಹೀಗೆ ಪ್ರತಿ ದೇಶವೂ ಅಣುಬಾಂಬುಗಳನ್ನು ತಯಾರಿಸುತ್ತಲೇ ಹೋದಲ್ಲಿ ಪ್ರಪಂಚಕ್ಕೇ ಅಪಾಯವೆಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ಅಣ್ವಸ್ತ್ರ ತಯಾರಿಕೆಯ ಮೇಲೆ 1968ರಲ್ಲಿ ನಿಷೇಧ ಹೇರಿತು. ಇದೇ ಪರಮಾಣು ಪ್ರಸರಣ ತಡೆ ಒಪ್ಪಂದ (Nuclear Nonproliferation Treaty –NPT). ಇದರ ಮೂಲ ಉದ್ದೇಶ ಶಾಂತಿ ಸ್ಥಾಪನೆ ಎನ್ನುವುದು ಖಚಿತವೇ. ಜನವರಿ ಮೊದಲನೇ ದಿನಾಂಕ 1967ರ ಮುಂಚೆ ಅಣ್ವಸ್ತ್ರಗಳನ್ನು ತಯಾರಿಸಿ, ಪ್ರಾಯೋಗಿಕವಾಗಿ ಪರೀಕ್ಷಿಸಿದ್ದ ದೇಶಗಳನ್ನು ಹೊರತುಪಡಿಸಿ ಉಳಿದ ದೇಶಗಳು ಯಾವುದೇ ಬಗೆಯ ಪರಮಾಣು ಪ್ರಯೋಗಗಳನ್ನು ನಡೆಸಬಾರದು ಎನ್ನುವುದೇ ಈ ಒಪ್ಪಂದ. ಇದು ಪಿ–5 ದೇಶಗಳಿಗೆ ಅನುಕೂಲಕರವೇ ಆಗಿದ್ದರೂ ಉಳಿದ ದೇಶಗಳಿಗೆ ಕಿರಿಕಿರಿಯುಂಟು ಮಾಡಿತು. ಪಿ–5 ದೇಶಗಳು ಪರಮಾಣು ಶಕ್ತಿಯನ್ನು ಅಭಿವೃದ್ಧಿಸಿ ಉಳಿದ ದೇಶಗಳ ಮೇಲೆ ಬಳಸದಂತೆ ಯಾವುದೇ ತಡೆ ಇಲ್ಲದಿರುವಾಗ ಹೊರಗುಳಿದ ಇತರ ದೇಶಗಳು ಒಪ್ಪಂದಕ್ಕೆ ತಲೆ ಬಾಗಿ ಪರಮಾಣು ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದುವರಿಯದಂತೆ ತಡೆಹಾಕುವ ನಿಯಮ ಹೇಗೆ ತಾನೆ ಸರಿ ಎನ್ನುವುದೇ ಭಾರತದ ವಾದವಾಗಿತ್ತು. ಅಂತೆಯೇ ಇಂತಹ ನಿಯಮವನ್ನು ಮೀರಿ ಪ್ರಯೋಗ ಕೈಗೊಂಡ ಭಾರತ ಯಶಸ್ವಿಯಾಗಿದ್ದು ಪಿ–5 ದೇಶಗಳಿಗೆ ಸಹಿಸಲಾಗಲಿಲ್ಲ.

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಪ್ರಪ್ರಥಮ ಪ್ರಧಾನ ಮಂತ್ರಿಗಳಾಗಿದ್ದ ಜವಾಹರಲಾಲ್ ನೆಹರೂರವರೂ ಭಾರತದ ಪ್ರಗತಿಗೆ ವಿಜ್ಞಾನ ಅತ್ಯವಶ್ಯಕವೆನ್ನುವ ದೂರದೃಷ್ಟಿ ಹೊಂದಿದ್ದರು. ಹಲವಾರು ವೈಜ್ಞಾನಿಕ ಯೋಜನೆಗಳನ್ನು ರೂಪಿಸಲು ಆಸಕ್ತರಾಗಿದ್ದರೂ ಮಾನವನ ಹಿತಕ್ಕೆ ಧಕ್ಕೆಯಾಗುವುದೆಂದು ಅಣ್ವಸ್ತ್ರ ತಯಾರಿಕೆಗೆ ಉತ್ತೇಜನ ನೀಡಿರಲಿಲ್ಲ. ಆ ಸಮಯದಲ್ಲಿ ಅಂದರೆ 1954ರಲ್ಲಿಯೇ ಮುಂಬೈನಲ್ಲಿ ಭಾಭಾ ಅಣುಶಕ್ತಿ ಕೇಂದ್ರವು ಸ್ಥಾಪಿತವಾಗಿ ಸಂಶೋಧನೆಗಳು ಆರಂಭವಾಗಿದ್ದವು. ಹೋಮಿ ಭಾಭಾರವರ ನೇತೃತ್ವದಲ್ಲಿ 1954ರಿಂದ 1959ರ ಸಮಯದಲ್ಲಿ ಅಣ್ವಸ್ತ್ರವನ್ನು ತಯಾರಿಸುವ ದಿಶೆಯಲ್ಲಿಯೂ ಸಂಶೋಧನೆಗಳು ತ್ವರಿತವಾಗಿ ಮುಂದುವರಿಯಿತು. ಮುಂದೆ 1964ರಿಂದ 1966ರವರೆಗೆ ಭಾರತದ ಎರಡನೆಯ ಪ್ರಧಾನಿಯಾದ ಶ್ರೀ.ಲಾಲ್ ಬಹಾದ್ದೂರ್ ಶಾಸ್ತ್ರಿಯವರು ವಿಕ್ರಮ್ ಸಾರಾಭಾಯಿಯವರ ನೇತೃತ್ವದಲ್ಲಿ ಜರುಗುತ್ತಿದ್ದ ಪರಮಾಣು ಪ್ರಯೋಗಗಳಿಗೆ ಉತ್ತೇಜನ ನೀಡಿದರೂ ಗಾಂಧಿಯ ತತ್ತ್ವಗಳನ್ನು ಅಪಾರವಾಗಿ ಗೌರವಿಸುತ್ತಿದ್ದುದರಿಂದ ಕೇವಲ ಶಾಂತಿಯುತ ಕಾರ್ಯಗಳಿಗೆ ಮಾತ್ರವೇ ಪರಮಾಣು ಶಕ್ತಿಯನ್ನು ಬಳಸಬೇಕೆಂದು ಕಟ್ಟುನಿಟ್ಟಿನ ಷರತ್ತು ವಿಧಿಸಿದ್ದರು. ಅಣುಶಕ್ತಿಯಿಂದ ಶಾಂತಿಯುತ ಪ್ರಯೋಜನಗಳೂ ಇವೆಯೆನ್ನುವ ಕಾರಣದಿಂದ ಪ್ರಧಾನಮಂತ್ರಿ ಪಟ್ಟವೇರಿದ ಶ್ರೀಮತಿ ಇಂದಿರಾ ಗಾಂಧಿಯವರು ಮುನ್ನಡೆದರೂ, ಸೆಪ್ಟೆಂಬರ್ 1972ರಲ್ಲಿ ಭಾಭಾ ಪರಮಾಣುಶಕ್ತಿ ಕೇಂದ್ರಕ್ಕೆ ಒಂದು ಅಣ್ವಸ್ತ್ರವನ್ನು ತಯಾರಿಸಿ, ಪರೀಕ್ಷಿಸುವಂತೆ ಆದೇಶಿಸಿದ್ದು ಮಹತ್ವದ ತಿರುವು. ಬಹುಷಃ ಆ ಸಮಯದಲ್ಲಾಗಲೇ ಪ್ರಪಂಚ ಬದಲಾಗುತ್ತಿದ್ದು, ಅಲ್ಲಿನ ವಿದ್ಯಮಾನಗಳನ್ನು ಗಮನಿಸಿಯೇ ಭಾರತದ ವಿಜ್ಞಾನಿಗಳೂ ಹೀಗೆ ಮಾಡುವಂತೆ ಪ್ರಧಾನಿಯವರಿಗೆ ಸಲಹೆ

ನೀಡಿರಬಹುದು. ಒಟ್ಟಿನಲ್ಲಿ ಭಾರತದ ವೈಜ್ಞಾನಿಕ ಪ್ರಯೋಗ ಯಶಸ್ವಿಯಾದರೂ ಅದರ ಹಿಂದಿರುವ ಮಿಶ್ರ ಸಾಧ್ಯತೆಗಳ ಕಾರಣದಿಂದ ಪ್ರಪಂಚದಾದ್ಯಂತ ಉದ್ವೇಗವೇರ್ಪಟ್ಟಿತು.

ಇದೀಗ ಭಾರತದ ಪರಮಾಣು ಪರೀಕ್ಷೆಯ ಒಂದಿಷ್ಟು ಹೆಜ್ಜೆಗಳನ್ನು ನೋಡೋಣ. ರಾಜಾಸ್ಥಾನದ ಮರಳುಗಾಡಿನಲ್ಲಿರುವ ಪೋಖ್ರಾನ್ ನಿಂದ ಕೇವಲ 45 ಕಿಮೀ ದೂರದಲ್ಲಿ ಭಾರತೀಯ ಸೇನಾ ನೆಲೆ ಇದೆ. ಇದು ಪಾಕಿಸ್ತಾನದಿಂದ ಸುಮಾರು 460 ಕಿಮೀ ದೂರವಿದೆ. ಪೋಖ್ರಾನ್ ಪ್ರದೇಶವನ್ನು ಪರಮಾಣು ಪ್ರಯೋಗಕ್ಕೆ ಆಯ್ಕೆ ಮಾಡಿಕೊಳ್ಳಲು ಭಾಭಾ ಪರಮಾಣು ಸಂಶೋಧನ ಕೇಂದ್ರ ಮುಂದಾಗಿದ್ದಕ್ಕೂ ಬಲವಾದ ಕಾರಣವಿದೆ. ಈ ಪ್ರದೇಶ ಜನವಸತಿಯಿಂದ ದೂರವಿರುವುದಲ್ಲದೆ ಯಾವುದೇ ಅಂತರ್ಜಲ ನಿಕ್ಷೇಪವನ್ನು ಹೊಂದಿಲ್ಲ. ಹಾಗಾಗಿ ಸ್ಫೋಟದಿಂದ ಹೊರಹೊಮ್ಮುವ ವಿಕಿರಣಗಳಿಂದ ಮಾನವರಿಗಾಗಲೀ, ಅಂತರ್ಜಲಕ್ಕಾಗಲೀ ಹಾನಿ ಉಂಟಾಗುವ ಸಾಧ್ಯತೆಯೂ ಕಡಿಮೆ ಎಂದು ಅಂದಾಜಿಸಿಯೇ, ಈ ಜಾಗವನ್ನು ಪ್ರಶಸ್ತವೆಂದು ಆಯ್ಕೆ ಮಾಡಲಾಯ್ತು. ಅಲ್ಲದೆ ದಿನನಿತ್ಯ ಸೇನಾ ಸಂಬಂಧಿತ ಚಟುವಟಿಕೆಗಳು ಇಲ್ಲಿ ಜರುಗುತ್ತಿದ್ದುದರಿಂದ ಇಲ್ಲಿನ ಅಣುಸ್ಫೋಟ ಪರೀಕ್ಷೆಯ ಪೂರ್ವಸಿದ್ಧತೆಗಳು ತ್ವರಿತವಾಗಿ ಹೊರಗಿನವರಿಗೆ ತಿಳಿಯುವ ಸಂಭವವಿರಲಿಲ್ಲ. ಭಾರತದ ಚಟುವಟಿಕೆಗಳ ಮೇಲೆ, ವಿಶೇಷವಾಗಿ ಗಡಿ ಭಾಗದಲ್ಲಿ ನಿಗಾ ಇಡುತ್ತಿದ್ದ ದೇಶಗಳಿಗೂ ಯೋಜನೆಯ ಸುಳಿವು ಸಿಕ್ಕಲಿಲ್ಲ. ಗೂಢಚಾರಿಕೆಯಲ್ಲಿ ಮುಂಚೂಣಿಯಲ್ಲಿದ್ದ ಸಂಯುಕ್ತ ರಾಷ್ಟ್ರದವರಿಗೂ ಇದರ ಸುಳಿವು ತಿಳಿಯದೇ ಹೋದದ್ದು ಭಾರತದ ಗೌಪ್ಯತೆಯ ಪರಾಕಾಷ್ಠೆಯೆಂದೇ ಹೇಳಬಹುದು. ವಾಸ್ತವವೇನೆಂದರೆ ಈ ಪ್ರಯೋಗವನ್ನು ನಡೆಸಿದ್ದು ಭೂಮಿಯ ಅಂತರಾಳದಲ್ಲಿ. ಪ್ರಯೋಗವನ್ನು ನಡೆಸಲು ಪ್ರಧಾನ ಮಂತ್ರಿಯವರು ಅನುಮತಿ ನೀಡಿದ್ದು ಬಾಯಿಮಾತಿನಲ್ಲಿಯೇ ಹೊರತು ಯಾವುದೇ ಬಗೆಯ ಲಿಖಿತ ದಾಖಲೆ ಮೂಲಕ ಅಲ್ಲ. ಈ ಪ್ರಯೋಗದಲ್ಲಿ ಭಾಗಿಯಾಗಿದ್ದ ಸಣ್ಣ ಗುಂಪಿನ ವಿಜ್ಞಾನಿಗಳ ನಡುವೆಯೂ ಮಾತುಕತೆಗಳು ಬಹಳ ಸೂಕ್ಷ್ಮವಾಗಿ ಹಾಗೂ ಸಂಕೇತ ಭಾಷೆಯಲ್ಲಿಯೇ ಜರುಗುತ್ತಿದ್ದವು. ಈಗಿರುವಂತೆ ವೈಫೈ, ದೂರವಾಣಿಗಳೂ ಇಲ್ಲದುದರಿಂದ ಮತ್ತಷ್ಟು ಅನುಕೂಲವಾಯ್ತು. ಪರಮಾಣು ಸಾಧನದ ಬಿಡಿಭಾಗಗಳನ್ನು ಬೇರೆಬೇರೆ ಸ್ಥಳಗಳಲ್ಲಿ ತಯಾರಿಸಿದ್ದರಿಂದಲೂ ಗೌಪ್ಯತೆಯನ್ನು ಕಾಪಾಡುವುದು ಸುಲಭವಾಯಿತು.

ಇಷ್ಟೆಲ್ಲಾ ಸಿದ್ಧತೆಗಳಿಂದ ತಯಾರಿಸಿದ ಪರಮಾಣು ಸಾಧನದ ಆಸ್ಫೋಟದ ಬಗ್ಗೆ ಸರಳ ವಿವರಣೆಯೆಂದರೆ ಸ್ಫೋಟವು ಪರಮಾಣು ಸಮ್ಮಿಳನ ಅಥವಾ ವಿಭಜನೆಯ ಮೂಲಕ ಉಂಟಾಗುವಂತಿದ್ದು, ಅದರ ಪರಿಣಾಮವಾಗಿ ಅತಿಯಾದ ಶಾಖ, ಬೆಳಕು, ಗಾಳಿಯ ಒತ್ತಡ ಹಾಗೂ ವಿಕಿರಣದ ತರಂಗಗಳ ಉತ್ಪತ್ತಿಯಾಗುವಂತಿತ್ತು. ಆ ಸ್ಫೋಟಕ, ಅಮೆರಿಕವು ಜಪಾನಿನ ನಾಗಸಾಕಿ ನಗರವನ್ನು ಧ್ವಂಸಮಾಡಿದ 'ಫ್ಯಾಟ್-ಮ್ಯಾನ್'(Fat Man) ಎಂದೇ ಹೆಸರಿಸಲಾಗಿದ್ದ ಬಾಂಬನ್ನು ಹೋಲುವಂತಿತ್ತು.

ಭಾರತದ ಪ್ರಯೋಗ ಯಶಸ್ವಿಯಾಗುತ್ತಿದ್ದಂತೆ ಹಲವು ಅಭಿವೃದ್ಧಿ ಹೊಂದಿದ್ದ ರಾಷ್ಟ್ರಗಳು ಭಾರತದ ಏಳಿಗೆಗೆ ತಡೆ ಹಾಕಲು ಮುಂದಾದವು. ಪರಮಾಣು ಶಕ್ತಿಯನ್ನು ವಿನಾಶಕ್ಕಾಗಿ ಬಳಸಬಹುದೆಂಬ ಭಯವೇ ಇದಕ್ಕೆ ಕಾರಣವಾಗಿತ್ತು. ಭಾರತ ಈ ಪ್ರಯೋಗ ಕೈಗೊಂಡಿದ್ದಕ್ಕೆ 1970ರ ಸಮಯದಲ್ಲಿ ಉಂಟಾಗಿದ್ದ ಆರ್ಥಿಕ ಬಿಕ್ಕಟ್ಟಿನಿಂದ ಪರದಾಡುತ್ತಿದ್ದ ತನ್ನ ದೇಶದ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರಯತ್ನವೆಂದೂ ಹಲವು ದೇಶಗಳು ಟೀಕಿಸಿದವು. 'ನ್ಯೂಯಾರ್ಕ್ ಟೈಂಸ್' ಪತ್ರಿಕೆ ಭಾರತದ ಈ ಪ್ರಯೋಗ ಕೆಲವು ಉನ್ನತ ಪ್ರತಿಭೆಗಳನ್ನು ಆಡಂಬರಕ್ಕೆ ಈಡುಮಾಡಿದೆ ಮತ್ತು ಅದೇ ಸಮಯದಲ್ಲಿ 600 ಮಿಲಿಯನ್ ಭಾರತೀಯರು ಬಡತನದ ಆಳಕ್ಕೆ ಜಾರುತ್ತಿದ್ದಾರೆ ಎಂದು ಟೀಕಿಸಿತ್ತು. ಭಾರತದ ನೆರೆ ರಾಷ್ಟ್ರವಾದ ಪಾಕಿಸ್ತಾನವೂ ಉಪಖಂಡದಲ್ಲಿ ಭಾರತದ ಪ್ರಾಬಲ್ಯವನ್ನು ಸ್ವೀಕರಿಸಲು ಸಾಧ್ಯವಿಲ್ಲವೆಂದು ಘೋಷಿಸಿತು. ಬ್ರಿಟನ್ ದಿಗ್ಭ್ರಮೆಗೊಂಡಿತು. ಜರ್ಮನಿ ಕೂಡ ಭಾರತದ ಈ ನಡೆಯನ್ನು ಪರಮಾಣು ಪರೀಕ್ಷೆ ನಿಷೇಧ ಒಪ್ಪಂದವನ್ನು ಒಪ್ಪಿಕೊಂಡ ದೇಶಗಳ 'ಮುಖಕ್ಕೆ ಹೊಡೆದಂತಿದೆ' ಎಂದು ತನ್ನ ಅಸಮ್ಮತಿಯನ್ನು ಸೂಚಿಸಿತು. ಎಲ್ಲಕ್ಕಿಂತ ಮಿಗಿಲಾಗಿ ಭಾರತದ ದಿಟ್ಟ ಹೆಜ್ಜೆಯನ್ನು ವಿರೋಧಿಸಲು ಸಂಯುಕ್ತ ರಾಷ್ಟ್ರಗಳು ಭಾರತಕ್ಕೆ ಯಾವುದೇ ಬಗೆಯ ವೈಜ್ಞಾನಿಕ ಸಹಾಯವನ್ನು ಮಾಡುವುದಿಲ್ಲವೆನ್ನುವ ನಿರ್ಬಂಧ ಹೇರಲು ಅಣಿಯಾಯಿತು. ಭಾರತದ ಇತ್ತೀಚಿನ ಚಂದ್ರಯಾನದ ಯಶಸ್ಸಿನ ಬಗ್ಗೆಯೂ ಹೀಗೆ ಮಿಶ್ರ ಪ್ರತಿಕ್ರಿಯೆಗಳು

ಬಂದಿರುವುದು ಇಂದಿನ ಜನರಿಗೆ ತಿಳಿದಿರುವ ವಿಷಯವೇ. ಆದರೆ ಭಾರತಕ್ಕೆ ತನ್ನದೇ ಸ್ಪಷ್ಟ ಉದ್ದಿಶ್ಯ ಮತ್ತು ದೂರದೃಷ್ಟಿ ಇದ್ದುದರಿಂದ ಯಾವ ತಡೆಗಳಿಂದಲೂ, ಟೀಕೆಗಳಿಂದಲೂ ವಿಚಲಿತವಾಗಲಿಲ್ಲ.

ಆದರೆ ಈ ಯಶಸ್ಸಿನಿಂದ ಭಾರತಕ್ಕೆ ಹೇಗೆ ಉಪಯೋಗವಾಯಿತು? ಭಾರತದ ಗೆಲವು ಉಳಿದ ದೇಶಗಳು ಭಾರತದತ್ತ ತಿರುಗಿ ನೋಡುವಂತೆ ಮಾಡಿತಲ್ಲದೆ ದೇಶವನ್ನು ಜಾಗತಿಕವಾಗಿ ಒಂದು ಮಜಲು ಎತ್ತರೇಕ್ಕೇರಿಸಿತು. ಕಾಲಕ್ರಮೇಣ ಭಾರತವು ತನ್ನ ಪರಮಾಣು ಪರೀಕ್ಷೆಯ ವಿವರಗಳನ್ನು ಪ್ರಪಂಚಕ್ಕೆ, ವಿಶೇಷವಾಗಿ ಅಮೆರಿಕ ಸಂಯುಕ್ತ ರಾಷ್ಟ್ರಗಳಿಗೆ ತಿಳಿಯಪಡಿಸಿ ಆ ದೇಶದ ನಿರ್ಬಂಧವನ್ನು ತೆಗೆಸುವುದರಲ್ಲಿಯೂ ಸಫಲವಾಯಿತು. ಅಣ್ವಸ್ತ್ರ ತಯಾರಿಕೆಯ ನಿಷೇಧದಿಂದ ಒಳಗೊಳಗೇ ಕುದಿಯುತ್ತಿದ್ದ ಇತರ ದೇಶಗಳಿಗೂ ನಿರಾಳವಾಯಿತು. ಕಾಲಕ್ರಮೇಣ ಒಂದಷ್ಟು ಧೈರ್ಯ ವಹಿಸಿದ ಮತ್ತಷ್ಟು ರಾಷ್ಟ್ರಗಳೂ ಈ ದಿಕ್ಕಿನಲ್ಲಿ ಮುನ್ನಡೆದವು. ಹಾಗಾಗಿ ಇಂದಿನ ಕಾಲಘಟ್ಟದಲ್ಲಿ ಅಣ್ವಸ್ತ್ರಗಳನ್ನು ಹೊಂದಿರುವ ಒಂಭತ್ತು ದೇಶಗಳೆಂದರೆ ಅಮೆರಿಕ ಸಂಯುಕ್ತ ಸಂಸ್ಥಾನಗಳು, ರಷ್ಯಾ, ಫ್ರಾನ್ಸ್, ಚೈನಾ, ಯುನೈಟೆಡ್ ಕಿಂಗ್‌ಡಮ್. ಭಾರತ, ಇಸ್ರೇಲ್, ಪಾಕಿಸ್ತಾನ, ಮತ್ತು ನಾರ್ತ್ ಕೊರಿಯಾ. ಒಟ್ಟು 13,000 ಅಸ್ತ್ರಗಳಿವೆಯೆಂದು ಅಂದಾಜಿಸಲಾಗಿದೆ. ಇನ್ನಿತರ ರಾಷ್ಟ್ರಗಳು ಇದರಿಂದ ಉದ್ವಿಗ್ನಗೊಂಡರೂ ಅಣ್ವಸ್ತ್ರಗಳನ್ನು ಹೊಂದಿರುವ ದೇಶಗಳ ಪ್ರಾಬಲ್ಯ ಹಾಗೂ ವಸ್ತುಸ್ಥಿತಿ ಆ ರಾಷ್ಟ್ರಗಳು ಸುಮ್ಮನಿರಲು ಕಾರಣವಾಗಿದೆ.


ಪೋಖ್ರಾನ್‌ನಲ್ಲಿ 1974ರಲ್ಲಿ ಕೈಗೊಂಡ ಪ್ರಯೋಗ ಈ ದಿಶೆಯಲ್ಲಿ ಭಾರತದ ಮೊದಲ ಹೆಜ್ಜೆಯಾಗಿತ್ತು. ಮುಂದೆ 1998ರಲ್ಲಿ 'ಆಪರೇಷನ್ ಶಕ್ತಿ' ಹೆಸರಿನಲ್ಲಿ ಜರುಗಿದ ಪೋಖ್ರಾನ್–2 ಎರಡನೆಯ ಹಂತದ ಪ್ರಯೋಗಗಳು ಭಾರತದ ನಿಲುವು ಹಾಗೂ ದಕ್ಷತೆಯನ್ನು ದೃಢಪಡಿಸಿದವು. ಈ ಸಮಯದಲ್ಲಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿಯವರಿಂದಲೂ ಇಂತಹ ಪ್ರಯೋಗಗಳಿಗೆ ಉತ್ತೇಜನ ದೊರೆಯಿತು.

ಭಾರತವು ತನ್ನ ಸಾಮರ್ಥ್ಯವನ್ನು ತೋರಿದರೂ ತನಗೆ ತಾನೇ ಪ್ರತಿಜ್ಞೆ ಮಾಡಿಕೊಂಡಿದ್ದಂತೆ ಬೇರಾವ ರಾಷ್ಟ್ರದ ಮೇಲೂ ಪರಮಾಣು ಅಸ್ತ್ರವನ್ನು ಪ್ರಯೋಗಿಸದೆ ತನ್ನ ಪ್ರತಿಜ್ಞೆಗೆ ಬದ್ಧವಾಗಿದೆ. ಈಗಿನ ರಕ್ಷಣಾ ಮಂತ್ರಿಗಳಾಗಿರುವ ರಾಜನಾಥ್ ಸಿಂಗ್‌ರವರೂ ಭಾರತವು ತಾನೇ ಮುಂದಾಗಿ ಬೇರೆ ರಾಷ್ಟ್ರಗಳ ಮೇಲೆ ಅಣ್ವಸ್ತ್ರವನ್ನು ಪ್ರಯೋಗಿಸುವುದಿಲ್ಲವಾದರೂ ಸಮಯೋಚಿತವಾಗಿ ನಿರ್ಧಾರವನ್ನು ತೆಗೆದುಕೊಳ್ಳಲಾಗುತ್ತದೆ ಎಂದು ನುಡಿದಿದ್ದಾರೆ.

ಇಂತಹ ಮಹತ್ತರ ಸಾಧನೆಗೆ ಉತ್ತೇಜನ ನೀಡಿದ ಅಂದಿನ ಪ್ರಧಾನಿಯವರು ಹಾಗೂ ಪ್ರಯೋಗದಲ್ಲಿ ಭಾಗವಹಿಸಿದ್ದ ವಿಜ್ಞಾನಿಗಳು ಮತ್ತು ಜನಸಾಮಾನ್ಯರನ್ನೂ ನಾವಿಂದು ಸ್ಮರಿಸಬೇಕು. ಇಂದಿಗೆ ಐವತ್ತು ವರ್ಷಗಳ ಹಿಂದೆ ತನ್ನ ಮಹತ್ವಪೂರ್ಣ ಪರಮಾಣು ಶಕ್ತಿ ಪ್ರಯೋಗದಿಂದ ಪ್ರಪಂಚದ ಗಮನ ಸೆಳೆದ ಅಂದಿನ ಭಾರತ, ಆ ಯಶಸ್ಸಿನ ಕೇಂದ್ರವಾಗಿದ್ದ ಪುಟ್ಟ ಹಳ್ಳಿ ಪೋಖ್ರಾನ್ ಈಗಲೂ ಭಾರತದ ಇತಿಹಾಸದ ಪುಟಗಳಲ್ಲಿ ವಿಶಿಷ್ಟ ಸ್ಥಾನ ಪಡೆದಿವೆ.

(ಲೇಖಕರು ಬೆಂಗಳೂರಿನ ರಾಷ್ಟ್ರೀಯ ವೈಮಾಂತರಿಕ್ಷ ಪ್ರಯೋಗಾಲಯಗಳು ಸಂಸ್ಥೆಯ ನಿವೃತ್ತ ವಿಜ್ಞಾನಿ)

***



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ

ಅಧ್ಯಕ್ಷೀಯ ಅನಿಸಿಕೆಗಳು

– ಸೀತಾರಾಮ ಕಟ್ಟಿ
(ಜಾನಕಿ ರಾಮ)

"ನಮೋಸ್ತು ತಾತ್ವಿಕಾ ದೇವ: ಜ್ಞಾನ ಭಕ್ತಿ ಪರಾಯಣ: ॥
ಧರ್ಮ ಮಾರ್ಗ ಪ್ರೇರಯತು ಭವಂತ : ಸರ್ವಯೇವಹಿ ॥"

ಮೊದಲು ಕಾವ್ಯಕಾರಣಿ ಮಾತೆ ಸರಸ್ವತಿಯನ್ನು ನಮಿಸುತ್ತಾ ವೇದಿಕೆಯ ಸಂಚಾಲಕ ಮಂಡಲಿಗೆ ವಂದಿಸುತ್ತಾ ನೋಡಿಯೋ ಕನ್ನಡ ಕಾವ್ಯ ದಾಸೋಹದ ೨೨೭ನೇ ಸಂಚಿಕೆಯಲ್ಲಿ ಭಾಗವಹಿಸಿದವರಿಗೆ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ. ನನ್ನ ಪರಿಚಯವನ್ನು ಮಾಡಿಕೊಟ್ಟ ಸ್ನೇಹ ಶಶಿಧರ ಮ್ಯಾಡಮ್‌ರವರಿಗೆ ಧನ್ಯವಾದಗಳು. ಇತ್ತೀಚೆಗಷ್ಟೇ ತಮ್ಮ ಕುಟುಂಬವನ್ನು ಸೇರಿರುವ, ಈಗೀಗ ಸಾಹಿತ್ಯಿಕ ಹೆಜ್ಜೆ ಇಡಲು ಕಲಿಯುತ್ತಿರುವ ನನ್ನನ್ನು ಈ ದಾಸೋಹಕ್ಕೆ ಅಧ್ಯಕ್ಷನನ್ನಾಗಿ ಮಾಡಿದ್ದಕ್ಕೆ ಧನ್ಯವಾದಗಳು. ಇದು ಹಿರಿಯರೆಲ್ಲರೂ ಸೇರಿ ಮಗುವಿನ ಬಾಯಿಂದ ಶ್ಲೋಕ ಕೇಳಿ ಖುಷಿಪಡುವಂತಿದೆ. ನನ್ನ ಕೈಲಾದಷ್ಟು, ನನ್ನ ಮಿತಿ – ಮತಿಗೆ ತಕ್ಕಷ್ಟು ನ್ಯಾಯ ಒದಗಿಸುವ ಪ್ರಯತ್ನ ನನ್ನದು. ಒಂದಂತೂ ಸತ್ಯ, ಶಬ್ದಗಳ ಮಾಲೀಕರ ಧ್ವನಿಯಲ್ಲೇ ಸಾಹಿತ್ಯವನ್ನು ಕೇಳುವುದೇ ಒಂದು ಸೌಭಾಗ್ಯ. ಈವತ್ತು ಆ ಭಾಗ್ಯ ನನ್ನದಾಗಿತ್ತು. ಆದರೆ ಅಧ್ಯಕ್ಷತೆಯೆಂಬ ಸಿಹಿ ಭಾರದೊಂದಿಗೆ. ಇರಲಿ.

ಜುಲೈ ತಿಂಗಳು ಜಾಗತಿಕ ಸಾಹಿತ್ಯಕ್ಕೆ ಬಹಳ ಹವಳಗಳನ್ನು ಕೊಟ್ಟಿದೆ. ಕಾಫ್ಕಾ, ಬರ್ನಾರ್ಡ್ ಷಾ, ಅರ್ನೆಸ್ಟ್ ಹೆಮಿಂಗ್ವೆ, ಜೆ ಕೆ ರೌಲಿಂಗ, ಮುನ್ಷಿ ಪ್ರೇಂಚಂದ್ ಹುಟ್ಟಿದ ತಿಂಗಳಿದು. ಇವರಿಂದ ಸಾಹಿತ್ಯ ವೃಕ್ಷಕ್ಕೆ ಸಾಕಷ್ಟು ನೀರು, ಗೊಬ್ಬರ ದೊರೆತು ಅದು ಇಲ್ಲಿಯವರೆಗೆ ವಿಶಾಲವಾಗಿದೆ. ಆ ವೃಕ್ಷದ ಸಮೃದ್ಧಿಗೆ ನಮ್ಮ ಅಳಿಲು ಕೊಡುಗೆಯನ್ನು ನಾವು ಕೊಡೋಣ.

ಒಟ್ಟು ಇಪ್ಪತ್ತು ಜನ ಭಾಗವಹಿಸಿದ ದಾಸೋಹವಿದು. ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತಾ ರೂಢಿಯಂತೆ ನನ್ನ ಅಭಿಪ್ರಾಯಗಳನ್ನು ಮಂಡಿಸುತ್ತಿದ್ದೇನೆ.

೧. 'ಛಂದಸ್ಸು' – ಗಣಪತಿ ಹೆಗಡೆ

ವಿಷಯವನ್ನು ಸೂಚ್ಯವಾಗಿಯೂ, ಲಯಬದ್ಧವಾಗಿಯೂ, ಪ್ರಾಸಬದ್ಧವಾಗಿಯೂ, ಕೆಲ ನಿರ್ಧಾರಿತ ಕಟ್ಟಳೆಗಳ ಗಣಿತದೊಂದಿಗೆ ಪ್ರಸ್ತುತೀಕರಿಸಿದರೆ ಅದು ಗೇಯ ಕಾವ್ಯವಾಗಿ ಮೂಡುತ್ತದೆ. ಇದನ್ನು ವೇದಗಳಲ್ಲಿಂದ ಹಿಡಿದು ಇಲ್ಲಿಯವರೆಗೂ ಎಲ್ಲ ಭಾಷೆಗಳಲ್ಲಿಯೂ ಕಾಣುತ್ತೇವೆ. ಗೇಯತೆ ಪದ್ಯಕ್ಕೇ ಇರುವ ವಿಶೇಷ ಅಲಂಕಾರ. ಆದಿಲ್ಲದೆ ಇದ್ದರೆ ಕೆಲವೊಮ್ಮೆ ಅದು ಮೇಕಪ್ ಇಲ್ಲದ ಅಭಿನೇತ್ರಿಯಂತೆ ಕಾಣುತ್ತದೆ. ಉದಾಹರಣೆಗೆ: 'ಒಳ್ಳೆಯವರಿಗೆ ಒಳ್ಳೆಯವನು, ಚೆನ್ನಾಗಿ ಮಾತನಾಡುವವರಿಗೆ ಮೃದುಭಾಷಿ, ಕೆಟ್ಟವರಿಗೆ ಕೆಟ್ಟವನು ಆದಂಥ ಇವನು ದೇವರಂತಹ ಮನುಷ್ಯ' – ಈ ಸಾಲುಗಳು ಗದ್ಯವಾದರೆ ಇದನ್ನು ಒಬ್ಬ ಕವಿ ಛಂದಸ್ಸಿನ ಬಂಗಾರದ ಪಂಜರದಲ್ಲಿ ಕೂರಿಸಿ ಹೀಗೆ ಹೇಳುತ್ತಾನೆ:

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ ಪೆರನಲ್ಲ

ಅದಕ್ಕೆ ಛಂದಸ್ಸಿನ ಮೂಲಭೂತ ಜ್ಞಾನ ಕವಿಗೆ ಅಗತ್ಯ ಎನ್ನುವುದು ಒಂದು ವಾದವಾದರೆ, ಭಾವ ಮುಖ್ಯ ಎನ್ನುವ ಒಂದು ಪಕ್ಷವಿದೆ. ನಮ್ಮಂಥ ಕವಿಗಳಿಗೆ ಗುರುಸಮಾನರಾಗಿ ಶ್ರೀ ಗಣಪತಿ ಹೆಗಡೆಯವರು ತಮ್ಮ ಲೇಖನವನ್ನು ಪ್ರಸ್ತುತಪಡಿಸಿದ್ದಾರೆ. ಸಂಗ್ರಹದಲ್ಲಿ ಇರಬೇಕಾದ ಲೇಖನವನ್ನು ನೀಡಿದ್ದಕ್ಕೆ ಧನ್ಯವಾದಗಳು.

೨. 'ನಾ ಕಂಡಂತೆ ಕಂಸಾಳೆ' – ಸ್ನೇಹ ಶಶಿಧರ್

ನಾವು ಬ್ಯಾಂಕ್‌ನವರು, ಒಂಥರಾ ಸಂಶೋಧನಾ ವಿಷಯಗಳು ಅನ್ನಿಸ್ತದೆ. ಬ್ಯಾಂಕರ ಅಂದ ತತ್‌ಕ್ಷಣ ಜನರ ತಲೆಗೆ ಬರೋ ಚಿತ್ರಣ ಅಂದರೆ 'ಹೊಟ್ಟೆ ಬಂದಿರೋ, ತಲೆಕೂದಲು ಕಡಿಮೆ ಇರೋ, ಬ್ಯಾಂಕಿಂಗ್ ಬಿಟ್ಟು ಬೇರೆ ಯಾವುದೇ ಹವ್ಯಾಸ ಇಲ್ಲದ, ಟೈಟ್ ಇನ್‌ಸರ್ಟ್ ಮಾಡಿರೋ, ಅಷ್ಟೇ ಟೈಟ್ ಮುಖದ, ನಗದ ಜನಾಂಗ'' ಅಂತ. ಅಂಥಾದ್ದರಲ್ಲಿ ಕಂಸಾಳೆಯಂಥ ದೈಹಿಕವಾಗಿ ಅತ್ಯಂತ ಚುರುಕುತನ ಬೇಡುವ ಹವ್ಯಾಸವನ್ನು ಬೆಳೆಸಿಕೊಂಡು, ಛಲದಿಂದ ಉಳಿಸಿಕೊಂಡು, ಅಲ್ಲಲ್ಲಿ ಪ್ರಸ್ತುತಿಪಡಿಸಿ ನೋಡುಗರಿಂದ ಮನ್ನಣೆಯನ್ನು ಗಳಿಸಿಕೊಂಡ ಅನುಭವ ಮನಸೂರೆಗೊಂಡಿತು.

ಕಂಸಾಳೆಯ ಆರಾಧ್ಯ ಮಲೆ ಮಹದೇಶ್ವರ. ಕೊನೆಯಲ್ಲಿ ಮಹಾದೇಶ್ವರನ ಮುಂದೆ ಕಂಸಾಳೆ ನೃತ್ಯಸೇವೆ ಸಲ್ಲಿಸಿದ ಅನುಭವ ಕಥನ ಭಕ್ತಿ ಸಾರ್ಥಕ ಭಾವಯುತವಾಗಿತ್ತು. ಸ್ನೇಹ ಶಶಿಧರ ಮ್ಯಾಡಮ್‌ರಿಗೆ ಅಭಿನಂದನೆಗಳು. ನಿಮ್ಮ ಕಂಸಾಳೆ ಧ್ವನಿ ಕರ್ನಾಟಕದಾದ್ಯಂತ ಕೇಳುವಂತಾಗಲಿ. ಅದರೊಂದಿಗೆ ನಿಮ್ಮ ಲೇಖನಗಳೂ ಬರುತ್ತಿರಲಿ ಎಂಬ ಶುಭ ಹಾರೈಕೆ.

ಸೀತಾರಾಮ ಸುಧೀರ ಕಟ್ಟಿ – 'ಜಾನಕಿರಾಮ'

'ಜಾನಕಿರಾಮ' ಎಂಬ ಕಾವ್ಯನಾಮ ಹೊಂದಿರುವ ಸೀತಾರಾಮ ಸುಧೀರ ಕಟ್ಟಿ ಅವರು ಪ್ರಸ್ತುತ ಬೆಂಗಳೂರಿನ ಮಲ್ಲೇಶ್ವರದ ನಿವಾಸಿಯಾಗಿದ್ದು, ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉಪ ವ್ಯವಸ್ಥಾಪಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

೨೮, ಫೆಬ್ರವರಿ ೧೯೮೪ರಂದು ಜನಿಸಿದ ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಕನ್ನಡ ಮಾಧ್ಯಮದಿಂದ ಆರಂಭಿಸಿ, ಮಹಾರಾಷ್ಟ್ರದ ಅಕ್ಕಲಕೋಟೆಯಲ್ಲಿ ಸ್ನಾತಕೋತ್ತರ ಇಂಗ್ಲಿಷ್ ಸಾಹಿತ್ಯದ ಅಧ್ಯಯನ ಮಾಡಿದವರು. ಮೂಲತಃ ಮಹಾರಾಷ್ಟ್ರದ ಗಡಿಭಾಗದವರಾದರೂ ಕನ್ನಡದ ಬಗ್ಗೆ ಆಸಕ್ತಿ, ಪ್ರಾವೀಣ್ಯತೆ ಬೆಳೆಸಿಕೊಂಡವರು.

ತನ್ನ ಅಜ್ಜ ಮತ್ತು ತಂದೆಯವರಿಂದ ಸೀತಾರಾಮ ಕಟ್ಟಿಯವರಿಗೆ ಕನ್ನಡ ಕಾವ್ಯ ಲೇಖನದ ಆರಂಭಿಕ ಬುನಾದಿ ದೊರೆಯಿತು. ಆಕಸ್ಮಿಕವಾಗಿ ಕವನವೊಂದರಿಂದ ದೊರೆತದ್ದು "ಜಾನಕಿರಾಮ" ಎಂಬ ಕಾವ್ಯನಾಮ. ಮೊದಮೊದಲು ಇವರ ಬರವಣಿಗೆ ಹಿಂದಿ ಭಾಷೆಯಲ್ಲಿ ಕವನ, ಕಥೆಗಳಿಂದ ಪ್ರಾರಂಭವಾಗಿ ಕ್ರಮೇಣ ಕನ್ನಡದತ್ತ ಹೊರಳಿತು. ಕಾವ್ಯ ಪ್ರಕಾರದ ಬಗ್ಗೆ ಅತೀವ ಆಸಕ್ತಿ ಹೊಂದಿರುವ ಇವರಿಗೆ ಆಧ್ಯಾತ್ಮಿಕ ಗಂಭೀರ ಕವಿತೆಗಳತ್ತ ಹೆಚ್ಚು ಒಲವು. ಇವರು ಮೊಟ್ಟಮೊದಲು ಕಥೆ ಬರೆದದ್ದು ಕಳೆದ ವರ್ಷ ಸಮನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆಯು ಏರ್ಪಡಿಸಿದ್ದ ಕಥಾ ಶ್ರಾವಣ ಅಭಿಯಾನದಲ್ಲಿ.

ಬ್ಯಾಂಕಿನ ಹಲವು ಸಾಹಿತ್ಯಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆದದ್ದು ಮೊದಲ ಪ್ರೋತ್ಸಾಹನ. ಅಂತಾರಾಷ್ಟ್ರೀಯ ಬಹುಭಾಷಾ ಕವಿಗೋಷ್ಠಿಯಲ್ಲಿ ಕನ್ನಡ ಮತ್ತು ಹಿಂದಿ ಕಾವ್ಯ ವಾಚನಕ್ಕೆ ಬಹುಮಾನಗಳು ಸಂದಿವೆ. ಇವರ ಕನ್ನಡದ ಕವನ ಸಂಕಲನ 'ಸ್ವಗತ' ಹಾಗೂ ಹಿಂದಿ ಕವಿತೆಗಳ ಚಿಕ್ಕ ಕೃತಿ **"कहीं फूल खिलकर"** ಪ್ರಕಟಿತವಾಗಿವೆ.

ಸೀತಾರಾಮ ಕಟ್ಟಿಯವರು ತಮ್ಮ ಅಜ್ಜನವರಾದ ಶ್ರೀಧರಾಚಾರ್ಯ ಕಟ್ಟಿಯವರ ಸ್ಮರಣಾರ್ಥ ಕನ್ನಡ ನವ ಕವಿಗಳ ಸಾಹಿತ್ಯ ಪ್ರೋತ್ಸಾಹನಾರ್ಥ ನೀಡಲಾಗುವ "ಕಾವ್ಯಶ್ರೀಧರ" ಪ್ರಶಸ್ತಿಯ ಸ್ಥಾಪಕ ಸದಸ್ಯರೂ ಆಗಿದ್ದಾರೆ.

***

೩. 'ಸಂಗೀತ ಪ್ರೇಮಿ ರಾಜ' – ವಿಠ್ಠಲ ಇಜೇರಿ

ನಮ್ಮ ನಾಡು ಕಥೆಗಳ ನಾಡು. ಇಲ್ಲಿ ನಾವು ಅನೇಕ ವಿಚಿತ್ರ ರಾಜರುಗಳ ಕಥೆ ಕೇಳಿದ್ದೇವೆ. ಅಂತಹದೇ ಒಬ್ಬ ರಾಜನ ಕಥೆ ಇಲ್ಲಿದೆ. "ಸಂಗೀತ ಪ್ರಿಯ ರಾಜ'. ತಾನಲ್ಲದೆ ಇಡೀ ರಾಜ್ಯ ಸಂಗೀತದಲ್ಲೇ ಮಾತನಾಡಬೇಕು, ವ್ಯವಹರಿಸಬೇಕು ಎಂಬ ವಿಚಿತ್ರ ಆಸೆ. ಅದರ ಪರಿಣಾಮ ಕೊನೆಯಲ್ಲಿ ಕಾಣುತ್ತೇವೆ. ಯಾವರೀತಿಯ ಭಾಷೆ ಎಲ್ಲಿ ಬಳಸಬೇಕು, ಯಾವುದು ಸೂಕ್ತ ಎಂಬುದನ್ನು ಸೂಕ್ಷ್ಮವಾಗಿ ತಿಳಿಸುವ ಪುಟ್ಟ ಕಥೆ.

ಇದಕ್ಕೆ ಸಂಬಂಧಪಟ್ಟಂತೆ ನನ್ನ ವಕೀಲ ಗೆಳೆಯರೊಬ್ಬರು ಹೇಳಿದ ಕಥೆ ನೆನಪಾಗುತ್ತದೆ. ವಕೀಲರೊಬ್ಬರು ತಮ್ಮ ಪ್ರಿಯತಮೆಗೆ "I love you " ಎಂದು ಪತ್ರ ಬರೆಯಬೇಕಾಗಿರುತ್ತದೆ. ಆಗ ಅವರಿಗೆ ಬರುವ ವಿಚಾರ 'ಈ ಪತ್ರ ಯಾವತ್ತೂ ಅವಳ ಕೈಗೆ ಸಿಕ್ಕರೂ ಯಾವ ಗೊಂದಲವು ಇರಬಾರದು' ಎಂಬುದು. ಅದಕ್ಕೆ ಅವರು ಬರೆದ ಪತ್ರ ಹೀಗಿತ್ತು– "ಬೆಂಗಳೂರಿನ ಮಲ್ಲೇಶ್ವರದ ಶ್ರೀ ಸುಧೀರ್ ಮತ್ತು ಜಯಶ್ರೀಯವರ ಜೇಷ್ಠ ಪುತ್ರ ಸೀತಾರಾಮ (ಇನ್ನುಮುಂದೆ 'ಪ್ರಥಮ ಪಕ್ಷ'), ಹಾವೇರಿ ತಾಲೂಕಿನ ಶಿಗ್ಗಾಂವ ನಿವಾಸಿ ಶ್ರೀ ರಾಘವೇಂದ್ರ ಮತ್ತು ವಿದ್ಯಾರವರ ಜೇಷ್ಠ ಪುತ್ರಿ ಶೃತಿ (ಇನ್ನು ಮುಂದೆ 'ದ್ವಿತೀಯ ಪಕ್ಷ') ಎಂದು ಉಲ್ಲೇಖಿಗೊಳ್ಳುತ್ತಾರೆ. ಪ್ರಥಮ ಪಕ್ಷವು ದ್ವಿತೀಯ ಪಕ್ಷವನ್ನು ಕಾಯಾ–ಮನಸಾ ಪ್ರೀತಿಸುತ್ತಾರೆ ಎಂದು ನಮೂದಿಸುತ್ತೇವೆ. ಇಂತಹ ಪ್ರೇಮಪತ್ರ ಓದಿದ ಪ್ರಿಯತಮೆಯ ಪರಿಸ್ಥಿತಿ? ನಿಮ್ಮ ನೋಟಿಸಿಗೆ ನನ್ನ ಉತ್ತರ ಅಂತ ಅವಳು ಕಳಿಸದಿದ್ದರೆ ಸರಿಯಾಯಿತು.

ಒಳ್ಳೆಯ ಹಾಡುಗಾರಿಕೆಯೊಂದಿನ ಸುಂದರ ಕಥೆ, ಸುಂದರ ಪ್ರಸ್ತುತಿ. ಅಭಿನಂದನೆಗಳು. ನಿಮ್ಮ ಲೇಖನಗಳು ಹೇಗೆ ನಮ್ಮನ್ನು ರಂಜಿಸುತ್ತಿರಲಿ ಎಂಬ ಶುಭ ಹಾರೈಕೆ.

೪. 'SSLC ಜಸ್ಟ್ ಪಾಸ್' – ಎಂ.ಎಸ್.ಎನ್

"ಮೊದಲೆರಡು ತಿಂಗಳು ಸೇಲ್ಸ್ ಪರ್ಸನ್
ಮತ್ತೆರಡು ತಿಂಗಳು ಮೋಚಿ, ಟೈಲರ್
ಅಲ್ಲಲ್ಲಿ ಆಗಾಗ ಡಾಕ್ಟರ್, ಅಡ್ವೈಸರ್
ಹನ್ನೆರಡು ತಿಂಗಳು ಹೊಟೇಲ್ ಓನರ್
ಆದರೂ ಹೇಳುವರು ನಾನೊಬ್ಬ ಫೆಸಿಲಿಟೇಟರ್, ಹೇಳು ನಾನಾರು?"

– ಹೀಗೆ ನಮ್ಮ ಗೆಳೆಯರಾದ ಶಿಕ್ಷಕರೊಬ್ಬರು ತಮ್ಮ ವೃತ್ತಿಯ ಬಗ್ಗೆಯೇ ಹೇಳುತ್ತಿದ್ದುದು ಬಲು ವ್ಯಂಗ್ಯವಾದರೂ ಕಟು ಸತ್ಯಕ್ಕೆ ದೂರವೇನಲ್ಲ. ಇದನ್ನೇ ತಮ್ಮ ಎಂದಿನ ನಗೆ ಪಂಚ್‌ಗಳ ಮೂಲಕ ಹೇಳಿದ ಎಂಎಸ್‌ಎನ್ ಸರ್ ಬಗ್ಗೆ ಹೇಳಬೇಕೆ? 'ನಮ್ಮ ದೇಶದಲ್ಲಿ ತೆರಿಗೆ ಮತ್ತು ಹೆರಿಗೆ ಜಾಸ್ತಿ ಆಗ್ತಿದೆ' ಎಂಬ ವಾಕ್ಯದಿಂದಲೇ ಷಟ್ಕಾರ ಬಾರಿಸುತ್ತಾರೆ. ಮುಂದೆ ಶಿಕ್ಷಕ ವೃತ್ತಿಯ ಸಮಸ್ಯೆಗಳನ್ನು, ಸರಕಾರದ ಅಸಡ್ಡೆಯನ್ನು ಚುಟುಕು ಸಂಭಾಷಣೆ ಬಳಸಿ ಮುಟ್ಟಿಸುತ್ತಾರೆ. ಮಕ್ಕಳು ರಾಜಕೀಯದ ಚಕ್ರಕ್ಕೆ ಸಿಲುಕದೆ ಮುಕ್ತವಾಗಿ ಕಲಿಯಲಿ ಎಂಬ ಆಶಯಕ್ಕೆ ತಲೆಬಾಗಿ ಅವರನ್ನು ಅಭಿನಂದಿಸಬಯಸುತ್ತೇನೆ. ಧನ್ಯವಾದಗಳು ಸಾರ್.

೫. 'ಗಜಲ್' – ಸುಜಾತಾ ರವೀಶ್

"ಜಿಂದಗಿ ಕೆ ಸಫರ್ ಮೇ ಗುಜರ ಜಾತೆ ಹೈ ಓ ಮಕಾಂ" ಎಂಬ ಒಂದು ಪ್ರಸಿದ್ಧ ಹಾಡಿದೆ. ಕಿಶೋರ್ ಕುಮಾರ್ ಧ್ವನಿಯಲ್ಲಿ ಕೇಳುವುದೇ ಒಂದು ಸಂಭ್ರಮ. ಸುಜಾತ ಮ್ಯಾಡಮ್‌ರವರ ಈ ಕವನ ನನಗೆ ಆ ಹಾಡಿನಲ್ಲಿಯ ಒಂದು ಸಾಲನ್ನು ಪದೇ ಪದೇ ನೆನಪಿಸುತ್ತಿತ್ತು. "ದೋಸತೊ ಶಕ ದೋಸ್ತಿ ಕಾ ದೂಷಮನ ಹೈ, ಅಪ್ನೆ ದಿಲ್ ಮೇ ಇಸೆ ಘರ್ ಬನಾನೇ ನ ದೊ".

ಅನುಮಾನ, ಶಂಕೆ ಇವೆಲ್ಲ ಪ್ರೀತಿಗೆ ಹತ್ತುವ ಗೆದ್ದಲು ಹುಳ. ಪ್ರೇಮರಥ ಚಕ್ರಗಳನ್ನು ಶಿಥಿಲಗೊಳಿಸಿ ಉರುಳಿಸಬಲ್ಲವು. ಇದನ್ನೇ ಗಜಲ್ ರೂಪದಲ್ಲಿ ನಿರೂಪಿಸಿದ್ದಾರೆ. ಸುಂದರವಾದ ಕೃತಿ. ನಿಮ್ಮ ಕವನಗಳು ಹೀಗೆ ಎಲ್ಲರನ್ನೂ ಸದಾ ರಂಜಿಸುತ್ತ ನೀತಿಗಳನ್ನು ಹೇಳುತ್ತಿರಲಿ ಎಂದು ಹಾರೈಸುವೆ. ಧನ್ಯವಾದಗಳು.

೬. 'ನೋಡಿದ ಊರಿನ ನೋಡದ ಸ್ಥಳಗಳು' – ಕೆ.ಎನ್.ಮಹಾಬಲ

ಪ್ರವಾಸಕ್ಕೆ ಹೋಗಿ ಬಂದ ಮೇಲೆ ಪುಕ್ಕಟೆ ಸಲಹೆಗಳ ಮಹಾಪೂರವೇ ಹರಿದುಬರುತ್ತದೆ. "ಏ, ನೀನು ಅಲ್ಲಿ ಹೋಗಲಿಲ್ಲವೇ, ಅದೇ ಮುಖ್ಯ ಜಾಗ ಇತ್ತಲ್ಲೋ, ನೀ ಹಿಂಗ ಮಾಡಬಹುದಿತ್ತು ನೊಡೀಗ.." ಅಂತ ನಿಮ್ಮ ಪ್ರವಾಸದ ಅನ್ನವನ್ನು ಹಳಸಿ ಹೋಗುವಂತೆ ಮಾಡುವವರು ಸಿಗೋದು ಸರ್ವೇ ಸಾಮಾನ್ಯ. "ನೀವು ಪ್ಯಾಕೇಜ್ ಟೂರ್ ಹೋಗಿದ್ರಾ? ಅಯ್ಯೋ, ಅದು ಕಾಸ್ಟ್ಲೀ ಕಣ್ರೀ.. ನಿಮ್ಮನ್ನ ಸರೀ ಬೋಳಸಿರತಾರೆ ಮತ್ತೆ" ಅಂತ ಒಬ್ರು ನನ್ನನ್ನ ನೋಡಿ ಕೇಳದಾಗ ನಮ್ಮ ಪತ್ನಿ ನನ್ನ ತಲೆಯನ್ನೊಮ್ಮೆ ನೋಡಿದ್ದು ಒಂದು ನೆನಪು. "ನೀವು ಗೋಕರ್ಣಕ್ಕೆ ಹೋಗಿದ್ರಿ ಅಲ್ಲ. ಅಲ್ಲೊಂದು ಹೊಟೇಲ್ ಇದೆ. ಗುರುಪ್ರಸಾದ್ ಅಂತ. ನೀವು ಅಲ್ಲಿ ಊಟ ಮಾಡಬೇಕಿತ್ತು. ಮಾಡಲಿಲ್ವ? ಅಯ್ಯೋ, ನೀವು ಮಿಸ್ ಮಾಡಕೊಂಡರಿ.. ಅವರ ಸಾಂಬಾರ್ ಇದೆ ಅಲ್ಲ.. ಕೈ ವಾಸನೆ ಎರಡು ದಿನ ಆದರೂ ಹೋಗಲ್ಲ ಗೊತ್ತಾ, ಛೇ.." ಅಂದು ಸಂಪೂರ್ಣ ಗೋಕರ್ಣ ಪ್ರವಾಸದ ಉದ್ದೇಶಾನೆ ವ್ಯರ್ಥ ಅಂತ ಹೇಳಿಬಿಡತಾರೆ. ಮೇಲೆ ಛೇ ಬೇರೆ.

ಹೀಗೆ ಪ್ರವಾಸದ ನಂತರ ಅದಕ್ಕೆ ಸ್ಥಿತಪ್ರಜ್ಞ ಸ್ಥಿತಿ ಅಗತ್ಯ ಅಂತ ಹೇಳುತ್ತಾರೆ ಲೇಖಕರು. ಇಂತಹ ಪ್ರಸಂಗಗಳನ್ನು ಲೇಖಕರು ಸಾಕಷ್ಟು ಎದುರಿಸಿದಂತೆ ಕಾಣುತ್ತದೆ. ಅವರು ಅವುಗಳನ್ನು ಸೂಕ್ಷ್ಮವಾಗಿ ಇಲ್ಲಿ ಉಣಬಡಿಸಿದ್ದಾರೆ.

ಮಹಾಬಲ ಸರ್‌ರವರ ಹಾಸ್ಯ ಮಿಶ್ರಿತ ಲೇಖನ ನನಗೆ ಮರಾಠಿ ಹಾಸ್ಯ ಲೇಖಕ ಪು.ಲ. ದೇಶಪಾಂಡೆಯವರನ್ನು ನೆನಪಿಸಿತು. ಧನ್ಯವಾದಗಳು.

೭. 'ನಿರಾಕರಣ' – ಸರಸ್ವತಿ ನಟರಾಜ್

ಈ ಕಥೆಯನ್ನು ಕೇಳಿದಾಗ ನನಗೆ, ನನಗಾಗಿ ಹೆಣ್ಣು ನೋಡುವಾಗ ನನ್ನ ಅಜ್ಜ ಹೇಳಿದ ಮಾತು ನೆನಪಾಗುತ್ತದೆ. "ನಿನಗೆ ಐಶ್ವರ್ಯಾ ರೈ ಬೇಕಂದರ, ನಿಮ್ಮಪ್ಪ ಅಮಿತಾಭ್ ಬಚ್ಚನ್ ಇರಬೇಕು" ಅಂತ. ನಿನ್ನ ಸ್ತರವನ್ನು ಅರಿತು ಅವಳನ್ನು ಅಳೆ ಎನ್ನಲು ಹೇಳಿದ ಮಾತಿದು. ಗಂಡು, ಗಂಡಿನ ಮನೆಯವರು ಏನೇನೋ ನೋಡಿ, ನೋಡದೆ ಹೆಣ್ಣನ್ನು ನಿರಾಕರಿಸುವ ಕಥೆಗಳು ನೂರಾರು ಕೇಳಸಿಗುತ್ತವೆ.

ಅದೇ ರೀತಿ ಸತತ ನಿರಾಕರಣ ಅನುಭವಿಸಿರುವ ಆಶಾಳ ಕಥೆ ಇಲ್ಲಿದೆ. ಹೆಣ್ಣಿನ, ಹೆಣ್ಣಿನ ಮನೆಯವರ ತುಡಿತಗಳ ಚಿತ್ರಣ ಇಲ್ಲಿದೆ. ಆದರೆ ಒಪ್ಪಿಕೊಂಡ ಗಂಡು ಸಾಮಾನ್ಯ ಪರಿಸ್ಥಿತಿಯಲ್ಲಿ ನನ್ನನ್ನು ಒಪ್ಪುತ್ತಿದ್ದನೇ? ಎಂದು ಪ್ರಶ್ನಿಸುವ ಆಶಾ ಆಪ್ತಳಾಗುತ್ತಾಳೆ. ಬೇರೆಡೆ ಅವಳ ಮದುವೆ ಆದದ್ದಕ್ಕೆ ಕಥೆ ಮುಗಿಯುತ್ತದೆ. ಸೂಕ್ಷ್ಮ ಸಂವೇದನೆಯ ಹೆಣ್ಣು ಮನಸ್ಸಿನ ಕಥೆ ನೀಡಿದ್ದಕ್ಕೆ ಧನ್ಯವಾದಗಳು. ಇಂತಹ ಕಥೆಗಳು ನಿಮ್ಮಿಂದ ಬರುತ್ತಿರಲಿ ನಾವು ಓದುತ್ತಿರುತ್ತೇವೆ. ಧನ್ಯವಾದಗಳು.

೮. 'ಅಲ್ಟ್ರಾ ಮಾಡ್ರನ್' – ಮಾಧುರಿ ಕೃಷ್ಣ

ತಮ್ಮನ ಮಗನಿಗೆ ಹೆಣ್ಣು ಹುಡುಕುವ ಅತ್ತೆಯ ಪಾಡು ಈ ಕಥೆಯ ಹೂರಣ. ತೆಳು ಹಾಸ್ಯದೊಂದಿಗೆ ಪೂರ್ಣ ಕಥನ ಸಾಗುತ್ತದೆ. ಕೊನೆಯಲ್ಲಿ ವಿಚಿತ್ರವಾದ ಸಂಭಾಷಣೆ ಮಾಡಿ ಅಳಿಯ ಸಂಬಂಧವನ್ನು ಹುಸಿಗೊಳಿಸುವಲ್ಲಿ ಕಥನ

ಮುಗಿಯುತ್ತದೆ. ಚುಟುಕು ಸಂಭಾಷಣೆಗಳೇ ಇಲ್ಲಿನ ಶಕ್ತಿ. ಸರಳ ಭಾಷಾಶೈಲಿಯಿಂದ ಮನಗೆಲ್ಲುತ್ತದೆ. ಮಾಧುರಿ ಮ್ಯಾಡಮ್ ರವರಿಗೆ ಅಭಿನಂದನೆಗಳು.

೯. 'ಮಿಸ್ಟರ್ ಟಿಮ್' – ನಾಗರತ್ನ ಚಂದ್ರಶೇಖರ್

ಮಿಸ್ಟರ್ ಟಿಮ್ ಎಂಬ ಬೀದಿ ನಾಯಿಯ ಕಥೆಯೊಂದಿಗೆ ಪ್ರಾರಂಭವಾಗಿ ಅಮೆರಿಕದಲ್ಲಿನ ನಾಯಿಗಳ ಜೊತೆಯ ಸಹವಾಸ, ಹೊಂದಾಣಿಕೆ ಇದನ್ನು ಲೇಖನ ಹೇಳುತ್ತದೆ. ಅಲ್ಲಿಂದ ಬಂದಾಗ ಟಿಮ್ ಕಾಣದಿರುವುದು ಮತ್ತೆ ಸಿಕ್ಕುವುದು ಇದೆಲ್ಲ ಸರಾಗವಾಗಿ ಸಾಗಿ ಕಥೆ ಕೊನೆಗೊಳ್ಳುತ್ತದೆ. ಸರಳ ಕಥಾನಕದ ಲೇಖನ. ಶ್ವಾನಪ್ರಿಯರಿಗೆ ಇನ್ನೂ ಹೆಚ್ಚಾಗಿ ಹತ್ತಿರವಾಗ ಬಲ್ಲುದೆನೋ ಗೊತ್ತಿಲ್ಲ. ಲೇಖನಕ್ಕಾಗಿ ಅಭಿನಂದನೆಗಳು ನಾಗರತ್ನ ಮ್ಯಾಡಮ್. ನೀವೀದ್ದಾಗಲೇ ನಿಮ್ಮ ಟಾಮ್ನನ್ನು ನೋಡಲು ಬರುವದು ಒಳ್ಳೆಯದು. ಇಲ್ಲವಾದರೆ ಅವನು ನಮ್ಮ ಬೆನ್ನಟ್ಟಿ ನೀವು ನಮ್ಮನ್ನು ನೋಡಲು ಬರುವಂತಾಗಬಾರದು.

೧೦. 'ಸಹಿಷ್ಣುತೆ' (ಕವನ) – ಸಿಂಧು ಹರಿಥಸ್

ಶಿವನದು ಒಂದು ಕೂಡು ಕುಟುಂಬ. ಎಲ್ಲ ವಿಪರೀತ ಸ್ವಭಾವಗಳು ಇದ್ದರೂ ಒಂದೆಡೆ ಸುಖವಾಗಿ ಇರುವ ಪರಿವಾರ. ಇಲಿ–ಹಾವು, ಹಾವು–ನವಿಲು, ಆಕಳು–ಹುಲಿ, ತಲೆ ಮೇಲೊಬ್ಬಳು–ತೊಡೆ ಮೇಲೊಬ್ಬಳು ಎಲ್ಲವನ್ನೂ ಸರಿದೂಗಿಸಿಕೊಂಡು ಹೋಗುವ ಶಿವ, ಯಶಸ್ವಿ ಗೃಹಸ್ಥ. ಮನೆಯಲ್ಲಿನ ವಿಚಿತ್ರ ಮನಸ್ಸುಗಳು ಒಂದನ್ನೊಂದು ಘರ್ಷಿಸುತ್ತಲೇ ಇರುತ್ತವೆ. ಅದರಿಂದಾಗುವ ಸಮಸ್ಯೆಗಳಿಗೆ ಸಮಯ ಕೊಟ್ಟರೆ ತಾವೇ ಸರಿಯಾಗುತ್ತವೆ. ಅದನ್ನು ಒಬ್ಬ ಗೃಹಸ್ಥ ನೀಡಬೇಕು. ಎಲ್ಲಕ್ಕೂ ಪ್ರತಿಕ್ರಿಯೆ ಕೊಡಬೇಕಿಲ್ಲ. ಅದಕ್ಕೆ ಶಿವನ ಹೆಸರು "ಕಾಲ" ಎಂದು ಇರಬಹುದೇ ?

ಶಿವನ ವಿಚಿತ್ರ ಕುಟುಂಬದ ಬಗೆಗಿನ ಸರಳ ಕವನವನ್ನು ನೀಡಿದ್ದಕ್ಕೆ ಸಿಂಧು ಮ್ಯಾಡಮ್‌ರಿಗೆ ಧನ್ಯವಾದಗಳು. ಗಾಯನವೂ ಸುಂದರವಾಗಿತ್ತು. ಇನ್ನೂ ಇಂತಹ ಕವನಗಳು ನಮಗೆ ರಸಾಸ್ವಾದಕ್ಕೆ ದೊರೆಯುತ್ತಿರಲಿ ಎಂದು ಹಾರೈಸುವೆ.

೧೧. 'ಗುರು ಪೂರ್ಣಿಮೆ' – ರೇಣುಕಾ ದೇಸಾಯಿ

ಗುರುಪೂರ್ಣಿಮೆ ಆಚರಣೆಯ ಹಿಂದೆ ಇರುವ ಪೌರಾಣಿಕ ಹಿನ್ನಲೆ ಮತ್ತು ಇದರ ಪ್ರಭಾವ ಸಮಾಜದಲ್ಲಿ ಹೇಗೆ ಆಗುತ್ತದೆ ಎನ್ನುವ ಒಂದು ತುಲನಾತ್ಮಕ ನೋಟದ ಲೇಖನ. ವೇದವ್ಯಾಸರ ಪರಂಪರೆ ಮತ್ತು ಮಹತಿಯನ್ನು ತಿಳಿಸುತ್ತಾ ಗುರು, ಗುರುವಿನ ಮಹಿಮೆ, ಗುರುವಿನ ಅಗತ್ಯ, ಗುರುವಿನ ಕರ್ತವ್ಯ ಎಲ್ಲವನ್ನೂ ತಿಳಿಸುತ್ತಾರೆ ಲೇಖಕರು.

ರಾಮ–ವಿಶ್ವಾಮಿತ್ರ , ಕೃಷ್ಣ–ಸಾಂದೀಪನಿ ಸಂಬಂಧಗಳ ಮೂಲಕ ಗುರುವಿನಿಂದ ಪಡೆದ ಪಾಠದಿಂದ ಉನ್ನತ ಸಾಮಾಜಿಕ ಪಾಠಗಳ ದಾಟಿಕೆಯಾಗುವುದನ್ನು ತಿಳಿಸುತ್ತಾರೆ. ಅದಕ್ಕೆ ಅನ್ನಿಸುತ್ತೆ –

> **ಧ್ಯಾನಮೂಲಂ ಗುರುರ್ ಮೂರ್ತಿಹಿ. ಪೂಜಾಮೂಲಂ ಗುರೋಃ ಪದಮ್**
> **ಮಂತ್ರಮೂಲಂ ಗುರೋರ್ ವಾಕ್ಯಮ್. ಮೋಕ್ಷ ಮೂಲಂ ಗುರು ಕೃಪಾ.**

ಅನ್ನುವುದು. ಗುರುಪೂರ್ಣಿಮೆಯ ಮಹಾತೀಯನ್ನು ತಿಳಿಸಿದ ರೇಣುಕಾ ದೇಸಾಯಿ ಮ್ಯಾಡಮ್ ಅವರಿಗೆ ಧನ್ಯವಾದಗಳು.

೧೨. "ಪ್ರೊ॥ ಕ.ರಾ.ಮೋಹನ್ ಅವರ "ಹೆಂಡತಿಯ ವಯಸ್ಸು" (ಪುಸ್ತಕ ಪರಿಚಯ) – ಜಿ.ವಿ.ಅರುಣ

" ಹೆಂಡತಿಯ ವಯಸ್ಸು " ಶೀರ್ಷಿಕೆಯೇ ಪಂಚಿಂಗ್ ಆಗಿದೆ. ಇದೊಂದು ಹಾಸ್ಯ ಕಥನಗಳ ಹೊತ್ತಿಗೆ ಎಂದು ಲೇಖಕರು ಉಲ್ಲೇಖಿಸಿದ್ದಾರೆ. ಪ್ರೊ ಕ.ರಾ.ಮೋಹನ್ ಅವರ ಕನ್ನಡ ಪ್ರೇಮವನ್ನು ವರ್ಣಿಸುತ್ತಾ ಹೋಗುವ ಲೇಖಕರು ಮುಂದೆ

ಮೋಹನ್ ರವರ ಹಾಸ್ಯ ಲೇಖನಗಳನ್ನು ಸೋದಾಹರಣೆ ತಿಳಿಸುತ್ತಾರೆ. ತಮ್ಮ ಮೇಲೆ ತಾವು ಮಾಡುವ ಹಾಸ್ಯ ಉತ್ತಮ ಹಾಸ್ಯ. ಹೆಂಡತಿಯ ಮೇಲೆ ಮಾಡುವ ಹಾಸ್ಯಕ್ಕೆ ಬಹಳ ಧೈರ್ಯ ಬೇಕು. ಇದನ್ನು ಮಾಡಿದ್ದಾರೆ ಪ್ರೊ ಮೋಹನ್ ರವರು.

ಈ ಹೊತ್ತಿಗೆಯನ್ನು ಪಡೆದು ದಿನನಿತ್ಯ ಬರುವ ಯೋಚನೆಗಳಿಗೆ ತಿರುವುಗಳನ್ನು ಕೊಟ್ಟು ನಾವು ಆರಾಮವಾಗಿ ಇರಲು ಯತ್ನಿಸೋಣ. ಹಾಸ್ಯ ಲೇಖಕರು ಕನ್ನಡದ ಮಟ್ಟಿಗೆ ಕಡಿಮೆಯೇ. ಹಾಗಾಗಿ ಇಂತಹ ಪುಸ್ತಕಗಳನ್ನು ಓದೋಣ. ಪುಸ್ತಕವನ್ನು ಪರಿಚಯಿಸಿದ್ದಕ್ಕೆ ಅರುಣ್ ಸರ್ ರವರಿಗೆ ಧನ್ಯವಾದಗಳು.

೧೩. 'ಶಾಲೆಗೆ ಕಳಿಸಪ್ಪಾ' (ಕವನ) – ಕೆ.ಆರ್.ವೆಂಕಟೇಶ್

ಕವನವನ್ನು ಬರೆಯುವುದೇ ಕಠಿಣ. ಅದರಲ್ಲಿ ಸಂಭಾಷಣಾತ್ಮಕ ಕವನ ಇನ್ನೂ ಕಠಿಣ. ಇದನ್ನು ನಮಗೆಲ್ಲ ಮಾಡಿ ತೋರಿಸಿದ್ದಾರೆ ಕೆ.ಆರ್.ವೆಂಕಟೇಶ್ ಸರ್. ತಂದೆ ಮಗನ ಸಂಭಾಷಣೆಯ ಮೂಲಕ ಶಾಲೆಗೆ ಹೋಗಿ ವಿದ್ಯೆ ಕಲಿಯುವುದು ಎಷ್ಟು ಮುಖ್ಯ ಎಂಬುದನ್ನು ತಿಳಿಸಿದ್ದಾರೆ. 'ಕೂಳಿಗೆ ಕೂಲಿ ಬೇಕು ಅಕ್ಷರದಿಂದ ಏನಾಗುವುದು?' ಎನ್ನುವ ಅಪ್ಪ, 'ಬಡವರಾಗಿ ಹುಟ್ಟಿ ಬಡವರಾಗಿಯೇ ಸಾಯುವುದು ಬೇಡ' ಎನ್ನುವ ಮಗನ ಸಂಭಾಷಣೆ ಇಲ್ಲಿದೆ. ಶಾಲೆಗಳಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಇದನ್ನು ಬಳಸಬಹುದು. 'ಎಲ್ಲೂ ಹೋಗಲ್ಲ..' ಎಂಬ ಸಿನಿಹಾಡಿನ ಧಾಟಿಯಲ್ಲಿ ರಾಗ ಸಹಿತ ಪ್ರಸ್ತುತ ಪಡಿಸಿದ ಅವರಿಗೆ ಅಭಿನಂದನೆಗಳು.

೧೪. 'ಮತ್ತೆ ಕರೆ ಬಂದಿದೆ' ಮತ್ತು 'ಋಣ' (ಎರಡು ಕವನಗಳು) – ಮಾಲತಿ ಶ್ರೀನಿವಾಸನ್

ಮಾಲತಿ ಮ್ಯಾಡಮ್ ಅವರ ಆಶುಕವಿತ್ವ ತೋರುವ ಕವನಗಳಿವು. ಮೊದಲನೆಯ ಕವನ 'ಮತ್ತೆ ಕರೆ ಬಂದಿತು'. ದಾಸೋಹದ ಕರೆ ಅದು. ಎಲ್ಲರಿಗೂ ಬರುವ ಸಾಮಾನ್ಯ ಭಾವಗಳನ್ನು ಚಿತ್ರಿಸಿದ್ದಾರೆ. ಹಳೇ ಪದ್ಧತಿಯಲ್ಲಿ, ಹೊಸ ಅಧ್ಯಕ್ಷರೊಂದಿಗೆ, ಹಳೇ ಜನರೆಲ್ಲ, ಹೊಸ ದಾಸೋಹಕ್ಕೆ ಕರೆದಿದ್ದಾರೆ ಎನ್ನುತ್ತಾರೆ. ಕಥೆ ಕವನಗಳನ್ನು ಕೇಳುವ ಹೇಳುವ ತಿಂಗಳ ಹಬ್ಬವನ್ನು ಸಂಭ್ರಮಿಸುತ್ತಾರೆ ಇಲ್ಲಿ.

ಇನ್ನೊಂದು ಕವನ 'ಋಣ'. ವಿವಿಧ ಋಣಗಳ ಬಗ್ಗೆ ತಿಳಿಸುತ್ತಾ, ತಿಳಿಸುತ್ತಾ ಇವೆಲ್ಲವನ್ನೂ ಋಣದ ವ್ಯವಹಾರ ಎಂದೇಕೆ ಅನ್ನಬೇಕು. ಆ ಹೊರೆಯನ್ನು ಏಕೆ ಹೊತ್ತು ಸಾಗಬೇಕು ಎನ್ನುತ್ತಾರೆ. ಅದನ್ನು ಸಹಜವಾಗಿ ಪ್ರೀತಿ ವಿಶ್ವಾಸ ಏನಬಾರದೆ ಎನ್ನುತ್ತಾರೆ ಕವಯಿತ್ರಿ. ಅವರೇ ಹೇಳಿದಂತೆ ಗದ್ಯರೂಪಿ ಪದ್ಯ. ಧನ್ಯವಾದಗಳು ಮ್ಯಾಡಮ್. ಮತ್ತೆ ಮ್ಯಾಡಮ್, ಓಲ್ಡ್ ಈಸ್ ಆಲ್ವೇಸ್ ಗೋಲ್ಡ್. ಹಳೆ ಮೋಡಲ್ ಗಾಡಿ ಚೆನ್ನಾಗೆ ಓಡುತ್ತೆ. ನಮಗೆಲ್ಲ ಹಳೆ ಮೋಡಲ್ ಗಾಡಿ ತುಂಬಾ ಇಷ್ಟ.

೧೫. 'ಸಿನಿವಾಲಿ' – ಶೃತಿ ಕಟ್ಟಿ

ವೇದಕಾಲದಿಂದಲೂ ಮನುಷ್ಯ ತನ್ನ ತನ್ನ ಮಿತಿಯನ್ನು ಮೀರಿದ ಶಕ್ತಿಗಳನ್ನು, ವಿಚಾರಗಳನ್ನು ದೇವರಾಗಿಸಿದ್ದಾನೆ. ಮಿತಿ ಮೀರಿದ ವಡವಾಗ್ನಿ, ದಡ ಮೀರಿ ಬರುವ ಜಲ, ಗತಿ ಮೀರಿದ ವಾಯು ಹೀಗೆ. ಹಾಗೆಯೇ ಒಂದೆಡೆ ನೆಲೆಸುವಿಕೆ ಪ್ರಾರಂಭವಾದ ಮೇಲೆ ತನ್ನ ಸಂಗಾತಿಯ ಅಸಹ್ಯ ವೇದನೆ, ರಕ್ತ ಸಿಕ್ತ ಮಗುವಿನ ಜನನ ಎಲ್ಲವನ್ನೂ ಕಂಡ ಮನುಜ ಅದಕ್ಕೂ ಒಂದು ದೇವತಾ ಶಕ್ತಿಯನ್ನು ಕಲ್ಪಿಸಿರಬಹುದೇ? ಅದೇ ಸಿನಿವಾಲಿ. ಅವಳ ಉಲ್ಲೇಖ ಋಗ್ವೇದದಲ್ಲಿ ಕಾಣುತ್ತೇವೆ. ಹತ್ತನೇ ಮಂಡಲದಲ್ಲಿ ಅಧ್ಯಾಯ ಎಂಟರ ಋಕ್ ಸಂಖ್ಯೆ ಮೂರರಲ್ಲಿ ಉಲ್ಲೇಖಿಸಲಾಗಿದೆ. ವಿಮರ್ಶೆ ಕಠಿಣ ಕಾರ್ಯ. ಅದರಲ್ಲೂ ಧರ್ಮ ಪತ್ನಿಯ ವಿಮರ್ಶೆ ಇನ್ನೂ ಕಠಿಣ. ಇರಲಿ. ಶೃತಿಯವರು ಈ ವಿಷಯ ಆರಿಸಿದ್ದುದು ಖುಷಿಯಾಯಿತು. ಅವರು ಮಂಡಿಸಿದ ರೀತಿ ಉತ್ತಮವಾಗಿದೆ. ವಿವಿಧ ದೇಶಗಳಲ್ಲಿನ ಪರ್ಯಾಯ ದೇವತೆಗಳ ಉಲ್ಲೇಖವನ್ನು ನೀಡಿದ್ದಾರೆ. ಅವರಿಗೆ ಅಭಿನಂದನೆಗಳು. ಇವರಿಂದ ವೇದಿಕೆಯಲ್ಲಿ ಇನ್ನೂ ಅನೇಕ ಲೇಖನಗಳು ಬರಲಿ ಎಂದು ಹಾರೈಸುವೆ.

೧೬. 'ಮಕ್ಕಳು ತುಂಟರಲ್ಲ ಪ್ರಯೋಗಶೀಲರು' – ಶೀಲಾ ಅರಕಲಗೂಡು

ಮಕ್ಕಳು ಈ ಜಗತ್ತಿಗೆ ಹೊಸಬರು. ಎಲ್ಲವೂ ಅವರಿಗೆ ಹೊಸದು. ಮಾಡಿ ಕಲಿಯುವ ಹುಚ್ಚು ಅವರಿಗೆ. ಕೆಲವರು ಅದನ್ನು ಬಾಲಲೀಲೆ ಎಂದರೆ. ಇನ್ನು ಕೆಲವರು ಅದನ್ನು ಕಿರಿಕಿರಿ ಎನ್ನುತ್ತಾರೆ. ಇದನ್ನೇ ಶೀಲಾ ಮ್ಯಾಡಮ್ ತಮ್ಮದೇ ಶೈಲಿಯಲ್ಲಿ ಇಲ್ಲಿ ಹೇಳಿದ್ದಾರೆ. ಮಕ್ಕಳನ್ನು ಗದರಿ ಅವರ ಬುದ್ಧಿಯ ವೇಗವನ್ನು ಅಲ್ಲಿಯೇ ಮೋಟಕುಗೊಳಿಸದೇ ಸರಿಯಾದ ದಾರಿಯಲ್ಲಿ ಹೊರಳಿಸಿದರೆ ಅವರ ಬೆಳವಣಿಗೆಗೆ ಸಹಾಯವಾಗುತ್ತದೆ ಎಂಬುದು ಅವರ ಅಭಿಪ್ರಾಯ. ಹಾಗೆ ಕಥೆಗಳನ್ನು ಹೇಳುವ ಕೇಳುವ ಸಮಯವೆಲ್ಲಿದೆ? ಅಜ್ಜಿಯ ಕಥೆ ಕಥೆಯಾಗಿಬಿಟ್ಟಿದೆ ಈಗ. ಕಥೆಗಳನ್ನು ಹೇಳಿದರೆ ಕಠಿಣ ನೀತಿಪಾಠಗಳನ್ನು ಸರಳವಾಗಿ ಕಲಿಸಬಹುದು ಎಂಬುದು ಲೇಖಕಿಯ ಅಂಬೋಣ. ಉಪಯುಕ್ತ ಲೇಖನ ಧನ್ಯವಾದಗಳು.

೧೭. 'ರೇಜರ್ ಕ್ಲಾಮ್' – ರಾಧಿಕಾ ವಿ. ಗುಜ್ಜರ್

ಕನ್ನಡದಲ್ಲಿ ಜೀವಶಾಸ್ತ್ರೀಯ ಲೇಖನ ಓದಿದಂತಿತ್ತು ರಾಧಿಕಾ ಮೇಡಂ ಪ್ರಸ್ತುತಿ. ರೇಜರ ಕ್ಲಾಂ ಎಂಬ ದ್ವಿಕವಾಟ ಜೀವಿಗಳ ವಿವರಣೆ ಶಾಸ್ತ್ರೀಯವಾಗಿತ್ತು. ಇಂತಹ ಲೇಖನಗಳನ್ನು ಬರೆಯುವರು ಕನ್ನಡದಲ್ಲಿ ವಿರಳವೇ ಎನ್ನಬಹುದು. ಧನ್ಯವಾದಗಳು. ಹಾಗೆಯೇ ಒಂದು ಆರೋಗ್ಯ ಸಲಹೆಯೂ ಇದೆ. ಸತತ 12 ತಿಂಗಳುಗಳವರೆಗೆ ಪ್ರತಿ ತಿಂಗಳು 15 ರೇಜರ್ ಕ್ಲಾಮ್‌ಗಳಿಗಿಂತ ಹೆಚ್ಚು ತಿನ್ನಬಾರದು ಎಂದು ಆರೋಗ್ಯ ಇಲಾಖೆ ಶಿಫಾರಸು ಮಾಡುತ್ತದೆ. ಈ ಸಲಹೆಯು ಎಲ್ಲರಿಗೂ ಅನ್ವಯಿಸುತ್ತದೆ, ವಿಶೇಷವಾಗಿ ಗರ್ಭಿಣಿ ಅಥವಾ ಗರ್ಭಿಣಿಯಾಗಬಹುದಾದ ಮಹಿಳೆಯರು, ಶುಶ್ರೂಷಾ ತಾಯಂದಿರು, ಮಕ್ಕಳು, ವೃದ್ಧರು ಎಲ್ಲರಿಗೂ.

೧೮. 'ಮರಳುಗಾಡಿನ ಪುಟ್ಟ ಹಳ್ಳಿ ಪೋಖ್ರಾನ್' – ಜಿ.ವಿ.ನಿರ್ಮಲ

"ಪೋಕರನ್" (पोकरण) ಎಂಬ ಪದವು ರಾಜಸ್ಥಾನಿಯಲ್ಲಿ "ಐದು ಉಪ್ಪು-ಶ್ರೇಣಿಗಳಿಂದ ಸುತ್ತುವರಿದ ಸ್ಥಳ" ಎಂದರ್ಥ. ಭಾರತದ ರಾಜಸ್ಥಾನ ರಾಜ್ಯದ ಜೈಸಲ್ಮೇರ್ ಜಿಲ್ಲೆಯ ಜೈಸಲ್ಮೇರ್ ನಗರದ ಪೂರ್ವಕ್ಕೆ 112 ಕಿಮೀ ದೂರದಲ್ಲಿರುವ ಒಂದು ಪಟ್ಟಣ ಮತ್ತು ಪುರಸಭೆಯಾಗಿದೆ. ಇದು ಥಾರ್ ಮರುಭೂಮಿ ಪ್ರದೇಶದಲ್ಲಿದೆ. ಇಂತಹ ಪೊಖರಾನ್ ಬಗ್ಗೆ ತಿಳಿಸುವ ಲೇಖನವನ್ನು ನಿರ್ಮಲ ಮ್ಯಾಡಮ್ ನೀಡಿದ್ದಾರೆ. ಪೊಖರಾನ್ ನಲ್ಲಿ ನಡೆದ ಅಣುಶಕ್ತಿ ಪರೀಕ್ಷೆ, ಆ ಸಮಯದ ರಾಜಕೀಯ ಒತ್ತಡ ಮತ್ತು ವಿಜ್ಞಾನಿಗಳ ಸಾಧನೆ ಇಲ್ಲಿ ವರ್ಣಿತವಾಗಿದೆ. 'ಸ್ಮೈಲಿಂಗ್ ಬುದ್ಧ' 18 ಮೇ 1974 ರಂದು ಭಾರತದ ಮೊದಲ ಯಶಸ್ವಿ ಪರಮಾಣು ಶಸ್ತ್ರಾಸ್ತ್ರ ಪರೀಕ್ಷೆಯ ಕೋಡ್ ನೇಮ್ ಆಗಿತ್ತು. ಭಾರತೀಯತೆಯ ಭಾವನೆಗೆ ಕಿರೀಟಪ್ರಾಯ ಘಟನಾವಳಿಗಳ ಬಗ್ಗೆ ಲೇಖನವು ತಿಳಿಸುತ್ತದೆ. ಲೇಖನ ವಿವರವಾಗಿ ಸರಳವಾಗಿದೆ. ಧನ್ಯವಾದಗಳು.

೧೯. 'ಊಹಾಪೋಹಗಳೆಂಬ ಸುಳಿ' – ಕಮಲಾಕ್ಷಿ ಸಿ.ಆರ್.

'ಗಾಸಿಪ್' ಇದು ಸಮೂಹದ ಅತ್ಯಂತ ಹಳೆಯ ರೋಗ. ಎಲ್ಲ ಮಾತನಾಡಿ "ನಮಗ ಯಾಕ್ ಬೇಕ್ರಿ?" ಅನ್ನೋದು ಗಾಸಿಪ್‌ನ ಪಲ್ಲವಿ ಇದ್ದಂತೆ. ಸತ್ಯವೋ, ಮಿಥ್ಯವೋ ತಿಳಿಯದೆ ಅದನ್ನು ಕಿವಿಯಿಂದ ಕಿವಿಗೆ ಮಸಾಲೆ ಹಾಕಿ ರವಾನಿಸೋದು ಇಲ್ಲಿ ದೊರೆಯುವ ಸಂತೋಷ ಅನ್ನಿಸುತ್ತೆ. ಈಗಿನ ಸಾಮಾಜಿಕ ಜಾಲತಾಣಗಳ ಜಗತ್ತಿನಲ್ಲಿ ಇದು ಇನ್ನೂ ವೇಗವಾಗಿ ಹಬ್ಬುತ್ತಿದೆ. ಕೆಲವೊಮ್ಮೆ ಇದು ಕೆಲವರ ಜೀವನವನ್ನೇ ಹಾಳು ಮಾಡಿದ ಉದಾಹರಣೆಗಳೂ ಇವೆ. ಊಹಾಪೋಹಗಳ ಎಲ್ಲ ರೂಪಗಳನ್ನು ತಿಳಿಸುತ್ತದೆ ಕಮಲಾಕ್ಷಿ ಮ್ಯಾಡಮ್ ರವರ ಲೇಖನ. ಧನ್ಯವಾದಗಳು.

ಇಲ್ಲಿಯವರೆಗೆ ತಾಳ್ಮೆಯಿಂದ ಕೇಳಿಸಿಕೊಂಡ ಎಲ್ಲರಿಗೂ ಧನ್ಯವಾದಗಳು. ಎಲ್ಲ ಸದಸ್ಯರನ್ನು ನೆನೆಯುತ್ತಾ ನಮಸ್ಕರಿಸುತ್ತ ನನ್ನ ನುಡಿಯನ್ನು ಮುಗಿಸುತ್ತೇನೆ. ಸಾಭಾರ ನಮನಗಳು.

***